
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಮಾರ್ಚ್ 5 ಬುಧವಾರ 2025
ಸಂಪುಟ: 45 | ಸಂಚಿಕೆ: 315 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಖಾಸಗಿ ಬಡಾವಣೆ ನಿರ್ಮಾಣಕ್ಕೆ ಇನ್ನು ಸರ್ಕಾರದ ಅನುಮತಿ ಕಡ್ಡಾಯ

● ಇದುವರೆಗೆ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರದ ಅನುಮತಿಯಷ್ಟೇ ಅವಶ್ಯಕವಾಗಿತ್ತು; ಇನ್ನು ಮುಂದೆ ಸರ್ಕಾರದ ಅನುಮತಿಯೂ ಬೇಕೆ ಬೇಕು ● ಮೂಲಸೌಕರ್ಯ ಕಲ್ಪಿಸದೇ ನಿವೇಶನ ಪಡೆದವರು, ಸರ್ಕಾರಕ್ಕೆ ವಂಚಿಸುವುದಕ್ಕೆ ಬ್ರೇಕ್ ಹಾಕಲು ಈ ಕ್ರಮ; ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್

ಬೆಂಗಳೂರು, ಮಾ.4(ಕೆಎಂಶಿ)–ರಾಜ್ಯದ ಯಾವುದೇ ಮೂಲೆಯಲ್ಲಿ ಖಾಸಗಿಯವರು ವಸತಿ ಬಡಾವಣೆ ನಿರ್ಮಾಣ ಮಾಡುವುದಾದರೆ ಇನ್ನು ಮುಂದೆ ಸರ್ಕಾರದ ಅನುಮತಿ ಕಡ್ಡಾಯ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಆದೇಶ ಮಾಡಿದ್ದಾರೆ.

ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಯಾರೇ ಬಡಾವಣೆ ನಿರ್ಮಿಸಲು ಮುಂದಾದರೆ, ಅಂತಹವರು ಸ್ಥಳೀಯ ಪ್ರಾಧಿಕಾರದ ಜೊತೆಗೆ ಸರ್ಕಾರದ ಅನುಮತಿ ಪಡೆಯುವುದೂ ಅಗತ್ಯ ಎಂದಿದ್ದಾರೆ. ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಿ ಮೂಲಸೌಕರ್ಯ ಕಲ್ಪಿಸದೆ, ನಿವೇಶನ ಪಡೆದವರಿಗೆ ಮತ್ತು ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾರೆ. ನಿವೇಶನ ಪಡೆದವರು ಮೂಲ ಸೌಕರ್ಯಕ್ಕಾಗಿ ಬಡಾವಣೆ ನಿರ್ಮಾಣ ಮಾಡಿದವರನ್ನು ಕೇಳದೆ, ಸರ್ಕಾರದ ಮೊರೆ ಹೋಗುತ್ತಾರೆ. ಹಾಗಾಗಿ ಹೊಸ ಬಡಾವಣೆಗಳು ಅವ್ಯವಸ್ಥೆಯ ಆಗರಗಳಾಗಿವೆ. ಇದನ್ನು ತಪ್ಪಿಸಲು ಅಕ್ರಮ–ಸಕ್ರಮಕ್ಕೆ ಸರ್ಕಾರ ಮುಂದಾಗಿದೆ. ಇನ್ನು ಮುಂದೆ ಯಾವುದೇ ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಅನುಮತಿ ಪಡೆಯಬೇಕೆಂಬ ಆದೇಶ ಮಾಡಿದ್ದೇವೆ. ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ನಗರ ಯೋಜನಾ ಪ್ರಾಧಿಕಾರಗಳ ಸಭೆ ಉದ್ದೇಶಿಸಿ ಈ ಆದೇಶ ಮಾಡಿರುವ ಸಚಿವರು, ಭೂಸ್ವಾಧೀನ ಮಾಡಿಕೊಂಡು ಪ್ರಾಧಿಕಾರದ ವತಿಯಿಂದಲೇ ಹೊಸ ಬಡಾವಣೆಗಳನ್ನು ಕೈಗೆತ್ತಿಕೊಳ್ಳಿ ಎಂದರು. ಭೂಮಿ ಖರೀದಿಸಿ ಬಡಾವಣೆ ನಿರ್ಮಿಸಲು ಖಾಸಗಿಯವರಿಗೆ ಸಾಧ್ಯವಾಗುತ್ತಿರುವಾಗ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಏಕೆ ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳನ್ನು ತರಾಟೆಗೆ ■ 6ನೇ ಪುಟಕ್ಕೆ



ಬೈರತಿ ಸುರೇಶ್

ಕೃಷಿ ಪಂಪ್‌ಸೆಟ್‌ಗಳಿಗೆ ಏಳು ಗಂಟೆ ವಿದ್ಯುತ್ ಪೂರೈಕೆ

● ಈ ಅವಧಿಯಲ್ಲಿ ಕಡಿತವಿಲ್ಲ; ಇಂಧನ ಸಚಿವ ಕೆ.ಜೆ.ಜಾರ್ಜ್ ಸ್ಪಷ್ಟನೆ
● ಗ್ರಾಮೀಣ ಪ್ರದೇಶಕ್ಕೆ ನಿರಂತರ ಸಿಂಗಲ್ ಫೇಸ್ ವಿದ್ಯುತ್ ಸರಬರಾಜು





ಬೆಂಗಳೂರು, ಮಾ.4(ಕೆಎಂಶಿ)–ಪ್ರಸಕ್ತ ಬೇಸಿಗೆಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಏಳು ಗಂಟೆ ವಿದ್ಯುತ್ ಪೂರೈಕೆಯಲ್ಲಿ ಕಡಿತವಿಲ್ಲ. ಗ್ರಾಮೀಣ ಭಾಗದಲ್ಲಿ ನಿರಂತರ 24 ಗಂಟೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಲಾಗುವುದು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಸಿದ್ದು ಸವದಿ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಅಗಾಧ ಪ್ರಮಾಣದ ವಿದ್ಯುತ್ ಬೇಡಿಕೆ ಇದ್ದರೂ, ಕೃಷಿ ಹಾಗೂ ಶಿಕ್ಷಣ ಕಲಿಕೆಗೆ ಯಾವುದೇ ಕಾರಣಕ್ಕೂ ಕಡಿತ ಮಾಡುವುದಿಲ್ಲ.

ಏಪ್ರಿಲ್, ಮೇನಲ್ಲಿ ಬೇಡಿಕೆ 19,000 ಮೆಗಾ ವ್ಯಾಟ್ ತಲುಪಬಹುದೆಂಬ ನಿರೀಕ್ಷೆ ಇದೆ. ಅದನ್ನು ಗಮನದಲ್ಲಿಟ್ಟುಕೊಂಡು ನಾವು ಪೂರೈಕೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ. ವಿದ್ಯುತ್ ಪೂರೈಕೆ ಒತ್ತಡದಿಂದ ಕೆಲವು ಬಾರಿ ತಾತ್ಕಾಲಿಕವಾಗಿ ಸರಬರಾಜಿನಲ್ಲಿ ಅಡಚಣೆ ಉಂಟಾಗಬಹುದೇ ಹೊರತು, ಉಳಿದ ಯಾವುದೇ ಸಂದರ್ಭದಲ್ಲಿ ವಿದ್ಯುತ್ ಕಡಿತವಾಗಲೀ, ಲೋಡ್‌ಶೆಡ್ಡಿಂಗ್ ಆಗಲೀ ಮಾಡುವುದಿಲ್ಲ. ಶಾಸಕರು ತಮ್ಮ ತಮ್ಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಹಿರಿಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕ ಇಟ್ಟುಕೊಳ್ಳಿ, ಎಲ್ಲಿ ಏನೇ ಸಮಸ್ಯೆ ಉದ್ಭವಿಸಿದರೂ, ತಕ್ಷಣ ಅವರ ಗಮನಕ್ಕೆ ತಂದು ಪರಿಹರಿಸಿ ಎಂದು ಮನವಿ ಮಾಡಿದರು. ಕಳೆದ ವರ್ಷ ರಾಜ್ಯದಲ್ಲಿ ಉತ್ತಮ ಮಳೆಯಾಗಿ ಎಲ್ಲಾ ಜಲಾಶಯಗಳು ಭರ್ತಿಯಾಗಿ ಬೇಸಿಗೆಯಲ್ಲೂ ಅಣೆಕಟ್ಟೆಗಳು ಶೇಕಡ 70ರಷ್ಟು ನೀರಿನ ಸಂಗ್ರಹ ಹೊಂದಿವೆ. ಸಂಗ್ರಹಿತ ನೀರನ್ನು ಬೇಸಿಗೆಯಲ್ಲಿ ಕೃಷಿಗೆ ಮತ್ತು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳಲು ತೀರ್ಮಾನಿಸಿದೆ.

'ಬಿ' ಖಾತಾ ಅಭಿಯಾನದಿಂದ 55 ಲಕ್ಷ ಮನೆ, ನಿವೇಶನಗಳಿಗೆ ದಾಖಲೆ

ಬೆಂಗಳೂರು: ನಗರ–ಪಟ್ಟಣ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಅನಧಿಕೃತ ನಿವೇಶನಗಳಿಗೆ, ಮನೆಗಳಿಗೆ ಒಂದು ಬಾರಿ 'ಬಿ' ಖಾತೆ ಮಾಡಿಕೊಡುವ ನಿರ್ಧಾರ ಐತಿಹಾಸಿಕ ಎಂದು ಸಚಿವ ರಹೀಂ ಖಾನ್, ಸಚಿವ ಬೈರತಿ ಸುರೇಶ್ ಬಣ್ಣಿಸಿದರು. ವಿಧಾನಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ಉತ್ತರಿಸಿದ ಸಚಿವ ಬೈರತಿ ಸುರೇಶ್, ರಾಜ್ಯದಲ್ಲಿ ನಗರ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಬರುವ 55 ಲಕ್ಷ ಮನೆಗಳಿಗೆ ಬಿ ಖಾತೆಗಳೇ ಇರಲಿಲ್ಲ. ಹೀಗಾಗಿ ನಮ್ಮ ಸರ್ಕಾರ 'ಬಿ' ಖಾತೆ ಕೊಡುವ ಕೆಲಸ ಮಾಡುತ್ತಿದೆ. ಈ ನಿಯಮದಿಂದ ■ 6ನೇ ಪುಟಕ್ಕೆ

ಮುಡಾ ಪ್ರಕರಣ: ಸ್ನೇಹಮಯಿ ಕೃಷ್ಣ ವಿಭಾಗೀಯ ಪೀಠದ ಮೊರೆ
ಸಿಎಂ ಸಿದ್ದರಾಮಯ್ಯರಿಗೆ ಮತ್ತೆ ತಲೆ ಬಿಸಿ



ಕೃಷ್ಣ

ಮೈಸೂರು, ಮಾ.4–ಮುಖ್ಯಮಂತ್ರಿ ಸಿದ್ದರಾಮಯ್ಯ ಒಳಗೊಂಡ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆ ಹಗರಣದ ದೂರುದಾರ ಸ್ನೇಹಮಯಿ ಕೃಷ್ಣ ಕಾನೂನು ಸಮರ ಮುಂದುವರೆಸಿದ್ದಾರೆ. ಇದೀಗ ಮುಡಾ ನಿವೇಶನ ಹಂಚಿಕೆ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಒತ್ತಾಯಿಸಿ ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ. ಸಿಬಿಐ ತನಿಖೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಇತ್ತೀಚೆಗೆ ಹೈಕೋರ್ಟ್ ಏಕಸದಸ್ಯ ಪೀಠ ವಜಾಗೊಳಿಸಿದ ಬಳಿಕ ಕೊಂಚ ನಿರಾಳವಾಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮತ್ತೆ ಟೆನ್ಷನ್ ಶುರುವಾದಂತಾಗಿದೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ಗೆ ಭಾರತ

ಬಲಾಢ್ಯ ಆಸ್ಟ್ರೇಲಿಯಾವನ್ನು 4 ವಿಕೆಟ್‌ಗಳಿಂದ ಮಣಿಸಿದ ಟೀಂ ಇಂಡಿಯಾ



ದುಬೈ, ಮಾ.4–ವಿರಾಟ್ ಕೊಹ್ಲಿ ಅವರ ಸಮಯೋಚಿತ ಅರ್ಧಶತಕದ ನೆರವಿನಿಂದ ಭಾರತ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧದ ಐಸಿಸಿ ಚಾಂಪಿಯನ್ಸ್ ಟ್ರೋಫಿಯ ಮೊದಲ ಸೆಮಿಫೈನಲ್ ಪಂದ್ಯದಲ್ಲಿ 4 ವಿಕೆಟ್‌ಗಳ ಭರ್ಜರಿ ಜಯ ಗಳಿಸಿದೆ.

ಆ ಮೂಲಕ ಫೈನಲ್‌ಗೆ ಲಗ್ಗೆ ಹಾಕಿದ್ದು, ನಾಳೆ (ಮಾ.5) ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾ ನಡುವೆ ನಡೆಯಲಿರುವ ಮತ್ತೊಂದು ಸೆಮಿಫೈನಲ್ ಪಂದ್ಯದಲ್ಲಿ ಜಯಗಳಿಸುವ ತಂಡ ಮಾ.9ರಂದು ದುಬೈನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ಭಾರತದ ವಿರುದ್ಧ ಆಡಲಿದೆ.

ಅಲ್ಲದೇ 14 ವರ್ಷಗಳ ಬಳಿಕ ಐಸಿಸಿ ನಾಕೌಟ್ ಫೋಬಿಯಾದಿಂದಲೂ ಹೊರಬಂದ ಟೀಂ ಇಂಡಿಯಾ, ಸತತ ಮೂರನೇ ಬಾರಿಗೆ ಫೈನಲ್ ತಲುಪಿದ ಸಾಧನೆ ಮಾಡಿದೆ. ಒಟ್ಟಾರೆ ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲೇ ಐದನೇ ಸಲ ಫೈನಲ್‌ಗೆ ಲಗ್ಗೆ ಇಟ್ಟಿದೆ. 2002 ಹಾಗೂ 2013ನೇ ಸಾಲಿನಲ್ಲಿ ಭಾರತ ಚಾಂಪಿಯನ್ ಪಟ್ಟ ಅಲಂಕರಿಸಿದ್ದರೆ ■ 6ನೇ ಪುಟಕ್ಕೆ



ಮೈಸೂರು ಮಿತ್ರ ಬುಧವಾರ 5 ಮಾರ್ಚ್ 2025

ಕ್ಷಯಮುಕ್ತ ಭಾರತಕ್ಕೆ ಎಲ್ಲರೂ ಕೈಜೋಡಿಸಿ

ನಿಕ್ಷಯ್ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಸಲಹೆ



ಕಿದ್ವಾಯಿ ಸಂಸ್ಥೆಯ ಮಾಜಿ ನಿರ್ದೇಶಕರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರು ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಕೇಂದ್ರಗಳು ಹೊರತಂದಿರುವ 'ಆಯುಷ್4ಯು' ಎಂಬ ನಿಯತಕಾಲಿಕವನ್ನು ಬಿಡುಗಡೆ ಮಾಡಿದರು.

ಮೈಸೂರು, ಮಾ.4(ಆರ್‌ಕೆ)– ಭಾರತವನ್ನು ಕ್ಷಯಮುಕ್ತ ದೇಶವನ್ನಾಗಿ ಮಾಡಲು ಎಲ್ಲರೂ ಕೈಜೋಡಿಸಬೇಕೆಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಕರೆ ನೀಡಿದ್ದಾರೆ.

ಸರ್ಕಾರಿ ಆಯುರ್ವೇದ ಮೆಡಿಕಲ್ ಕಾಲೇಜಿನ ಸ್ವಸ್ಥ ವ್ರತ ಮತ್ತು ಯೋಗ ವಿಭಾಗ ಹಾಗೂ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರಗಳು ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದ ಸಹಯೋಗದೊಂದಿಗೆ ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ವಿಜ್ಞಾನ ಭವನದಲ್ಲಿ ಇಂದು ಆಯೋಜಿಸಿದ್ದ ನಿಕ್ಷಯ್ ಕುರಿತ ರಾಷ್ಟ್ರೀಯ ಕಾರ್ಯಾಗಾರ ಮತ್ತು ಯಕ್ಷ್ಮ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿದೆ. ಸ್ವಚ್ಛತೆ, ಶಿಸ್ತುಬದ್ಧ ಜೀವನ, ಆಹಾರ ಪದ್ಧತಿಗಳಿಂದಾಗಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾಗಿದೆ. ವೈದ್ಯೋ ನಾರಾಯಣ ಹರಿ ಎಂಬಂತೆ ವೈದ್ಯರನ್ನು ದೇವರೆಂದು ಕರೆಯಲಾಗುತ್ತಿದೆ. ಆದ್ದರಿಂದ ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಜನರ ಆರೋಗ್ಯ ಮತ್ತು ಸಮಾಜದ ಸ್ವಾಸ್ಥ್ಯದ ಕಡೆ ಹೆಚ್ಚು ಗಮನಹರಿಸಿ ನಿಷ್ಠೆಯಿಂದ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಸಾಮಾನ್ಯವಾಗಿ ವಿದ್ಯಾವಂತರು, ಬುದ್ಧಿವಂತರೇ ಸ್ವಚ್ಛತೆಯನ್ನು ಕಾಪಾಡುವುದಿಲ್ಲ. ಸ್ವಚ್ಛತೆ ಎಂಬುದು ನಮ್ಮಿಂದಲೇ ಮೊದಲು ಆರಂಭವಾಗಬೇಕು. ನಂತರ ಇತರರಿಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಈ ಹಿಂದೆ ಕ್ಷಯರೋಗ ಬಹಳ ವ್ಯಾಪಕವಾಗಿತ್ತು. ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ ಸಂಶೋಧನಾ ಕೇಂದ್ರದಲ್ಲಿ ಪ್ರಗತಿ ಸಾಧಿಸಿರುವ ಕಾರಣ ಇಂದು ಕ್ಷಯರೋಗವನ್ನು ನಿಯಂತ್ರಿಸಲಾಗಿದೆ. ಆದರೆ ಸಂಪೂರ್ಣವಾಗಿ ಟಿಬಿ ನಿರ್ಮೂಲನೆಯಾಗಬೇಕಿರುವುದರಿಂದ ಕ್ಷಯಮುಕ್ತ ಭಾರತ ಅಭಿಯಾನಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಇದೇ ಸಂದರ್ಭ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಿದ್ವಾಯಿ ಸಂಸ್ಥೆಯ ಮಾಜಿ ನಿರ್ದೇಶಕರಾದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರು ಆಯುರ್ವೇದ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಕೇಂದ್ರಗಳು ಹೊರತಂದಿರುವ 'ಆಯುಷ್4ಯು' ಎಂಬ ನಿಯತಕಾಲಿಕವನ್ನು ಬಿಡುಗಡೆ ಮಾಡಿದರು. ಇದೇ ವೇಳೆ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರಿಗೆ 'ಅಭಿನವ ಧನ್ವಂತರಿ' ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಕೆ.ಎಸ್. ರಾಮಕೃಷ್ಣ ರಾಮರಾವ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ.ಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿದರೆ, ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಗುರುಬಸವರಾಜು ಅವರು, ಡಾ.ವಿಜಯಲಕ್ಷ್ಮಿ ದೇಶಮಾನೆ ಅವರ ಅಭಿನಂದನಾ ನುಡಿಗಳನ್ನಾಡಿದರು. ಗೋಪಾಲಗೌಡ ಸ್ಮಾರಕ ನರರೋಗ ಆಸ್ಪತ್ರೆ ಮುಖ್ಯಸ್ಥರಾದ ಡಾ.ಸುಶ್ರುತಗೌಡ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಲಕ್ಷ್ಮಿ ನಾರಾಯಣ ಶೆಣೈ, ಮೈಸೂರು ವಿಶ್ವವಿದ್ಯಾನಿಲಯದ ಸಸ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ರಾಜಕುಮಾರ್ ಹೆಚ್.ಗರಂಪಲ್ಲಿ, ಅಪೋಲೋ ಬಿಜಿಎಸ್ ಆಸ್ಪತ್ರೆಯ ಹಿರಿಯ ಪಲ್ಮನಾಲಜಿಸ್ಟ್ ಡಾ.ಕೆ.ಮಧು, ಡಾ.ಕೆ.ವಿ. ವೆಂಕಟಕೃಷ್ಣ ಹಾಗೂ ಡಾ.ಸುದೇಂದ್ರ ನವಲೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಭಾರತ ಸರ್ಕಾರದ ಆಯುಷ್ ಉಪಮಹಾನಿರೀಕ್ಷಕ ಡಾ.ಎ.ರಘು ಹಾಗೂ ಎನ್‌ಸಿಐಸಿಎಂ ಆಯುರ್ವೇದ ಮಂಡಳಿ ಅಧ್ಯಕ್ಷ ಡಾ.ಬಿ.ಎಸ್.ಪ್ರಸಾದ್ ಅವರು ಆನ್‌ಲೈನ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಯಕ್ಷ್ಮ ಸಂವಾದ ಕುರಿತಂತೆ ಮಾತನಾಡಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಕೊಡಮಾಡುವ ಪಿ.ರಾಮಯ್ಯ ವಾರ್ಷಿಕ ದತ್ತಿ ಪ್ರಶಸ್ತಿಗೆ ಭಾಜನರಾಗಿರುವ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಮುಖ್ಯ ವರದಿಗಾರ ಎಸ್.ಟಿ.ರವಿಕುಮಾರ್ ಅವರನ್ನು ಪದ್ಮಶ್ರೀ ಪುರಸ್ಕೃತ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರು ಇದೇ ವೇಳೆ ಸನ್ಮಾನಿಸಿದರು.

ಸ್ಪೆಕ್ಟ್ರಾ–2025; ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಐಟಿ–ಸಾಂಸ್ಕೃತಿಕ ಕಾರ್ಯಕ್ರಮ



ಡಾ.ಕೆ.ಸಿ.ಜಿ.ವರ್ಗೀಸ್ ಸ್ಮರಣಾರ್ಥ ಅಂತರ ಕಾಲೇಜು ಟ್ರೋಫಿ ವಿತರಿಸಲಾಯಿತು.

ಮೈಸೂರು, ಮಾ. 4– ಹಿಂದೂಸ್ಥಾನ್ ಸಮೂಹ ಸಂಸ್ಥೆಗಳ ಅಂಗಸಂಸ್ಥೆಯಾದ ಹಿಂದೂಸ್ಥಾನ್ ಕಾಲೇಜು ವತಿಯಿಂದ ಸ್ಪೆಕ್ಟ್ರಾ–2025, ಡಾ.ಕೆ.ಸಿ.ಜಿ.ವರ್ಗೀಸ್ ಸ್ಮರಣಾರ್ಥ ಅಂತರ ಕಾಲೇಜು ಟ್ರೋಫಿ ಮತ್ತು ರಾಷ್ಟ್ರೀಯ ಮಟ್ಟದ ಅಂತರಕಾಲೇಜು ನಿರ್ವಹಣೆ, ಐಟಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ರಾಷ್ಟ್ರಾದ್ಯಂತ 51 ಕಾಲೇಜುಗಳಿಂದ 705 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ಮಂಟೇಲಿಂಗು ಉದ್ಘಾಟಿಸಿದರು.

ಹಿಂದೂಸ್ಥಾನ್ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ.ಆನಂದ್ ಜಾಕೋಬ್ ವರ್ಗೀಸ್, ಬಯೋಕಾನ್‌ಫಾರ್ಮ್ಯಾಟಿಕ್ಸ್ ಪ್ರೈ ಲಿಮಿಟೆಡ್ ಸಿಇಒ ಡಾ.ಎಂ. ಧರ್ಮ ಪ್ರಸಾದ್, ಮೈಸೂರಿನ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಹಿರಿಯ ಪ್ರಾದೇಶಿಕ ವ್ಯವಸ್ಥಾಪಕ ಪ್ರಕಾಶ್ ಭಾಗವಹಿಸಿದ್ದರು. ಸ್ಪರ್ಧೆಗಳಲ್ಲಿ ವಿಜೇತರಾದವರು ಮತ್ತು ದ್ವಿತೀಯ ಸ್ಥಾನ ಪಡೆದವರಿಗೆ ಒಟ್ಟು 1 ಲಕ್ಷ ರೂ. ಮೌಲ್ಯದ ಬಹುಮಾನ ವಿತರಿಸಲಾಯಿತು. ಬೆಂಗಳೂರಿನ ಆರ್‌ಎನ್‌ಎಸ್ ಕಾಲೇಜು, ಚಾಂಪಿಯನ್ ಶಿಪ್ ಪಡೆದರೆ, ಮೈಸೂರಿನ ಸೇಪಿಯಂಟ್ ಕಾಲೇಜು, ದ್ವಿತೀಯ ಸ್ಥಾನ ಪಡೆಯಿತು. ಭಾಗವಹಿಸಿದ್ದವರಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು.

ನೈಋತ್ಯ ರೈಲ್ವೆ ವಲಯದ ನೂತನ ಪ್ರಧಾನ ವ್ಯವಸ್ಥಾಪಕರಾಗಿ ಮುಕುಲ್ ಸರನ್ ಮಾಥೂರ್ ಅಧಿಕಾರ ಸ್ವೀಕಾರ



ಮೈಸೂರು, ಮಾ.4–ಮುಕುಲ್ ಸರನ್ ಮಾಥೂರ್ ಅವರು ನೈಋತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಾಗಿ ಅಧಿಕಾರ ವಹಿಸಿಕೊಂಡರು. ಅವರು 1988ರ ಬ್ಯಾಚಿನ ಭಾರತೀಯ ರೈಲ್ವೆ ಸಂಚಾರ ಅಧಿಕಾರಿಯಾಗಿದ್ದು, ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಮತ್ತು ಗುರ್ಗಾಂವ್ ಮ್ಯಾನೇಜ್ಮೆಂಟ್ ಡೆವಲಪ್‌ಮೆಂಟ್ ಇನ್ಸ್ಟಿಟ್ಯೂಟ್‌ನಿಂದ ವ್ಯವಹಾರ ನಿರ್ವಹಣೆಯಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಪಡೆದಿದ್ದಾರೆ. ಅವರು ಈ ಮೊದಲು, ರೈಲ್ವೆ ಮಂಡಳಿಯ ಹೆಚ್ಚುವರಿ ವಾಣಿಜ್ಯ ಸದಸ್ಯರಾಗಿದ್ದರು.

ಮೂರು ದಶಕಗಳಿಂದ ತಮ್ಮ ವೃತ್ತಿ ಜೀವನದಲ್ಲಿ ಅವರು ಕೇಂದ್ರ ರೈಲ್ವೆ, ಉತ್ತರ ರೈಲ್ವೆ, ಪೂರ್ವ ಕರಾವಳಿ ರೈಲ್ವೆ, ಪಶ್ಚಿಮ ಮಧ್ಯ ರೈಲ್ವೆ ಮತ್ತು ರೈಲ್ವೆ ಮಂಡಳಿಯ ವಿವಿಧ ಸ್ಥಾನಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಅವರು ಅಂತರರಾಷ್ಟ್ರೀಯ ರೈಲ್ವೆ ಒಕ್ಕೂಟದ ಏಷ್ಯಾ ಕಚೇರಿಯ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದಾರೆ ಮತ್ತು ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ರೈಲು ಅಭಿವೃದ್ಧಿಗೆ ಕೊಡುಗೆ ನೀಡಿದ್ದಾರೆ.

2005ರಲ್ಲಿ ರೈಲ್ವೆ ಸಚಿವ ಎಂ.ಆರ್. ಪ್ರಶಸ್ತಿ, 2018ರಲ್ಲಿ ರೈಲ್ವೆ ಸಚಿವರಿಂದ ಚೇಂಜ್ ಏಜೆಂಟ್ ಪ್ರಶಸ್ತಿ ಮತ್ತು 2019ರಲ್ಲಿ ರೈಲ್ವೆ ಸಚಿವರಿಂದ ಲೀಡರ್‌ಶಿಪ್ ಎಕ್ಸಲೆನ್ಸ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ...



ಹಾಸನ ಜಿಲ್ಲೆ ಚನ್ನರಾಯಪಟ್ಟಣದ ನವೋದಯ ವಿದ್ಯಾ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಜಿಲ್ಲಾ ಪತ್ರಿಕಾ ವಿತರಕರ ಒಕ್ಕೂಟ, ತಾಲೂಕು ಪತ್ರಿಕಾ ವಿತರಕರ ಒಕ್ಕೂಟ, ಚನ್ನರಾಯಪಟ್ಟಣ ಸಹಯೋಗದೊಂದಿಗೆ ನಡೆದ ರಾಜ್ಯದ ಪ್ರಪ್ರಥಮ ಪತ್ರಿಕಾ ವಿತರಕರ ಜಿಲ್ಲಾ ಸಮ್ಮೇಳನದಲ್ಲಿ ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ ನೇತೃತ್ವದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜವರಪ್ಪ ಹಾಗೂ ಸಂಘದ ಪದಾಧಿಕಾರಿಗಳಾದ ಉಪಾಧ್ಯಕ್ಷ ಎಂ.ನಾಗರಾಜು, ಪ್ರಧಾನ ಕಾರ್ಯದರ್ಶಿ ಸಿ.ಶಿವಣ್ಣ, ಪತ್ರಿಕಾ ಕಾರ್ಯದರ್ಶಿ ಹೆಚ್.ಕಾಂತ, ರಮೇಶ್, ಜಯಚಂದ್ರ, ಎಪಿಎಸ್ ರಾಜು, ನಂಜುಂಡಯ್ಯ, ಹರಿರಾವ್ ಇನ್ನಿತರರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ, ವಿಜಯವಾಣಿ ಸ್ಥಾನಿಕ ಮುಖ್ಯಸ್ಥ ಸತ್ಯನಾರಾಯಣ ಇನ್ನಿತರರು ಉಪಸ್ಥಿತರಿದ್ದರು.

ಶುಲ್ಕ ಮರುಪಾವತಿ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಮಾ.4–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಕೋರ್ಸುಗಳಾದ ಸ್ನಾತಕೋತ್ತರ ಪದವಿ, ವೃತ್ತಿಪರ ಪದವಿ ಮತ್ತು ವೃತ್ತಿಪರ ಸ್ನಾತಕೋತ್ತರ ಪದವಿ ಕೋರ್ಸುಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ "ಶುಲ್ಕ ಮರುಪಾವತಿ" ಕಾರ್ಯಕ್ರಮದ ಸೌಲಭ್ಯಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 15ರವರೆಗೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು www. https:ssp.postmatric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗೆ www.https: bcwd.karnataka.gov.inಅನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂ.ಸಂ. 8050770005, ಇ–ಮೇಲ್ bcwdhelpline@gmail.com, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್ post matric help@karanataka. gov.in ದೂ.ಸಂ: 1902 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಮಾ.4–ಮಾರ್ಚ್ 5ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ವಿಜಯನಗರ 4ನೇ ಹಂತ, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ಬೆಳವಾಡಿ, ಬಸವನಪುರ, ಮರಟಿಕ್ಯಾತನಹಳ್ಳಿ, ಪಂಚಚಾರ್ಯ್ಯ ಲೇಔಟ್, ಕೆ.ಹೆಮ್ಮನಹಳ್ಳಿ, ಲಿಂಗದೇವರಕೊಪ್ಪಲು, ಇಲವಾಲ, ಹೂಟಗಳ್ಳಿ ಕೆಆರ್‌ಎಸ್ ರೋಡ್, ಆದಿತ್ಯಾ ಬಡಾವಣೆ, ಎಸ್‌ಆರ್‌ಎಸ್ ಕಾಲೋನಿ, ಕೂರ್ಗಳ್ಳಿ ಗ್ರಾಮ, ಎನ್‌ಹೆಚ್‌ಬಿ ಕಾಲೋನಿ, ಬೆಳವಾಡಿ ಕೈಗಾರಿಕಾ ಪ್ರದೇಶ, ಶಾಹಿ ಗಾರ್ಮೆಂಟ್ಸ್, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನಿಚರ್ಸ್ ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿನಕಲ್, ಎಸ್‌ವಿಇಐ ಕಾಲೇಜು ಸುತ್ತಮುತ್ತ, ಜಟ್ಟಿಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ಡಿ.ಎಂ.ಜಿ.ಹಳ್ಳಿ, ಕಮರಹಳ್ಳಿ, ಮಾಣಿಕ್ಯಪುರ, ದೊಡ್ಡಹಟ್ಟಿಹುಂಡಿ, ಮರಿಯ್ಯನಹುಂಡಿ, ಕಟ್ಟೆಹುಂಡಿ, ಶೆಟ್ಟಿನಾಯಕನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಪ್ರದೇಶಗಳು. ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಮುಖ್ಯರಸ್ತೆ, ಯುನಿವರ್ಸಿಟಿ ಕ್ವಾಟ್ರರ್ಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿರಸ್ತೆ ಮುರಗನ್ ಮೆಡಿಕಲ್ಸ್‌ಯಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5ರಿಂದ 16ನೇ ಮೇನ್, ಪಡುವರಾಹಳ್ಳಿ, ಡಿಸಿ ರೆಸಿಡೆನ್ಸಿ, ರಿಜನಲ್ ಕಮಿಷನರ್ ಆಫೀಸ್, ಸಿಎಫ್‌ಟಿಆರ್‌ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯರಸ್ತೆ, ವಾಗ್ದೇವಿನಗರ, ಜೆಸಿ ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಲ್ಲಾ ಪಂಚಾಯತ್ ಕಚೇರಿ, ಕೋರ್ಟ್, ಅರಸು ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂ ಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ.ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆಎಲ್‌ಬಿ ರಸ್ತೆ, ಜಯಲಕ್ಷ್ಮೀ ವಿಲಾಸ್, ಜಿಲ್ಲಾ ಪಂಚಾಯತ್ ಕಚೇರಿ, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೊಟೇಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕಾಂ ಪ್ರಕಟಣೆ ತಿಳಿಸಿದೆ.

ಪಶ್ಚಿಮಬಂಗಾಳದಲ್ಲಿ ವಿದ್ಯಾರ್ಥಿಗಳ ಮೇಲೆ ದಾಳಿ ಖಂಡಿಸಿ

ಮೈಸೂರಲ್ಲಿ ಅಖಿಲ ಭಾರತ ಪ್ರತಿಜ್ಞಾ ದಿನ ಆಚರಣೆ



ವಿದ್ಯಾರ್ಥಿಗಳ ಮೇಲೆ ಪಶ್ಚಿಮಬಂಗಾಳ ಸರ್ಕಾರ ನಡೆಸಿದ ದಾಳಿ ಖಂಡಿಸಿ ಮಹಾರಾಜ ಹಾಗೂ ಯುವರಾಜ ಕಾಲೇಜಿನಲ್ಲಿ ಅಖಿಲ ಭಾರತ ಪ್ರತಿಜ್ಞಾ ದಿನ ಆಚರಿಸಲಾಯಿತು.

ಮೈಸೂರು, ಮಾ.4(ಜಿಎ)–ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ಪಶ್ಚಿಮಬಂಗಾಳ ಸರ್ಕಾರ ನಡೆಸಿದ ದಾಳಿ ಖಂಡಿಸಿ ಎಐಡಿಎಸ್‌ಒ ವತಿಯಿಂದ ಮಹಾರಾಜ ಹಾಗೂ ಯುವರಾಜ ಕಾಲೇಜಿನಲ್ಲಿ ಅಖಿಲ ಭಾರತ ಪ್ರತಿಜ್ಞಾ ದಿನ ಆಚರಿಸಲಾಯಿತು.

ಪಶ್ಚಿಮಬಂಗಾಳದ ಜಾಧವಪುರ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಚುನಾವಣೆ ನಡೆಸಲು ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ, ಅಲ್ಲಿನ ಶಿಕ್ಷಣ ಮಂತ್ರಿ ಕಾರು ಹರಿಸಿದ್ದಾರೆ. ಎಐಡಿಎಸ್‌ಒನ ಪಶ್ಚಿಮಬಂಗಾಳ ರಾಜ್ಯ ಸಮಿತಿ ಸೋಮವಾರ ರಾಜ್ಯವ್ಯಾಪಿ ಕಾಲೇಜು ಮತ್ತು ವಿಶ್ವವಿದ್ಯಾಲಯ ಬಹಿಷ್ಕಾರಕ್ಕೆ ಕರೆ ನೀಡಿತ್ತು. ಪಶ್ಚಿಮಬಂಗಾಳದ ವಿದ್ಯಾರ್ಥಿ ಸಮುದಾಯ ಈ ಕರೆಗೆ ಓಗೊಟ್ಟು ಯಶಸ್ವಿಯಾಗಿ ನಡೆಸಿದ್ದಾರೆ. ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು. ಕ್ಯಾಂಪಸ್‌ಗಳಲ್ಲಿ ಬೆದರಿಕೆ ಮತ್ತು ಭ್ರಷ್ಟಾಚಾರದ ಸಂಸ್ಕೃತಿಗೆ ಅಂತ್ಯ ಹಾಡಬೇಕೆಂದು ಆಗ್ರಹಿಸಿದರು.

ಪಶ್ಚಿಮಬಂಗಾಳದಲ್ಲಿ ಪರೀಕ್ಷಾರ್ಥಿಗಳನ್ನು ಹೊರತುಪಡಿಸಿ, ವಿದ್ಯಾರ್ಥಿಗಳು ಎಲ್ಲಾ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ತರಗತಿಗಳನ್ನು ಸ್ವಯಂಪ್ರೇರಿತರಾಗಿ ಬಹಿಷ್ಕರಿಸಿ ಬೆಂಬಲ ನೀಡಿದ್ದಾರೆ. ಈ ಮಧ್ಯೆ, ಆಡಳಿತ ಪಕ್ಷದ, ವಿದ್ಯಾರ್ಥಿಗಳ ಮೇಲೆ ಟಿಎಂಸಿಪಿ, ಟಿಎಂಸಿ ಬೆಂಬಲಿತ ಗೂಂಡಾಗಳೊಂದಿಗೆ ಹಲವಾರು ಸ್ಥಳಗಳಲ್ಲಿ ಪ್ರತಿಭಟನಾನಿರತ ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿದೆ. ಅಲ್ಲಿನ ಪೊಲೀಸರು ಸಹ ಟಿಎಂಸಿಪಿಯೊಂದಿಗೆ ಈ ಕೃತ್ಯದಲ್ಲಿ ಕೈ ಜೋಡಿಸಿರುವುದು ದುರಂತ ಎಂದು ಕಿಡಿಕಾರಿದರು. ಈ ವೇಳೆ ಜಿಲ್ಲಾ ಕಾರ್ಯದರ್ಶಿ ನಿತಿನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜಾತಿಯ ಅಸ್ಪೃಶ್ಯ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಗಂಡು ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮೈಸೂರು ಇಲ್ಲಿಗೆ 8ನೇ ತರಗತಿಗಾಗಿ ಪ್ರವೇಶ ಪರೀಕ್ಷೆಯ ಮುಖಾಂತರ ಆಯ್ಕೆ ಮಾಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇಲ್ಲಿಗೆ ಮಾರ್ಚ್ 25ರೊಳಗೆ ಸಲ್ಲಿಸಬಹುದು. ಏಪ್ರಿಲ್ 12 ಬೆಳಿಗ್ಗೆ 10 ಗಂಟೆಗೆ ಪ್ರವೇಶ ಪರೀಕ್ಷೆಯನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ ಮೈಸೂರು ಇಲ್ಲಿ ನಡೆಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.


ಹಿರಿಯ ವಕೀಲ ಶಂಕರನಾರಾಯಣ ಇನ್ನಿಲ್ಲ



ಮೈಸೂರು, ಮಾ.4(ಆರ್‌ಕೆ)–ಮೈಸೂರಿನ ಜೆ.ಪಿ.ನಗರ ನಿವಾಸಿ, ಹಿರಿಯ ವಕೀಲ ಪಿ.ಹೆಚ್.ಶಂಕರನಾರಾಯಣ (90) ಅವರು ಇಂದು ಮುಂಜಾನೆ ನಿಧನರಾದರು. ಅವರು ಪುತ್ರ, ಅಪಾರ ಶಿಷ್ಯವೃಂದ ಹಾಗೂ ಬಂಧುವರ್ಗ ಅಗಲಿದ್ದಾರೆ. ಇಂದು ಸಂಜೆ ಮೈಸೂರಿನ ಚಾಮುಂಡಿ ಬೆಟ್ಟ ತಪ್ಪಲಿನ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿಯೂ ಆದ ಶಂಕರನಾರಾಯಣ, ಮೈಸೂರು ವಕೀಲರ ವಿವಿಧೋದ್ದೇಶ ಸಹಕಾರ ಸಂಘದ ಸಂಸ್ಥಾಪಕ ಅಧ್ಯಕ್ಷರೂ ಆಗಿದ್ದರು. ಸುಮಾರು 40 ವರ್ಷಗಳ ಕಾಲ ವಕೀಲಿ ವೃತ್ತಿ ನಿರ್ವಹಿಸಿದ್ದ ಅವರು ಹಲವು ಸಮಾಜಮುಖಿ ಕೆಲಸಗಳನ್ನು ಮಾಡಿದ್ದರು. ಅವರನ್ನು ವಿವಿಧ ಸಂಘ ಸಂಸ್ಥೆಗಳು ಸನ್ಮಾನಿಸಿದ್ದವು. ಶಂಕರನಾರಾಯಣ ಅವರ ನಿಧನಕ್ಕೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಲೋಕೇಶ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಖಾಜಿ ಅರ್ಷದ್ ಅಲಿ




ಮಾಜಿ ಎಂಎಲ್‌ಸಿ ಮತ್ತು ಬೀದರ್ ಕಿ ಆವಾಜ್ (ಹಿಂದಿ ಆವೃತ್ತಿ) ಮತ್ತು ಸುರ್ಖ್ ಜಮೀನ್ (ಉರ್ದು ಆವೃತ್ತಿ) ಮುಖ್ಯ ಸಂಪಾದಕರಾದ ಖಾಜಿ ಅರ್ಷದ್ ಅಲಿ ಸೋಮವಾರ (ಮಾ.3) ಸಂಜೆ ಹೃದಯಾಘಾತದಿಂದ ನಿಧನರಾದರು.

ಈ ಸಂಬಂಧ ಮಂಗಳವಾರ (ಮಾ. 4) ಜ಼ೋಹರ್ ಪ್ರಾರ್ಥನೆಯ (ಮಧ್ಯಾಹ್ನದ ಪ್ರಾರ್ಥನೆ) ನಂತರ ಮಸೀದಿ ಜಾಮಿಯ, ಬೀದರ್ ಇಲ್ಲಿ ನಮಾಜ಼್–ಎ–ಜನಾಜ಼ (ಅಂತ್ಯಕ್ರಿಯೆ ಪ್ರಾರ್ಥನೆ) ನಡೆಯಿತು. ನಂತರ ಸ್ವಗ್ರಾಮ ಬೀದರ್ ಜಿಲ್ಲೆಯ ಬಲಾಕಿ ಶೆಹರ್‌ನ ಮುಸ್ಲಿಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶಾಸಕ ತನ್ವೀರ್ ಸೇಠ್, ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಮೊಹಮ್ಮದ್ ಖೈಸರ್; ವಕ್ತಾರರಾದ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ; ಅಲ್‌ಹಾಜ್ ಆಸಿಫ್ ಅಹಮದ್ (ಬಂಡಿಪಾಳ್ಯ); ಕ್ವಾಜಾ ಮೊಹಮ್ಮದ್ ಮುಷೀರ್ ಚಿಸ್ಟಿ, ಅಧ್ಯಕ್ಷರು, ಚಿಸ್ಟಿಯ ಫೌಂಡೇಶನ್ ಗ್ರೂಪ್, ಮೈಸೂರು; ರದೀವುಲ್ಲಾ ಖಾನ್, ಪಿ.ಆರ್.ಓ., ಫಾರೂಖಿಯ ಡೆಂಟಲ್ ಕಾಲೇಜು; ಮಜೀದ್ ಅಹಮದ್ ಇತರರು ಮೃತರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.03.2025 ಬುಧವಾರ, ಮಳೆ ನಕ್ಷತ್ರ: ಪೂರ್ವಭಾದ್ರಾ 04.03.2025 ರಿಂದ 16.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30ರಿಂದ ಶ್ರೀ ವೇದವ್ಯಾಸ ಅಷ್ಟಾಕ್ಷರ ಮಂತ್ರ ಮಹಾಯಾಗ ಹಾಗೂ ಶ್ರೀ ಲಕ್ಷ್ಮೀನರಸಿಂಹಮಂತ್ರ ಹೋಮ ಮತ್ತು ಮನ್ಯುಸೂಕ್ತ ಹೋಮ, ಸ್ಥಳ: ಮಠದ ಪ್ರಾಂಗಣ, ಜಯಲಕ್ಷ್ಮೀಪುರಂ.

■ **ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ :** ಗುರು ವೈಭವೋತ್ಸವ–2025, ಬೆಳಗ್ಗೆ 7 ರಿಂದ ಶ್ರೀ ವಿಷ್ಣುಸಹಸ್ರನಾಮ ಹೋಮ, ಸ್ಥಳ: ಮಠದ ಪ್ರಾಂಗಣ, ಸುಬ್ಬರಾಯನಕೆರೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ರಿಂದ ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶ್ರೀ ಕ್ಷೇತ್ರ ದಂಡಿನಮಾರಮ್ಮ ದೇವಸ್ಥಾನ :** ಶ್ರೀ ಮನೆ ಮಂಚಮ್ಮ ದಂಡಿನಮಾರಮ್ಮ ಮತ್ತು ಬಿಸಿಲುಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ.

■ **ಎಟಿಎಂಇ ಇಂಜಿನಿಯರಿಂಗ್ ಕಾಲೇಜು :** ಭಾರತೀಯ ಜ್ಞಾನ ಪರಂಪರೆ ಕುರಿತು ರಾಜ್ಯ ಮಟ್ಟದ ಫ್ಯಾಕಲ್ಟಿ ಅಭಿವೃದ್ಧಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಐಸಿಟಿಇ–ನವದೆಹಲಿ ಸದಸ್ಯ ಕಾರ್ಯದರ್ಶಿ ಡಾ. ರಾಜೀವ್ ಕುಮಾರ್, ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ಕಾವೇರಿ ನರ್ಸಿಂಗ್ ಕಾಲೇಜು :** ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಮುಖ್ಯ ಅತಿಥಿಗಳು : ಅಪರ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜು, ಮೈಸೂರು ಮೆಡಿಕಲ್ ಕಾಲೇಜು ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ, ಕರ್ನಾಟಕ ರಾಜ್ಯ ಡಿಪ್ಲೋಮಾ ಇನ್ ನರ್ಸಿಂಗ್ ಎಕ್ಸಾಮಿನೇಷನ್ ಬೋರ್ಡ್ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ, ಸುರಕ್ಷಾ ಎಜುಕೇಷನ್ ಟ್ರಸ್ಟ್ ಅಧ್ಯಕ್ಷೆ ಡಾ. ಸರಳ ಚಂದ್ರಶೇಖರ್, ಅಧ್ಯಕ್ಷತೆ : ಕಾವೇರಿ ನರ್ಸಿಂಗ್ ಕಾಲೇಜು ಅಧ್ಯಕ್ಷ ಡಾ. ಜಿ.ಆರ್. ಚಂದ್ರಶೇಖರ್, ಸ್ಥಳ: ಕಾವೇರಿ ಇನ್ಸ್ಟಿಟ್ಯೂಷನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀಬಸವೇಶ್ವರ ಸಾಮಾಜಿಕ ಪರಿಷ್ಕರಣೆ ಸಂಶೋಧನೆ ಅಧ್ಯಯನ ಹಾಗೂ ವಿಸ್ತರಣಾ ಕೇಂದ್ರ, ಕನ್ನಡ ವಿಭಾಗ, ಐಕ್ಯೂಎಸಿ :** ಸರಣಿ ಉಪನ್ಯಾಸ ಮಾಲಿಕೆ, ಅಲ್ಲಮನ ವಚನಗಳ ಚಿಂತನೆ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ಉಪನ್ಯಾಸ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಕನ್ನಡ ಪ್ರಾಧ್ಯಾಪಕರಾದ ಡಾ. ಶೈಲಜಾ ಅವರಿಂದ ಅಲ್ಲಮನ ವಚನಗಳ ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಡಾ. ಬಿ.ಆರ್. ವಿಜಯ ಕುಮಾರಿ, ಉಪಸ್ಥಿತರು : ಸಂದರ್ಶಕ ಪ್ರಾಧ್ಯಾಪಕ ಪ್ರೊ. ಅರವಿಂದ ಮಾಲಗತ್ತಿ, ಡಾ. ಮೈಲಹಳ್ಳಿ ರೇವಣ್ಣ, ಡಾ.ಎಚ್. ಆರ್. ತಿಮ್ಮೇಗೌಡ, ಸ್ಥಳ: ಮಹಾಜನ ಪದವಿಪೂರ್ವ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮಿಪುರಂ, ಬೆಳಗ್ಗೆ 11ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜನ್ಮದಿನೋತ್ಸವ, ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥ ಉಪನ್ಯಾಸ, ಸಂಜೆ 5.30 ರಿಂದ ಸಂಧ್ಯಾರತಿ, ಸಂಜೆ 5.45 ರಿಂದ ಶ್ರೀ ರಾಮಕೃಷ್ಣ ವಿದ್ಯಾಶಾಲಾ ನಿವೃತ್ತ ಪ್ರಾಂಶುಪಾಲ ಎಸ್. ಬಾಲಾಜಿ ಅವರಿಂದ ಪ್ರಾಸ್ತಾವಿಕ ನುಡಿ, ವಿವೇಕ ವಿದ್ಯಾವಾಹಿನಿ ಟ್ರಸ್ಟ್ ಸಂಸ್ಥಾಪಕ ನಿತ್ಯಾನಂದ ವಿವೇಕವಂಶಿ ಅವರಿಂದ ಸಮಾಜ ಸೇವೆ ಕುರಿತಾದ ಸ್ವಾಮಿ ವಿವೇಕಾನಂದ ಪರಿಕಲ್ಪನೆಗಳು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಆವರಣ, ಯಾದವಗಿರಿ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ:** ರಂಗ ಸಂಭ್ರಮ ನಾಟಕೋತ್ಸವ, ಮಳವಳ್ಳಿ ರಂಗಬಂಡಿ ಕಲಾವಿದರಿಂದ ಹೆಚ್.ಎಸ್. ವೆಂಕಟೇಶ್‌ಮೂರ್ತಿ ವಿರಚಿತ ಅಳಿಲು ರಾಮಾಯಣ ಮಕ್ಕಳ ನಾಟಕ, ನಿರ್ದೇಶನ : ಮಧು ಮಳವಳ್ಳಿ, ರಂಗ ನಿರ್ವಹಣೆ : ಡಿ. ನಾಗರಾಜು, ಎಸ್. ರಾಘವೇಂದ್ರ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ಲೇಖನ ಹಾಗೂ ನಿರೂಪಣೆ– ಎಸ್. ರಾಮನಾಥ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ನಂದನ–ಮನೋನಂದನ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ಪ್ರಾಯೋಜಕರು–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣ ಫರ್ಟಿಲಿಟಿ ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ದುಬೈ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಎರಡನೇ ಸೆಮಿಫೈನಲ್ ಪಂದ್ಯದ ನೇರ ವೀಕ್ಷಕ ವಿವರಣೆ, 10.00 ನಾಟಕ–ಗದಾಯುದ್ಧ, ಪ್ರಸ್ತುತಿ : ಮಾಂಡವ್ಯ ರಂಗ ಕಲಾ ಟ್ರಸ್ಟ್, ಹೊಸಹಳ್ಳಿ, ಮಂಡ್ಯ

ನಿಮ್ಮ ಪತ್ರಗಳು

ಬನ್ನಿಮಂಟಪ ಬಸ್ ನಿಲ್ದಾಣ: ವಾಸ್ತವವಾಗಿ ಕೆಟ್ಟ ಯೋಜನೆ

ಮಾನ್ಯರೆ,

ಮಾ.3ರ 'ಮೈಸೂರು ಮಿತ್ರ'ನ ಮುಖಪುಟದ ***'ಮೈಸೂರಿನ ಬನ್ನಿಮಂಟಪದಲ್ಲಿ ನೂತನ ಬಸ್ ನಿಲ್ದಾಣದ ನಿರ್ಮಾಣ ಪ್ರಕ್ರಿಯೆ ಆರಂಭ'*** ಸುದ್ದಿಗೆ ಸಂಬಂಧಿಸಿದಂತೆ ನಮ್ಮ ಅನಿಸಿಕೆ.

ಬನ್ನಿಮಂಟಪದಲ್ಲಿ 24 ಎಕರೆ ಜಾಗದಲ್ಲಿ ರೂ.129 ಕೋಟಿ ವೆಚ್ಚದಲ್ಲಿ ಹೊಸದಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಿಸುವುದು ವಾಸ್ತವವಾಗಿ ಒಂದು ಕೆಟ್ಟ ಯೋಜನೆಯಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕಳೆದ ಕೆಲವು ತಿಂಗಳುಗಳಿಂದ ಮೈಸೂರಿನ ವಿವಿಧ ಕ್ಷೇತ್ರದ ಪ್ರತಿನಿಧಿಗಳು, ಗಣ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಮತ್ತು ಈಗಲೂ ವಿರೋಧಿಸುತ್ತಿದ್ದಾರೆ. ಆದರೆ ಸರ್ಕಾರವು ವಾಸ್ತವಕ್ಕೆ ಕುರುಡಾಗಿದೆ ಮತ್ತು ತರ್ಕಕ್ಕೆ ಕಿವುಡಾಗಿದೆ ಎಂದು ತೋರುತ್ತಿದೆ.

ಇನ್ನು ನಮ್ಮ ಐತಿಹಾಸಿಕ ದಸರಾ ಮಹೋತ್ಸವದ ಸಂದರ್ಭದಲ್ಲಿ ಮೈಸೂರು ಲಕ್ಷಗಟ್ಟಲೆ ಪ್ರವಾಸಿಗರು ಮತ್ತು ವಾಹನಗಳಿಂದ ತುಂಬಿ ತುಳುಕುತ್ತಿರುತ್ತದೆ. ಸಾವಿರಾರು ಜನ ದಿನನಿತ್ಯ ಬಸ್‌ಗಳಲ್ಲಿ ಮೈಸೂರಿಗೆ ಬಂದು ಹೋಗುವಾಗ, ಸಂಚಾರ ದಟ್ಟಣೆಯಿಂದ ಅನಿವಾರ್ಯವಾಗಿ ಗೊಂದಲ ಉಂಟಾಗುತ್ತಿದೆ. ಇದಕ್ಕೆ ಈವರೆಗೆ ಯಾವುದೇ ಪರಿಹಾರ ಕಂಡುಕೊಂಡಿಲ್ಲ. ಹಾಗೆಯೇ ಈ ಸಮಸ್ಯೆಗೆ ಬನ್ನಿಮಂಟಪದಲ್ಲಿ ಹೊಸ ಬಸ್ ನಿಲ್ದಾಣ ನಿರ್ಮಾಣ ಖಂಡಿತ ಪರಿಹಾರವಾಗುವುದಿಲ್ಲ. ಏಕೆಂದರೆ ಈ ಬಸ್ ನಿಲ್ದಾಣವು ಜಂಬೂ ಸವಾರಿ ಮಾರ್ಗದಲ್ಲಿಯೇ ಬರಲಿದೆ.

ಈ ಯೋಜನೆಯನ್ನು ಅಂತಿಮಗೊಳಿಸುವ ಮುನ್ನ ರಾಜ್ಯ ಸರ್ಕಾರವು ಕೆಎಸ್‌ಆರ್‌ಟಿಸಿ ಮತ್ತು ಸಂಚಾರ ವಿಭಾಗದ ಪೊಲೀಸರನ್ನು ಸಂಪರ್ಕಿಸಿ, ಅಗತ್ಯ ವರದಿ ಪಡೆದಿದೆಯೇ ಎಂಬುದು ತಿಳಿದಿಲ್ಲ. ಉದ್ದೇಶಿತ ಯೋಜನೆಯೂ ಮೈಸೂರಿನ ಸಮಗ್ರ ಅಭಿವೃದ್ಧಿ ಯೋಜನೆ(ಸಿಡಿಪಿ) ಅಥವಾ ಮಾಸ್ಟರ್ ಪ್ಲಾನ್ ಪ್ರಕಾರ ಇದೆಯೇ ಎಂಬುದೂ ಸ್ಪಷ್ಟವಾಗಿಲ್ಲ.

ಆಶ್ಚರ್ಯವೆಂದರೆ ಈ ಬಸ್ ನಿಲ್ದಾಣ ನಿರ್ಮಾಣ ಯೋಜನೆ ಟೆಂಡರ್ ಹಂತಕ್ಕೆ ಬಂದಿದ್ದು, ಅದಕ್ಕೆ ಪೂರಕವಾಗಿ ಸಂಚಾರ ಸಮೀಕ್ಷೆ ಮಾಡಿಯೇ ಇಲ್ಲ ಎಂದು ತೋರುತ್ತದೆ!

ಸರ್ಕಾರಿ ಅಧಿಕಾರಿಗಳು ಯೋಜನೆಯನ್ನು ಈ ಹಂತಕ್ಕೆ ತಂದಿದ್ದಾರೆ. ಆದರೆ ಯಾವುದೇ ಯೋಜನೆಯ ಗುತ್ತಿಗೆಯನ್ನು ಸಾರ್ವಜನಿಕರ ಹೊಣೆಗಾರಿಕೆ ನಿರ್ವಹಿಸುವುದು ಅವಶ್ಯವಿದೆ.



–ಮೇಜರ್ ಜನರಲ್ ಎಸ್.ಜಿ.ವೊಂಬತ್ಕೆರೆ
ಮೈಸೂರು 3.3.2025

ಟಿಪ್ಪಣಿ: ಒಮ್ಮೆ ಕೆಲವು ಸೆನೆಟರ್‌ಗಳು ಸಮಸ್ಯೆಯೊಂದಕ್ಕೆ ಅಮೆರಿಕಾ ಅಧ್ಯಕ್ಷ ರೊನಾಲ್ಡ್ ರೇಗನ್ ಅವರ ಮಧ್ಯಸ್ಥಿಕೆ ಕೋರಿ ಅವರ ಬಳಿ ಹೋದಾಗ ಅವರು, **'ಸರ್ಕಾರವೇ ಸಮಸ್ಯೆ'** ಎಂದು ಉತ್ತರಿಸಿದ್ದರು. ಬನ್ನಿಮಂಟಪ ಬಸ್ ನಿಲ್ದಾಣ ಸಂಬಂಧಿತ ನಮ್ಮ ಸಮಸ್ಯೆಯ ಬಗ್ಗೆಯೂ ಅದನ್ನೇ ಹೇಳಬೇಕಿದೆ.

ಸರ್ಕಾರವು ಕೆಎಸ್‌ಆರ್‌ಟಿಸಿ ಮತ್ತು ಸಂಚಾರ ವಿಭಾಗದ ಪೊಲೀಸರೊಂದಿಗೆ ಸಮಾಲೋಚನೆ ನಡೆಸಿದೆ ಎಂದು ಭಾವಿಸಿದರೆ, ಈ ಎರಡೂ ಸಂಸ್ಥೆಗಳ ಅಭಿಪ್ರಾಯವು 'ಹೌದು' ಎಂದಿರಬೇಕು.

'ಎಸ್ ಮಾಸ್ಟರ್', ಇದು ಮೊಘಲ್ ದಿನಗಳಲ್ಲಿ **'ಜಿ ಹುಜೂರ್'**ನಂತೆ ನಮ್ಮ ಅಧಿಕಾರಶಾಹಿಯ ಅಭ್ಯಾಸವಾಗಿದೆ. ಯಾವೊಬ್ಬ ಅಧಿಕಾರಿಯೂ ತಮ್ಮ **ರಾಜಕೀಯ ಬಾಸ್**ಗಳ ಅಸಮಾಧಾನಕ್ಕೆ ಕಾರಣರಾಗಿ ತೊಂದರೆ ತಂದುಕೊಳ್ಳಲು ಬಯಸುವುದಿಲ್ಲ. ಸರ್ಕಾರಿ ಅಧಿಕಾರಿಗಳ ಕಡೆಯಿಂದ ಯಾವುದೇ ಸಾರ್ವಜನಿಕ ಹೊಣೆಗಾರಿಕೆ ಇರುವಂತಿಲ್ಲ. ಬದ್ಧತೆ ಎಂಬುದು ಮಂತ್ರಿಗಳು, ಕ್ಯಾಬಿನೆಟ್, ಕಾರ್ಯಾಂಗದ ಮೇಲೆ ಇರುತ್ತದೆಯೇ ಹೊರತು ಅಂತಹ ನಿರ್ಧಾರ ಅಧಿಕಾರಶಾಹಿಗಳದ್ದಾಗಿರುವುದಿಲ್ಲ.


–ಸಂಪಾದಕ

2030ರೊಳಗೆ ರಾಜ್ಯದ ಪ್ರತಿ ಮನೆಗೆ ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಪೂರೈಕೆ

● ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ವಿಶ್ವಾಸ ● ಸಾರ್ವಜನಿಕ ಹಿತ, ಪರಿಸರ ಸ್ನೇಹಿ ಕ್ರಮವಾಗಿ ಜಾರಿ



ಎಂ.ಬಿ.ಪಾಟೀಲ್



ಬೆಂಗಳೂರು, ಮಾ.4(ಕೆಎಂಶಿ)– ರಾಜ್ಯದಲ್ಲಿ ಬೇರೆ ಬೇರೆ ಸ್ಥಳೀಯ ಸಂಸ್ಥೆಗಳಲ್ಲಿ ಒಂದೊಂದು ದರ ಇದ್ದ ಕಾರಣ ಮನೆ ಮನೆಗೆ ಅಡುಗೆ ಅನಿಲ (ಎಲ್‌ಪಿಜಿ ಗ್ಯಾಸ್) ಸಂಪರ್ಕ ಒದಗಿಸಲು ವಿಳಂಬವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಈಗ ಸಮಸ್ಯೆ ಬಗೆಹರಿದಿದ್ದು, 2030ರೊಳಗೆ ಉಳಿದ 60 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಪೈಪ್‌ಲೈನ್ ಮೂಲಕ ಅಡುಗೆ ಅನಿಲ ಪೂರೈಸಲಾಗುವುದು ಎಂದರು.

ವಿಧಾನಪರಿಷತ್‌ನಲ್ಲಿ ಡಿ.ಎಸ್.ಅರುಣ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಗ್ಯಾಸ್ ಪೂರೈಕೆ ಕೊಳವೆ ಅಳವಡಿಸಲು ವಿವಿಧ ರಾಜ್ಯಗಳಲ್ಲಿನ ನಗರ ಅನಿಲ ಸರಬರಾಜು ನೀತಿ ಅನ್ವಯ ಮೀಟರ್‌ಗೆ ಒಂದು ರೂ. ನಿಗದಿಪಡಿಸಲಾಗಿದೆ.

ಸಾರ್ವಜನಿಕ ಹಿತ ಮತ್ತು ಪರಿಸರ ಸ್ನೇಹಿ ಕ್ರಮ ಎಂಬ ಕಾರಣಕ್ಕೆ ನಾವೂ ಒಪ್ಪಿಕೊಂಡಿದ್ದೇವೆ, ರಾಜ್ಯದಲ್ಲಿ ಒಟ್ಟು 66.25 ಲಕ್ಷ ಮನೆಗಳಿಗೆ ಸಂಪರ್ಕ ಕಲ್ಪಿಸುವ ಮತ್ತು 1,022 ಸಿಎನ್‌ಜಿ ಮರುಪೂರಣ ಕೇಂದ್ರ ತೆರೆಯುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು. ಈ ಯೋಜನೆ 2015ರಲ್ಲಿ ಆರಂಭವಾಗಿದ್ದು, ಬೆಂಗಳೂರಿನಲ್ಲಿ ಭಾರತೀಯ ಅನಿಲ ಪ್ರಾಧಿಕಾರ (ಗೈಲ್) ಕಾಮಗಾರಿ ಕೈಗೆತ್ತಿಕೊಂಡಿತ್ತು. 2023ರವರೆಗೆ 4.07 ಲಕ್ಷ ಮನೆಗಳಿಗೆ ಗ್ಯಾಸ್ ಪೂರೈಕೆ ಸಂಪರ್ಕ ಕೊಟ್ಟಿದೆ, 320 ಸಿಎನ್‌ಜಿ ಕೇಂದ್ರ ತೆರೆಯಲಾಗಿದೆ.

ಹೊಸ ನೀತಿ ರೂಪಿಸಿದ ನಂತರ ಇನ್ನೂ 1.01 ಲಕ್ಷ ಮನೆಗಳಿಗೆ ಸೌಲಭ್ಯ ಒದಗಿಸಿದ್ದು, 154 ಸಿಎನ್‌ಜಿ ಕೇಂದ್ರ ಆರಂಭಿಸಲಾಗಿದೆ, ಮತ್ತಷ್ಟು ವೇಗ ನೀಡಲು ಸ್ಥಳೀಯ ನಗರ ಸಂಸ್ಥೆಗಳ ಜತೆ ಸಮನ್ವಯ ಸಭೆ ಮಾಡಲಾಗುತ್ತಿದೆ.

ಯೋಜನೆಯಡಿ ಇದುವರೆಗೂ ಒಟ್ಟು 5.10 ಲಕ್ಷ ಮನೆಗಳಿಗೆ ಸೌಲಭ್ಯ ಒದಗಿಸಲಾಗಿದೆ, 474 ಸಿಎನ್‌ಜಿ ಕೇಂದ್ರಗಳು ಕಾರ್ಯಾರಂಭ ಮಾಡಿವೆ. ಮುಂದಿನ ಐದು ವರ್ಷಗಳಲ್ಲಿ ಬಾಕಿ ಗುರಿ ತಲುಪಲಾಗುವುದು.

ಕೇಂದ್ರ ಸರ್ಕಾರದ ಸೂಚನೆ ಪ್ರಕಾರ ಮೀಟರ್‌ಗೆ ಒಂದು ರೂ. ನಿಗದಿಪಡಿಸಿದ್ದು, ಇದರ ಲಾಭವನ್ನು ಅನಿಲ ಸರಬರಾಜು ಕಂಪನಿಗಳು ನಂತರದ ದಿನಗಳಲ್ಲಿ ಗ್ರಾಹಕರಿಗೆ ವರ್ಗಾಯಿಸಬೇಕು ಎಂಬುದಾಗಿ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ, ಅಲ್ಲದೆ, ಹೊಸ ನೀತಿಯಲ್ಲೂ ಅಳವಡಿಸಲಾಗಿದೆ ಎಂದರು.

ಅಧಿಕಾರ ಹಂಚಿಕೆ ರಗಳೆ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ ಡಿ.ಕೆ.ಶಿವಕುಮಾರ್



ಬೆಂಗಳೂರು: ಕರ್ನಾಟಕ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಆಂತರಿಕ ಕಚ್ಚಾಟದ ನಡುವೆ, ಕೆಪಿಸಿಸಿ ಅಧ್ಯಕ್ಷ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಮಂಗಳವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಭೇಟಿ ಮಾಡಿದರು.

ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕೇಂದ್ರದ ಮಾಜಿ ಸಚಿವ ಹಾಗೂ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಹೇಳಿಕೆ ನೀಡಿದ ನಂತರ ಖರ್ಗೆಯೊಂದಿಗಿನ 20 ನಿಮಿಷಗಳ ಕಾಲ ನಡೆದ ಈ ಸಭೆ ಮಹತ್ವ ಪಡೆದುಕೊಂಡಿದೆ.

ಈ ವರ್ಷಾಂತ್ಯಕ್ಕೆ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಾಗಲಿದೆ ಎಂಬ ಊಹಾಪೋಹಗಳ ನಡುವೆ ಡಿಸೆಂಬರ್ ವೇಳೆಗೆ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾಗಲಿದ್ದಾರೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸುತ್ತಾರೆ ಎಂದು ಡಿಕೆ ಶಿವಕುಮಾರ್ ಅವರ ಕಟ್ಟಾ ಬೆಂಬಲಿಗರಾಗಿರುವ ಶಾಸಕ ಬಸವರಾಜು ವಿ. ಶಿವಗಂಗಾ ಭಾನುವಾರ ಹೇಳಿದ್ದಾರೆ.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ರಾಷ್ಟ್ರೀಯ ಅಧ್ಯಕ್ಷರು, ನಾನೇ ಅವರನ್ನು ಗೌರವಿಸದಿದ್ದರೆ, ಬೇರೆ ಯಾರನ್ನು ನಾನು ಗೌರವಿಸಬೇಕು, ಬದಲಿಗೆ ನಾನು ಬಿಜೆಪಿ ಕಚೇರಿಗೆ ಹೋಗಬೇಕೇ? ನಮ್ಮ ಹೊಸ ಕಚೇರಿಯ ನಿರ್ಮಾಣವನ್ನು ನಾನು ನೋಡಿಕೊಳ್ಳುತ್ತಿದ್ದೇನೆ ಮತ್ತು ಭೂಮಿ ಪೂಜೆ ಸಮಾರಂಭ'ಕ್ಕೆ ಅವರ ಲಭ್ಯತೆಯನ್ನು ಕೇಳಿದ್ದೇನೆ. ಇದಕ್ಕಿಂತ ಹೆಚ್ಚಿನದನ್ನು ಚರ್ಚಿಸಿಲ್ಲ ಎಂದರು.

ವೀರಪ್ಪ ಮೊಯ್ಲಿ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊಯ್ಲಿ ಅಥವಾ ಮತ್ಯಾರೋ ಹೇಳೋದ್ರಿಂದ ಯಾರೂ ಮುಖ್ಯಮಂತ್ರಿ ಅಗಲ್ಲ, ಅದು ಹೈಕಮಾಂಡ್ ವಿವೇಚನೆಗೆ ಬಿಟ್ಟಿರುವ ವಿಷಯ. ಪಕ್ಷದ ಹೈಕಮಾಂಡ್ ತೀರ್ಮಾನ ಮುಖ್ಯವಾಗಿದ್ದು, ಅದಕ್ಕೆ ಬದ್ಧರಾಗಿರುತ್ತೇವೆ ಎಂದು ಹೇಳಿದರು.

ಅಧಿಕಾರ ಹಂಚಿಕೆ ವಿಚಾರವಾಗಿ ಚರ್ಚೆ ಮಾಡದಂತೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಸೂಚನೆ ನೀಡಿದ್ದು, ಅವರ ಸೂಚನೆಗಳನ್ನು ಪಾಲಿಸುತ್ತಿದ್ದೇನೆ ಎಂದು ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಮೊಯ್ಲಿ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ಇದು ಮಾಜಿ ಕೇಂದ್ರ ಸಚಿವರ ವೈಯಕ್ತಿಕ ಅಭಿಪ್ರಾಯ ಎಂದಿದ್ದಾರೆ.

ಬಳ್ಳಾರಿಯಲ್ಲಿ ಹೆಚ್ಚಿದ ಹಕ್ಕಿ ಜ್ವರ ಭೀತಿ: ಒಂದೇ ಫಾರಂನಲ್ಲಿ 10,000 ಕೋಳಿಗಳ ಸಾವು



ಬಳ್ಳಾರಿ, ಮಾ.4– H5N1 ವೈರಸ್ ಪರಿಣಾಮ ಬಳ್ಳಾರಿ ಜಿಲ್ಲೆಯ ಕೋಳಿ ಸಾಕಣೆ ಕೇಂದ್ರಗಳಲ್ಲಿ ಸುಮಾರು 10,000 ಕೋಳಿಗಳು ಸಾವನ್ನಪ್ಪಿದ್ದು, ಈ ಬೆಳವಣಿಗೆ ಜಿಲ್ಲೆಯಲ್ಲಿ ಹಕ್ಕಿ ಜ್ವರ ಕುರಿತ ಆತಂಕ ಹೆಚ್ಚಾಗುವಂತೆ ಮಾಡಿದೆ.

ಕುರೇಕೊಪ್ಪ ಗ್ರಾಮದ ಸರ್ಕಾರಿ ಕೋಳಿ ಸಾಕಣೆ ಕೇಂದ್ರದಲ್ಲಿ 2,400 ಕೋಳಿಗಳು ಸಾವನ್ನಪ್ಪಿವೆ. ಇದರ ಮಾದರಿಗಳನ್ನು ಮಧ್ಯಪ್ರದೇಶ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ವರದಿಯಲ್ಲಿ H5N1 ಇರುವಿಕೆ ದೃಢಪಟ್ಟಿತ್ತು.

ಬಳಿಕ ಫೆಬ್ರವರಿ 26 ರಂದು, ಕಪ್ಪಗಲ್ಲು ಕೋಳಿ ಸಾಕಣೆ ಕೇಂದ್ರದಲ್ಲಿ 8,000 ಕೋಳಿಗಳು ಒಮ್ಮೆಲೆ ಸಾವನ್ನಪ್ಪಿವೆ, ಕೋಳಿಗಳು ಹಕ್ಕಿ ಜ್ವರದಿಂದಲೇ ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ಬಳ್ಳಾರಿ ಉಪ ಆಯುಕ್ತ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದ್ದಾರೆ.

ಪ್ರಸ್ತುತದ ಪರಿಸ್ಥಿತಿಯಲ್ಲಿ ಕೋಳಿಗಳನ್ನು ನಿರ್ವಹಿಸುವ ಕುರಿತು ಕೋಳಿ ಸಾಕಾಣೆಗಾರರಿಗೆ ತರಬೇತಿ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ, ಆಂಧ್ರಪ್ರದೇಶ ಗಡಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಹಕ್ಕಿ ಜ್ವರ ತಡೆಯಲು ಮತ್ತು ಪರಿಶೀಲಿಸಲು ಪಶು ಸಂಗೋಪನಾ ಇಲಾಖೆಯು 10 ತಂಡಗಳನ್ನು ರಚಿಸಿದೆ. ಈ ತಂಡಗಳು ನಿತ್ಯ ಇಲಾಖೆಗೆ ವರದಿ ನೀಡಲಿವೆ. ಜಿಲ್ಲೆಯು ಆಂಧ್ರ ಪ್ರದೇಶದೊಂದಿಗೆ ಗಡಿ ಹಂಚಿಕೊಂಡಿದ್ದು, ಚೆಕ್‌ಪೋಸ್ಟ್‌ಗಳಲ್ಲೂ ಪರಿಶೀಲನೆ ನಡೆದಿದೆ. ಬಳ್ಳಾರಿಯಲ್ಲಿ ಒಟ್ಟು 74 ಕೋಳಿ ಫಾರಂಗಳಿವೆ. 14 ಮೊಟ್ಟೆ ಸಂವರ್ಧನಾ ಕೇಂದ್ರಗಳಿವೆ. ಇವುಗಳ ಮೇಲೆ ನಿಗಾ ವಹಿಸಲಾಗಿದೆ ಎಂದರು.

ಜಿಲ್ಲಾಧಿಕಾರಿಗಳು ಮಾತನಾಡಿ, ಜನರು ಆತಂಕಪಡುವ ಪರಿಸ್ಥಿತಿ ಇಲ್ಲ. ಕೋಳಿ ಮಾಂಸ, ಮೊಟ್ಟೆ ಸೇವನೆ ವೇಳೆ ಚೆನ್ನಾಗಿ ಬೇಯಿಸಿ ಸೇವಿಸಬೇಕು. ಮಾಂಸ ಸೇವಿಸುವ ಮೊದಲು ಅರ್ಧ ಗಂಟೆಗಿಂತ ಹೆಚ್ಚು ಕಾಲ ಕನಿಷ್ಠ 70 ಡಿಗ್ರಿ ಸೆಲ್ಸಿಯಸ್‌ನಲ್ಲಿ ಬೇಯಿಸಬೇಕೆಂದು ಸಲಹೆ ನೀಡಿದರು.

ಕಪ್ಪಗಲ್ಲು ಫಾರ್ಮ್ ಸುತ್ತಲಿನ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲು ಪ್ರಯತ್ನಿಸಲಾಗುತ್ತಿದೆ, ಜನರು ಭಯ ಪಡುವ ಬದಲು, ಸರ್ಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಸರಿಯಾಗಿ ಪಾಲಿಸಬೇಕೆಂದು ಹೇಳಿದರು.

ಛತ್ರಸಾಲ್ ಕ್ರೀಡಾಂಗಣದಲ್ಲಿ ಕೊಲೆ ಪ್ರಕರಣ: ಕುಸ್ತಿಪಟು ಸುಶೀಲ್ ಕುಮಾರ್‌ಗೆ ಜಾಮೀನು

ನವದೆಹಲಿ: ರಾಷ್ಟ್ರ ರಾಜಧಾನಿಯ ಛತ್ರಸಾಲ್ ಕ್ರೀಡಾಂಗಣದಲ್ಲಿ ತಮ್ಮ ಮಾಜಿ ಜೂನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್ ಸಾಗರ್ ಧಂಕರ್ ಅವರ ಹತ್ಯೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಒಲಿಂಪಿಕ್ ಕುಸ್ತಿಪಟು ಸುಶೀಲ್ ಕುಮಾರ್ ಅವರಿಗೆ ದೆಹಲಿ ಹೈಕೋರ್ಟ್ ಮಂಗಳವಾರ ಜಾಮೀನು ನೀಡಿದೆ.

ಕಳೆದ ಮೂರೂವರೆ ವರ್ಷಗಳಿಂದ ಜೈಲಿನಲ್ಲಿರುವ ಸುಶೀಲ್‌ಕುಮಾರ್ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜೀವ್ ನರುಲಾ ಅವರು, ಆರೋಪಿ ಕುಸ್ತಿಪಟುಗೆ ಜಾಮೀನು ಮಂಜೂರು ಮಾಡಿದ್ದಾರೆ. ಅಲ್ಲದೆ ಇಬ್ಬರು ಶ್ಯೂರಿಟಿಗಳೊಂದಿಗೆ 50,000 ರೂ.ಗಳ ವೈಯಕ್ತಿಕ ಬಾಂಡ್ ಸಲ್ಲಿಸುವಂತೆ ಕುಮಾರ್‌ಗೆ ಸೂಚಿಸಿದ್ದಾರೆ.

ಕುಮಾರ್ ಮತ್ತು ಇತರರು ಮೇ 2021 ರಲ್ಲಿ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಧಂಕರ್ ಮತ್ತು ಆತನ ಸ್ನೇಹಿತರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದರು ಎಂದು ಆರೋಪಿಸಲಾಗಿದೆ. ಕುಸ್ತಿಪಟು ಸುಶೀಲ್ ಕುಮಾರ್ ಅವರು ಕಳೆದ ಮೂರೂವರೆ ವರ್ಷಗಳಿಂದ ಜೈಲಿನಲ್ಲಿದ್ದಾರೆ ಮತ್ತು



ಪ್ರಾಸಿಕ್ಯೂಷನ್ 200 ಸಾಕ್ಷಿಗಳನ್ನು ಉಲ್ಲೇಖಿಸಿದೆ. ಆದರೆ ಇಲ್ಲಿಯವರೆಗೆ ಕೇವಲ 31 ಸಾಕ್ಷಿಗಳನ್ನು ಮಾತ್ರ ವಿಚಾರಣೆ ನಡೆಸಲಾಗಿದೆ ಎಂದು ಆರೋಪಿ ಪರ ವಕೀಲ ಆರ್‌ಕೆ ಮಲಿಕ್ ಅವರು ಹೇಳಿದ್ದಾರೆ. ಸಾಕ್ಷಿಗಳ ವಿಚಾರಣೆ ಮುಗಿಯಲು ಬಹಳ ಸಮಯ ತೆಗೆದುಕೊಳ್ಳುತ್ತದೆ ಮತ್ತು ವಿಳಂಬದ ಕಾರಣ ಸುಶೀಲ್ ಕುಮಾರ್‌ಗೆ ಜಾಮೀನು ನೀಡಬೇಕು ಎಂದು ಮಲಿಕ್ ವಾದಿಸಿದ್ದರು.

ಸಾರ್ವಜನಿಕ ವಾಹನಗಳಿಗೆ ಜಿಪಿಎಸ್–ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯ

ವಿರೋಧ–ದೂರು ಬೆನ್ನಲ್ಲೇ ಸಾಧನಗಳ ದರ ನಿಗದಿ



ಬೆಂಗಳೂರು: ಸಾರ್ವಜನಿಕ ವಾಹನಗಳಿಗೆ ಜಿಪಿಎಸ್–ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯಗೊಳಿಸಿರುವುದನ್ನೇ ಬಂಡವಾಳ ಮಾಡಿಕೊಂಡು ಸಾಧನಗಳನ್ನು ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದವರಿಗೆ ದರ ನಿಗದಿ ಮಾಡಿ ಸರ್ಕಾರ ಕಡಿವಾಣ ಹಾಕಿದೆ.

ದೆಹಲಿ ನಿರ್ಭಯಾ ಘಟನೆಯ ನಂತರ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಎಲ್ಲಾ ಸಾರ್ವಜನಿಕ ಸೇವಾ ವಾಹನಗಳಾದ ಬಸ್‌ಗಳು, ಮ್ಯಾಕ್ಸಿ ಕ್ಯಾಬ್‌ಗಳು, ಶಾಲಾ ಬಸ್‌ಗಳಲ್ಲಿ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಉಪಕರಣ ಮತ್ತು ತುರ್ತು ಪ್ಯಾನಿಕ್ ಬಟನ್ ಅಳವಡಿಕೆಯನ್ನು ಕಡ್ಡಾಯಗೊಳಿಸಿತ್ತು. ಇದಕ್ಕೆ ವಾಹನ ಮಾಲೀಕರು ವಿರೋಧ ವ್ಯಕ್ತಪಡಿಸಿದ್ದರಲ್ಲದೆ, ಸಾಧನಗಳಿಗೆ ದುಬಾರಿ ಬೆಲೆ ವಿಧಿಸುತ್ತಿರುವುದರ ಕುರಿತು ದೂರುಗಳನ್ನು ಹೇಳಿದ್ದರು.ಈ ಸಾಧನಗಳ ಮಾರುಕಟ್ಟೆ ದರ ಸುಮಾರು 4,000 ರೂ.ಗಳಾಗಿದ್ದರೂ, ಮಾರಾಟಗಾರರು 18,000 ವಿಧಿಸುತ್ತಿದ್ದಾರೆಂದು ದೂರಿದ್ದರು.

ಸಾಲು–ಸಾಲು ದೂರುಗಳು ಬಂದ ಹಿನ್ನೆಲೆಯಲ್ಲಿ ಈ ಬಗ್ಗೆ ಗಮನ ಹರಿಸಿದ ಸಾರಿಗೆ ಇಲಾಖೆ, ಮಾತುಕತೆ ನಡೆಸಿ ಒಂದು ವಿಎಲ್‌ಟಿಡಿ ಸಾಧನದ ಬೆಲೆಯನ್ನು 5,424 ರೂ.ಗಳಿಗೆ, ಪ್ರತಿ ತುರ್ತು ಬಟನ್‌ಗೆ 325 ರೂ.ಗಳಿಗೆ ಮತ್ತು ಒಂದು ವರ್ಷದ ನೆಟ್‌ವರ್ಕ್ ಸಂಪರ್ಕ ಮತ್ತು ನಿರ್ವಹಣಾ ಶುಲ್ಕವನ್ನು 1,800 ರೂ.ಗಳಿಗೆ ನಿಗದಿಪಡಿಸಿದೆ.

ಪ್ಯಾನಿಕ್ ಬಟನ್ ಅಳವಡಿಕೆಗೆ ಕೆಲ ನಿಯಮಗಳಿವೆ. ಈ ಬಟನ್‌ಗಳು ವಾಹನಗಳ ಆಸನಗಳ ಸಂಖ್ಯೆಯನ್ನು ಆಧರಿಸಿ ಬದಲಾಗುತ್ತವೆ. ಐದು ಸೀಟುಗಳನ್ನು ಹೊಂದಿರುವ ಕಾರಿನಲ್ಲಿ ಕನಿಷ್ಠ ಮೂರು ಪ್ಯಾನಿಕ್ ಬಟನ್‌ಗಳು ಇರಬೇಕು, 21 ಸೀಟುಗಳನ್ನು ಹೊಂದಿರುವ ಪ್ಯಾಸೆಂಜರ್ ಬಸ್‌ನಲ್ಲಿ ಏಳು ಬಟನ್‌ಗಳು ಇರಬೇಕು ಎಂದು ಸಾರಿಗೆ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರಸ್ತುತ ನಿಗದಿಪಡಿಸಿರುವ ಈ ಬೆಲೆಗಳು ಎಲ್ಲಾ ತೆರಿಗೆಗಳಿಂದ ಪ್ರತ್ಯೇಕವಾಗಿರುತ್ತವೆ. ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸದ ವಾಹನಗಳಿಗೆ ಫಿಟ್‌ನೆಸ್ ಪ್ರಮಾಣಪತ್ರಗಳನ್ನು ನವೀಕರಿಸಲಾಗುವುದಿಲ್ಲ ಎಂದು ತಿಳಿಸಿದ್ದಾರೆ. ಪ್ರಸ್ತುತ ಲಭ್ಯವಿರುವ ಮಾಹಿತಿಗಳ ಪ್ರಕಾರ. ರಾಜ್ಯದಲ್ಲಿರುವ 6 ಲಕ್ಷ ವಾಹನಗಳಲ್ಲಿ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಉಪಕರಣ ಮತ್ತು ತುರ್ತು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಿವೆ ಎಂದು ತಿಳಿದುಬಂದಿದೆ.

ಮಾ.9, ಹಿರೀಸಾವೆ ಸಹಕಾರ ಸಂಘದ ಚುನಾವಣೆ

ಹಿರೀಸಾವೆ: ಇಲ್ಲಿನ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯು ಮಾರ್ಚ್ 9ರಂದು ನಡೆಯಲಿದೆ ಎಂದು ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಎನ್.ಹರೀಶ್ ತಿಳಿಸಿದರು.

ಸಾಲಗಾರರ ಕ್ಷೇತ್ರದಿಂದ 23 ಸದಸ್ಯರು ಮತ್ತು ಸಾಲಗಾರರಲ್ಲದ ಕ್ಷೇತ್ರದಿಂದ ಇಬ್ಬರು ಸದಸ್ಯರು ಚುನಾವಣೆಗೆ ಸ್ಪರ್ಧಿಸಿದ್ದಾರೆ. ಸಂಘದ ಚುನಾವಣಾಧಿಕಾರಿ ವಾಸಿಂ ಶರೀಫ್ ಸೋಮವಾರ ಎಲ್ಲಾ ಅಭ್ಯರ್ಥಿಗಳಿಗೂ ಚಿಹ್ನೆಗಳನ್ನು ನೀಡಿದರು. ಶಾಸಕರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಮತದಾನ ಮಾಡಲು ಸಂಘದ ಗುರುತಿನ ಚೀಟಿಯನ್ನು ತರಬೇಕು ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಮಗಾರಿಯ ಕಮಿಷನ್ ಪರ್ಸೆಂಟೇಜ್ ಮುಗಿಲು ಮುಟ್ಟಿದೆ



ಬೆಂಗಳೂರು: ಕಾಂಗ್ರೆಸ್ ಸರ್ಕಾರದಲ್ಲಿ ಅಧಿಕಾರಿಗಳು ಹೆಚ್ಚಿನ ಕಮಿಷನ್ ಪಡೆಯುತ್ತಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಆರೋಪಿಸಿದೆ.

ಈ ಕುರಿತು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ರಾಜ್ಯದಲ್ಲಿ ಅಭಿವೃದ್ಧಿ ಪರ್ಸೆಂಟೇಜ್ ತಳಕಚ್ಚಿದೆ. ಕಾಮಗಾರಿಯ ಕಮಿಷನ್ ಪರ್ಸೆಂಟೇಜ್ ಮುಗಿಲು ಮುಟ್ಟಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ 40% ಕಮಿಷನ್ ಸರ್ಕಾರ ಎಂದು ಅಪಪ್ರಚಾರದ ಜಾಲ ವಿಸ್ತರಿಸಿ ಅಧಿಕಾರಕ್ಕೆ ಬಂದವರು ನೀವು. ನಿಮ್ಮ ಅವಧಿಯಲ್ಲಿ 80% ಕಮಿಷನ್ ದಂಧೆ ನಡೆಯುತ್ತಿದೆ ಎಂದು ಸ್ವತಃ ಗುತ್ತಿಗೆದಾರರೇ ನಿಮ್ಮ ಮುಂದೆ ದೂರಿಕೊಂಡರೂ ಅದನ್ನು ಲಘುವಾಗಿ ಪರಿಗಣಿಸಿದ್ದೀರಿ. ಅಲ್ಲದೆ, ನೀವೇಕೆ ಕಮಿಷನ್ ನೀಡುತ್ತೀರಿ ಎಂದು ಗುತ್ತಿಗೆದಾರರನ್ನೇ ಬೆದರಿಸಿದ್ದೀರಿ ಎಂದು ಕಾಂಗ್ರೆಸ್ ವಿರುದ್ಧ ವಿಜಯೇಂದ್ರ ಕಿಡಿಕಾರಿದ್ದಾರೆ.

ಖಾಲಿಯಾಗಿರುವ ಸರ್ಕಾರದ ಖಜಾನೆಯಲ್ಲಿ ಅಭಿವೃದ್ಧಿಗಾಗಿ ಬಳಸಲು ಬಿಡಿಗಾಸೂ ಇಲ್ಲ, ಇನ್ನು ಗುತ್ತಿಗೆದಾರರಿಗೆ ಬಾಕಿ ಬಿಲ್ ಪಾವತಿಸಲು ಹಣವಿಲ್ಲದ ಪರಿಸ್ಥಿತಿ ಇರುವುದು ಅಸಲಿ ಸತ್ಯ. ಆದಾಗ್ಯೂ, ಕಮಿಷನ್ ಪಾವತಿಸಿದರೆ ಮಾತ್ರ ಹೇಗಾದರೂ ಮಾಡಿ ಬಿಲ್ ಕೊಡಿಸುವುದಾಗಿ ಅಧಿಕಾರಿಗಳ ಮೂಲಕ ಸಂಕಷ್ಟಿತ ಗುತ್ತಿಗೆದಾರರ ಬೆನ್ನು ಹತ್ತಲಾಗಿದೆ, ಇದನ್ನು ನೇರಾ ನೇರ ನಿಮ್ಮ ಮುಂದೆಯೇ ಗುತ್ತಿಗೆದಾರರು ಅನಾವರಣ ಮಾಡುತ್ತಿದ್ದಾರೆ ಎಂದು ಅವರು ಟೀಕಿಸಿದ್ದಾರೆ. ಕಾಂಗ್ರೆಸ್‌ನ ಉಡಾಫೆಯ ಉತ್ತರ ಹಿಂದಿನ (ಬಿಜೆಪಿ) ಸರ್ಕಾರದ ಮೇಲೆ ಜವಾಬ್ದಾರಿ ಹೊರಿಸಿ ನುಣುಚಿಕೊಳ್ಳುವ ಪ್ರಯತ್ನವಾಗಿದೆ. ಏಪ್ರಿಲ್ ತಿಂಗಳಿನಲ್ಲಿ ಹೇಗಾದರೂ ಸ್ವಲ್ಪ ಹಣವನ್ನಾದರೂ ಹೊಂದಿಸಿಕೊಡುವುದಾಗಿ ಅಸ್ಪಷ್ಟ ಭರವಸೆ ನೀಡಿದ್ದೀರಿ. ಇಂತಹ ದಾರುಣ ಪರಿಸ್ಥಿತಿ ಕರ್ನಾಟಕ ಇತಿಹಾಸದಲ್ಲಿ ಯಾವ ಸರ್ಕಾರಕ್ಕೂ ಬಂದಿರಲಿಲ್ಲ ಎಂದು ವಿಜಯೇಂದ್ರ ಹೇಳಿದ್ದಾರೆ.

ಕಾಮಗಾರಿ, ಕಾರ್ಯಕ್ರಮಗಳು, ಯೋಜನೆಗಳು ಯಾರ ಅವಧಿಯಲ್ಲಿ ಆರಂಭಿಸಿದ್ದು ಎಂಬುದು ಮುಖ್ಯವಲ್ಲ. ಅದೊಂದು ಸರ್ಕಾರದ ವ್ಯವಸ್ಥೆಯ ನಿರಂತರ ಪ್ರಕ್ರಿಯೆ. ಇದರಲ್ಲಿ ಪಾರದರ್ಶಕ ನಿಯಮ ಅನುಸರಿಸಿ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸುವುದು ಸರ್ಕಾರಿ ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಆ ಸರ್ಕಾರ, ಈ ಸರ್ಕಾರ ವೆನ್ನದೇ ಸಾಲ ಸೋಲ ಮಾಡಿ ಬಂಡವಾಳ ತೊಡಗಿಸಿರುವ ಗುತ್ತಿಗೆದಾರರ ಕತ್ತು ಹಿಸುಕುವುದು ಯಾವ ಸರ್ಕಾರಕ್ಕೂ ಗೌರವ ತರುವಂತದ್ದಲ್ಲ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ. ಅತಿ ಹೆಚ್ಚು ಬಾರಿ ಬಜೆಟ್‌ಗಳನ್ನು ಮಂಡಿಸಿರುವ ದಾಖಲೆ ಮುಡಿಗೇರಿಸಿಕೊಂಡಿರುವ ಸಿದ್ದರಾಮಯ್ಯ ಅವರು ಗುತ್ತಿಗೆದಾರರ ಬಿಲ್ ಪಾವತಿಸಲಾಗದ ಪರಿಸ್ಥಿತಿಯಲ್ಲಿರುವುದು ಶೋಚನೀಯವೆನಿಸಿದೆ. ಈಗಾಗಲೇ ಹಲವಾರು ಗುತ್ತಿಗೆದಾರರು ಬಿಲ್ ಪಾವತಿಯಾಗದ ಪರಿಸ್ಥಿತಿಯಿಂದ ಹತಾಶೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದರು.

ಸಿನಿಮಾ ಇಲ್ಲದೇ ಬದುಕೋ ಶಕ್ತಿ ನಮ್ಗೆ ಇದೆ



ಬೆಂಗಳೂರು: ಸಿನಿಮಾ ಇಲ್ಲದೇ ಬದುಕುವ ಶಕ್ತಿ ನಮಗೆ ಇದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

'ನಟ್ಟು, ಬೋಲ್ಟು ಟೈಟು' ಹೇಳಿಕೆಗೆ ಚಿತ್ರರಂಗ ಟೀಕೆ ಮಾಡುತ್ತಿರುವ ವಿಚಾರವಾಗಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಟೀಕೆ ಮಾಡಲಿ ಅಂತಾನೇ ಹೇಳುತ್ತಿದ್ದೇನೆ. ಅವರಿಗೆಲ್ಲಾ ಎಷ್ಟು ಸಹಾಯ ಮಾಡಿದ್ದೇನೆ ಎಂದು ನನಗೂ ಗೊತ್ತಿದೆ, ಸಹಾಯ ಮಾಡಿಸಿಕೊಂಡವರಿಗೂ ಗೊತ್ತಿದೆ ಎಂದರು.

ಇದು ರಾಜ್ಯದ ಹಣ, ನೆಲ, ಜಲ, ನಿಮ್ಮ ಭಾಷೆ. ಈಗ ಅಂತಾರಾಷ್ಟ್ರೀಯ ಫಿಲಂ ಫೆಸ್ಟಿವಲ್ ಮಾಡಿರುವುದು ಅವರ ಚಿತ್ರ ಬೆಳೆಯಲಿ ಎಂದು. ಅವರ ಚಿತ್ರಗಳಿಗೆ ಪ್ರಚಾರ ಅವ್ರು ಮಾಡದೇ ನಾವು ಬೆಳಗ್ಗೆ ಸಂಜೆ ಮಾಡೋಕೆ ಆಗುತ್ತಾ? ಎಂದು ಪ್ರಶ್ನಿಸಿದರು.

ನಾಗಾಭರಣ ಅವರನ್ನು ಆಹ್ವಾನ ಮಾಡದೇ ಇರುವ ಬಗ್ಗೆ ಪ್ರತಿಕ್ರಿಯಿಸಿ, ನಾಗಾಭರಣ ಅವರಿಗೆ ಆಮಂತ್ರಣ ಕೊಡದೇ ಇರಬಹುದು. ಇದರಲ್ಲಿ ಇಲಾಖೆಯ ತಪ್ಪಿದೆಯೋ ಗೊತ್ತಿಲ್ಲ. ಆದರೆ ಕಾರ್ಯಕ್ರಮ ಅವರದ್ದು. ನನಗೆ ಗೊತ್ತು ಅವರು ಟೀಕೆ ಮಾಡುತ್ತಾರೆ ಎಂದು. ಅವರು ಟೀಕೆ ಮಾಡಿದರೂ ನನಗೇನೂ ಬೇಜಾರಿಲ್ಲ. ನಾವು ತಪ್ಪು ಮಾಡಿದ್ದರೆ ನಾವು ಸರಿ ಮಾಡಿಕೊಳ್ಳುತ್ತೇವೆ. ಅವರು ತಪ್ಪು ಮಾಡಿದರೆ ಅವರು ಸರಿ ಮಾಡಿಕೊಳ್ಳಲಿ ಎಂದು ಹೇಳಿದರು.

ಫಿಲಂ ಇಲ್ಲದೇ ಬದುಕುವ ಶಕ್ತಿ ನಮಗೆ ಇದೆ. ಆದರೆ ಅವರಿಗೆ ಫಿಲಂ ಪ್ರಮೋಷನ್‌ಗೆ ಜನರೂ ಬೇಕು, ಸರ್ಕಾರವೂ ಬೇಕು ಎಂದು ಹೇಳಿದರು.

ಪುರೋಹಿತ ಕಾರ್ಮಿಕ ಫೆಡರೇಷನ್‌ನ ಕಚೇರಿ ಉದ್ಘಾಟನೆ

ಹಿಂದೆ ಪುರೋಹಿತರೆಂದರೆ ಪುರದ ಹಿತ ಕಾಯುವವರು ಎನ್ನುತ್ತಿದ್ದರು; ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮ್‌ಪ್ರಸಾದ್



ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಆರಂಭಿಸಿರುವ ಅಖಿಲ ಭಾರತ ಅಸಂಘಟಿತ ಪುರೋಹಿತ ಕಾರ್ಮಿಕ ಫೆಡರೇಷನ್‌ನ ಮೈಸೂರು ಜಿಲ್ಲಾ ಮತ್ತು ತಾಲೂಕು ಘಟಕದ ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಒಕ್ಕೂಟದ ಸದಸ್ಯರಿಗೆ ಜೀವ ವಿಮೆ ಪತ್ರಗಳನ್ನು ವಿತರಣೆ ಮಾಡಲಾಯಿತು.

ಮೈಸೂರು,ಮಾ.4(ಪಿಎಂ)– ಅಖಿಲ ಭಾರತ ಅಸಂಘಟಿತ ಪುರೋಹಿತ ಕಾರ್ಮಿಕ ಫೆಡರೇಷನ್‌ನ ಮೈಸೂರು ಜಿಲ್ಲಾ ಮತ್ತು ತಾಲೂಕು ಘಟಕದ ಕಚೇರಿ ಮಂಗಳವಾರ ಉದ್ಘಾಟನೆಗೊಂಡಿತು.

ಮೈಸೂರಿನ ವಿದ್ಯಾರಣ್ಯಪುರಂನ ಅಂದಾನಿ ವೃತ್ತದ ಸಮೀಪದಲ್ಲಿ ಆರಂಭಿಸಿರುವ ಕಚೇರಿಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮ್‌ಪ್ರಸಾದ್, ಪುರೋಹಿತರು ಎಂದರೆ ಹಿಂದೆ ಪುರದ ಹಿತ ಕಾಯುವವರು ಎನ್ನುತ್ತಿದ್ದರು. ಈ ನಿಟ್ಟಿನಲ್ಲಿ ಒಕ್ಕೂಟ ಹೆಜ್ಜೆ ಇಡಬೇಕು. ಪುರೋಹಿತರು ಜನರೊಂದಿಗೆ ನಿಕಟ ಸಂಪರ್ಕ ಹೊಂದಬೇಕು ಎಂದು ತಿಳಿಸಿದರು.

ಅಭ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಧಾರ್ಮಿಕ ವಿಧಿವಿಧಾನ, ಶಾಸ್ತ್ರಗಳ ಕುರಿತಂತೆ ಜ್ಞಾನ ವೃದ್ಧಿಸಿಕೊಳ್ಳಬೇಕು. ಇದರಿಂದ ನಮ್ಮ ಸಂಸ್ಕೃತಿಯ ಬಗ್ಗೆ ಜ್ಞಾನ ಮತ್ತು ಅದರ ಆಚಾರ–ವಿಚಾರಗಳಲ್ಲಿ ಪುರೋಹಿತ ವರ್ಗ ಪರಿಣತಿ ಸಾಧಿಸಲು ಸಾಧ್ಯವಾಗಲಿದೆ ಎಂದರು. ಹತ್ತಾರು ಕಾರ್ಯಕ್ರಮಗಳ ಮೂಲಕ ಪುರೋಹಿತ ಸಮುದಾಯ ಸಂಘಟನೆಯಾಗಬೇಕು. ಒಕ್ಕೂಟದಿಂದ ಆರೋಗ್ಯ ತಪಾಸಣಾ ಶಿಬಿರದ ಉಚಿತ ಆಯೋಜನೆ ಮಾಡಬೇಕು. ಅದಕ್ಕಾಗಿ ಪ್ರಾಯೋಜಕತ್ವ ಪಡೆಯುವ ಅವಕಾಶ ಬಳಸಿಕೊಳ್ಳಬೇಕು. ಜೊತೆಗೆ ಸರ್ಕಾರ ವಿವಿಧ ಯೋಜನೆಗಳ ಪ್ರಯೋಜನವನ್ನು ಸಂಘಟನೆ ಮೂಲಕ ಪಡೆಯಲು ಮುಂದಾಗಬೇಕು. ಪುರೋಹಿತರನ್ನು ಒಕ್ಕೂಟದ ಪದಾಧಿಕಾರಿಗಳು ಭೇಟಿ ಮಾಡಿ, ಸದಸ್ಯತ್ವ ಮಾಡಿಸಿ ಸಂಘಟನೆ ಮಾಡಬೇಕು. ಸದಸ್ಯತ್ವ ಮಾಡಿಕೊಳ್ಳುವುದರಿಂದ ದೊರೆಯುವ ಪ್ರಯೋಜನಗಳ ಬಗ್ಗೆ ಕರಪತ್ರದ ಮೂಲಕ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ದಾನಿಗಳ ಮೂಲಕ ಸಂಕಷ್ಟದಲ್ಲಿರುವ ಪುರೋಹಿತ ಕುಟುಂಬಗಳಿಗೆ ನೆರವಾಗಲು ಒಕ್ಕೂಟ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು. ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಪರಿಪಾಠ ಬೆಳೆಸಿಕೊಳ್ಳಬೇಕು. ಒಕ್ಕೂಟದ ಪದಾಧಿಕಾರಿಗಳು ಸಮರ್ಪಣಾ ಮನೋಭಾವದಿಂದ ತೊಡಗಿಸಿಕೊಂಡರೆ ಮೈಸೂರು ಭಾಗದ ಪುರೋಹಿತರು ಸಂಘಟನೆಯಾಗಲು ಸಾಧ್ಯವಿದೆ. ಕೆಲಸ ಮಾಡಿದರೆ ಯಶಸ್ಸು ಲಭಿಸಲಿದ್ದು ಪುರೋಹಿತರ ಒಕ್ಕೂಟವೆಂದರೆ ಜನ ಬಯಸುವಂತೆ ಆಗಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ್ ಅಯ್ಯಂಗಾರ್ ಮಾತನಾಡಿ, ಪುರೋಹಿತ ವರ್ಗದ ಶ್ರೇಯೋಭಿವೃದ್ಧಿಗಾಗಿ ಇಂತಹ ಸಂಘಟನೆ ನಿಜಕ್ಕೂ ಅಗತ್ಯವಿತ್ತು. ಮಂಗಳ ಕಾರ್ಯಗಳ ನೇತೃತ್ವ ವಹಿಸುವಲ್ಲಿ ಪುರೋಹಿತರ ಪಾತ್ರ ಸಮಾಜದಲ್ಲಿ ಮಹತ್ವ ಹೊಂದಿದೆ ಎಂದು ತಿಳಿಸಿದರು.

ಇದೇ ವೇಳೆ ಜೀವ ವಿಮೆ ಪತ್ರಗಳನ್ನು ಒಕ್ಕೂಟದ ಸದಸ್ಯರಿಗೆ ಉಚಿತವಾಗಿ ವಿತರಣೆ ಮಾಡಲಾಯಿತು. ಒಕ್ಕೂಟದ ರಾಷ್ಟ್ರೀಯ ಕಾರ್ಯದರ್ಶಿ ಸತೀಶ್ ಸಿಂಹ, ಜಿಲ್ಲಾ ಮತ್ತು ತಾಲೂಕು ಘಟಕದ ಅಧ್ಯಕ್ಷ ಸಂತೋಷ್‌ಕುಮಾರ್ ದೇಶಿಕ್, ಗೌರವಾಧ್ಯಕ್ಷ ಎನ್.ಲಕ್ಷ್ಮೀಶ, ಕಾರ್ಯದರ್ಶಿ ರವಿಶಂಕರ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ಬೇಗ ಎದ್ದೇಳು ಭೂಕಂಪ ಆಗ್ತಿದೆ. ಇಡೀ ಮನೆ ನಡುಗುತ್ತಿದೆ.

ಹೆಂಡತಿ : ಸುಮ್ನೆ ಮಲ್ಕೊಳ್ರಿ.... ಮನೆ ಬಿದ್ರೆ ನಮ್ಗೇನು? ನಾವು ಬಾಡಿಗೆಗಿದ್ದೀವಿ ತಾನೆ!

ಮೈಸೂರು ಮಿತ್ರ

ಬುಧವಾರ, 5 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಜಗತ್ತಿನಲ್ಲಿ ಎಷ್ಟೆಲ್ಲ ಸಾಮ್ರಾಟರಿದ್ದರೋ ಅವರೆಲ್ಲ ಇಟ್ಟಿಗೆ–ಮಣ್ಣಿನ ಅಡಿಯಲ್ಲಿ ಹೂತು ಹೋಗಿದ್ದಾರೆ. ಹಾಗಿದ್ದೂ ಅವನು ಅರಸ, ಇವನು ಗುಲಾಮನೆಂದು ಭೇದವೇಕೆ ಮಾಡುವುದು? ಎಲ್ಲರನ್ನೂ ಸಮಾನವಾಗಿ ಪ್ರೀತಿಸು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಂಗ ಮೊಸರು ತಿಂದು ಮೇಕೆ ಬಾಯಿಗೆ ಸವರಿದ ಹಾಗಾಯಿತು

ನಿಮ್ಮ ಪತ್ರಗಳು

■ ಡಿಕೆಶಿ ಹೇಳಿದ್ದು ಸರಿ, ಆದರೆ ಬೋಲ್ಟು ನಟ್ಟು ಭಾಷೆ ಶೋಭೆಯಲ್ಲ!

ಮಾನ್ಯರೆ,

ಬೆಂಗಳೂರಿನಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಮಾರಂಭಕ್ಕೆ ಚಲನಚಿತ್ರೋದ್ಯಮದವರು ಹೆಚ್ಚು ಜನ ಬಂದಿಲ್ಲವೆಂಬ ಕಾರಣಕ್ಕೆ ತುಸು ಕೋಪ ಹಾಗೂ ಬೇಸರದ ನುಡಿಗಳನ್ನು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ್ದಾರೆ. ಹಾಗೆ ನೋಡಿದರೆ ಚಿತ್ರರಂಗದವರ ಬಗ್ಗೆ ಡಿಕೆಶಿಯವರ ಬೋಲ್ಟು ನಟ್ಟು ಭಾಷೆ ಹೊರತುಪಡಿಸಿ ಉಳಿದ ಮಾತುಗಳೆಲ್ಲವೂ ಸತ್ಯವಾಗಿಯೇ ಇದೆ.

ಏಕೆಂದರೆ ಹಲವು ಬಾರಿ ಕನ್ನಡ ಚಲನಚಿತ್ರರಂಗ ಸಂಕಷ್ಟದಲ್ಲಿ ಇದ್ದಾಗ ಸರ್ಕಾರ ಸಾಕಷ್ಟು ನೆರವು ನೀಡಿದೆ. ಕನ್ನಡ ಚಲನಚಿತ್ರ ರಂಗದ ಉಳಿವು ಹಾಗೂ ಬೆಳವಣಿಗೆಗೆ ಹಲವು ರೀತಿಯಲ್ಲಿ ಸಹಾಯಹಸ್ತ ಚಾಚಿದೆ. ಚಿತ್ರರಂಗಕ್ಕೆ ಅನುಕೂಲವಾಗುವ ಹಲವಾರು ಯೋಜನೆಗಳು ಸರ್ಕಾರದಿಂದ ಘೋಷಣೆಯಾಗಿದ್ದು, ಇದರಿಂದ ಕನ್ನಡ ಚಿತ್ರರಂಗ ಮತ್ತಷ್ಟು ಬೆಳೆಯಲು ಪೂರಕವಾಗಿದೆ. ಈ ರೀತಿ ತಾವುಗಳು ಹಾಗೂ ಚಿತ್ರೋದ್ಯಮ ಸಂಕಷ್ಟದಲ್ಲಿದ್ದಾಗ ಒಟ್ಟಾಗಿ ಬಂದು ಸರ್ಕಾರದ ಬಳಿ ನೆರವಿಗೆ ಕೋರುವ ಚಿತ್ರರಂಗದ ಮಂದಿ, ಅದೇ ತಮ್ಮದೇ ಅಂತಾರಾಷ್ಟ್ರೀಯ ಚಿತ್ರೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಪ್ರಮುಖರು ಗೈರು ಹಾಜರಾಗಿರುವುದು ಎಂತಹವರಿಗೂ ಬೇಸರ ತರಿಸುವ ಸಂಗತಿಯೆ. ಅಲ್ಲದೇ ಈ ಹಿಂದೆ ಡಾ.ರಾಜಕುಮಾರ್ ಅವರು ಬದುಕಿದ್ದಾಗ ಕನ್ನಡ ನಾಡುನುಡಿಯ ವಿಷಯ ಬಂದಾಗ ಇಡೀ ಚಿತ್ರರಂಗವೇ ಒಗ್ಗಟ್ಟಾಗಿ ನಿಂತು ಸರ್ಕಾರದೊಂದಿಗೆ ಕೈಜೋಡಿಸಿದ ಉದಾಹರಣೆಗಳು ಸಾಕಷ್ಟಿವೆ. ಆದರೆ ಇತ್ತೀಚಿನ ಕನ್ನಡ ಚಿತ್ರರಂಗ ಹೇಗೆ ಎಂದರೆ ಸರ್ಕಾರದ ಸಹಾಯಧನ ಬೇಕು, ತಾವು ತಯಾರಿಸಿದ ಕನ್ನಡ ಚಲನಚಿತ್ರಗಳಿಗೆ ಸಬ್ಸಿಡಿ ಬೇಕು. ಸರ್ಕಾರದ ವತಿಯಿಂದ ಫಿಲಂ ಸಿಟಿ ನಿರ್ಮಾಣವಾಗಬೇಕು. ಆದರೆ ಕನ್ನಡದ ನೆಲಜಲದ ವಿಷಯದಲ್ಲಿ ಸರ್ಕಾರದ ಸಹಭಾಗಿತ್ವದೊಂದಿಗಿನ ಹೋರಾಟದಲ್ಲಿ ತಮ್ಮದು ತಾತ್ಸಾರ ಎಂದರೆ ಹೇಗೆ?

ಕನ್ನಡ ಚಲನಚಿತ್ರ ನಟ ನಟಿಯರು ಹಾಗೂ ಕನ್ನಡ ಚಿತ್ರೋದ್ಯಮ ಬೆಳದಿರುವುದು ಸರ್ಕಾರದ ನೆರವಿನಿಂದ ಹಾಗೂ ಕನ್ನಡ ಚಿತ್ರ ರಸಿಕರ ಪ್ರೀತಿಯಿಂದ. ಈ ಸತ್ಯವನ್ನು ಕನ್ನಡದ ಎಲ್ಲಾ ಚಿತ್ರೋದ್ಯಮ ಮಂದಿ ನೆನಪಿಟ್ಟುಕೊಂಡು ಕನ್ನಡ ನಾಡು ನುಡಿ ಹಾಗೂ ಕನ್ನಡ ಚಿತ್ರರಂಗದ ಬೆಳವಣಿಗೆಗೆ ಸರ್ಕಾರದೊಂದಿಗೆ ಕೈಜೋಡಿಸಬೇಕಿದೆ. ಅಲ್ಲದೇ ಮಾನ್ಯ ಉಪ ಮುಖ್ಯಮಂತ್ರಿಯಾದ ಡಿಕೆಶಿಯವರು ಕೂಡ ಕಟು ಶಬ್ದಗಳನ್ನು ಬಳಸುವ ಪರಿಪಾಠವನ್ನು ಇನ್ನಾದರೂ ಬಿಟ್ಟು ಪ್ರೀತಿಯಿಂದ ಕನ್ನಡ ಚಿತ್ರೋದ್ಯಮದ ತೇರನ್ನು ಎಳೆಯುವುದು ಕೂಡ ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ನೀರಿನ ಕೊರತೆ

ಮಾನ್ಯರೇ

ಮಾ.3ರ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾಗಿರುವ ಲೇಖಕ ಮಿರ್ಲೆ ಚಂದ್ರಶೇಖರ್ ಅವರ ನೀರಿನ ಕೊರತೆ ನೀಗಿಸಲೇಬೇಕಿದೆ ಒಂದು ಸಕಾಲಿಕ ಬರಹ. ಅನೇಕ ಉಪಯುಕ್ತ ಅಂಕಿ–ಅಂಶಗಳನ್ನು ಮತ್ತು ನೀರಿನ ಬವಣೆಗೆ ಇರುವ ಪರಿಹಾರಗಳನ್ನು ಸವಿವರವಾಗಿ ತಿಳಿಸಿದ್ದಾರೆ. ಲೇಖಕರು ಅಭಿನಂದನಾರ್ಹರು.

–ಲಕ್ಷ್ಮಣ್ ಗೊರ್ಲಕಟ್ಟೆ, ವಿಜಯನಗರ ಮೈಸೂರು

■ ಸಂಘರ್ಷದ ಹಾದಿ ಸರಿಯಲ್ಲ

ಮಾನ್ಯರೆ,

ರಾಜ್ಯದ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಮತ್ತೆ ಎರಡು ತಿದ್ದುಪಡಿ ಮಸೂದೆಗಳನ್ನು ರಾಜ್ಯ ಸರ್ಕಾರಕ್ಕೆ ಹಿಂದಿರುಗಿಸಿ ಕಳುಹಿಸಿದ್ದಾರೆ. ಈ ಮಸೂದೆಗಳು ಎರಡನೇ ಬಾರಿಗೆ ರಾಜ್ಯಪಾಲರಿಂದ ತಿರಸ್ಕೃತಗೊಂಡಿರುವುದು ಗಮನಾರ್ಹವಾಗಿದೆ. ರಾಜ್ಯದ ಶಾಸಕಾಂಗ ಅಂಗೀಕರಿಸಿರುವ ಮತ್ತೆ ಕೆಲವು ಮಸೂದೆಗಳು ಸಹ ರಾಜ್ಯಪಾಲರಿಂದ ತಿರಸ್ಕೃತಗೊಂಡು, ರಾಜ್ಯ ಸರ್ಕಾರ ಮತ್ತು ರಾಜ್ಯಪಾಲರ ನಡುವೆ ನಡೆಯುತ್ತಿರುವ ಶೀಥಲ ಸಮರಕ್ಕೆ ಸಾಕ್ಷಿಯಾಗಿದೆ. ನೆರೆಯ ಕೇರಳ, ತಮಿಳುನಾಡು ಮತ್ತು ದೂರದ ಪಶ್ಚಿಮಬಂಗಾಳದಲ್ಲಿ ಕೂಡ ಇಂತಹುದೇ ಪರಿಸ್ಥಿತಿ ಇದೆ. ಈ ವಿಚಾರದಲ್ಲಿ ತಮಿಳುನಾಡಿನ ರಾಜ್ಯಪಾಲ ಎನ್.ಆರ್.ರವಿ ವಿರುದ್ಧ ತಮಿಳುನಾಡು ರಾಜ್ಯ ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿರುವ ದೂರು ಈಗ ವಿಚಾರಣೆಯ ಹಂತದಲ್ಲಿದೆ.

ರಾಜ್ಯಪಾಲರು ಸಂವಿಧಾನಬದ್ಧವಾಗಿ ನಡೆದುಕೊಂಡು ತಮ್ಮ ಇತಿಮಿತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಸಕಾರಣವಿಲ್ಲದೇ ರಾಜ್ಯ ಸರ್ಕಾರದ ಜೊತೆ ಸಂಘರ್ಷದ ಹಾದಿ ತುಳಿಯಬಾರದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ನೀರು ಉಳಿತಾಯ ಮಾಡಲು ಉತ್ತಮ ಉಪಾಯ

ಮಾನ್ಯರೆ,

ಫ್ಲಶ್–ಶೌಚಗಳಿಂದ ಆಗುತ್ತಿರುವ ನೀರಿನ ಪೋಲಿನತ್ತ ಲಕ್ಷ್ಮಣ್ ಗೊರ್ಲಕಟ್ಟೆ ಅವರು ಗಮನ ಸೆಳೆದಿರುವುದು ಶ್ಲಾಘನೀಯ. ಫ್ಲಶ್–ಟಾಯ್ಲೆಟ್ಟುಗಳಿಂದ ಆಗುವ ಈ ಪರಿಯ ನೀರು ಪೋಲನ್ನು ಕೊಂಚವಾದರೂ ತಗ್ಗಿಸಬಹುದಾದ ಸುಲಭೋಪಾಯವೊಂದು ಜಪಾನಿನಲ್ಲಿ ಜಾರಿಯಲ್ಲಿದೆ ಎಂದು ಕೇಳಿರಬಹುದು.

ಇದನ್ನು ಹೋಟೆಲುಗಳಲ್ಲಿ ಅಳವಡಿಸಿಕೊಳ್ಳಬಹುದು. ವಾಷ್–ಬೇಸಿನ್, ಸಿಂಕುಗಳಲ್ಲಿ ನಳದಿಂದ ಹರಿದ ನೀರು ಸುರಿದು ಕೆಳಪೈಪಿನಿಂದ ನಿರ್ಗಮಿಸುತ್ತದೆ. ಈ ನೀರಿನಲ್ಲಿ (ಇದೂ ಮಲಿನಗೊಂಡ ನೀರೇ!) ಘನ–ತ್ಯಾಜ್ಯಗಳು ಇರದಂತೆ ಸೋಸಿ ಒಂದೆಡೆ ಸಂಗ್ರಹಿಸಿ ಇರಿಸಿಕೊಳ್ಳುವರು.

ಟಾಯ್ಲೆಟ್ಟುಗಳ ನೀರು–ಧಾರಕಗಳಿಗೆ ಮಾತ್ರ ಹೀಗೆ ಸಂಗ್ರಹಿಸಲ್ಪಟ್ಟ ನೀರನ್ನು ತುಂಬಿಸುವ ವ್ಯವಸ್ಥೆ ಮಾಡುತ್ತಾರೆ. ಇದರಿಂದ ದಂಡವಾಗಬೇಕಿದ್ದ ನೀರಿನ ಮರುಬಳಕೆ ಆಗುತ್ತದೆ. ಇದರಲ್ಲಿ ಯಾವ ಹೈಟೆಕ್ಕೂ ಇಲ್ಲ! ನಮ್ಮ ನಗರದ ಹಿರಿಯ ಹೋಟೆಲುಗಳಲ್ಲಿ ಇದನ್ನು ಅಳವಡಿಸಿಕೊಂಡು ನೀರುಳಿತಾಯ ಮಾಡಿಕೊಳ್ಳಲು ಸಾಧ್ಯ. ಈ ಉಪಾಯ ನಮ್ಮ ದೇಶದವರಿಗೆ ಏಕೆ ಹೊಳೆಯಲಿಲ್ಲಾ ಎಂದು ತಿಳಿಯದು. ಜತೆಗೆ, ಗೊರ್ಲಕಟ್ಟೆಯವರು ಸೂಚಿಸುವ ಬಟನ್ ಅನ್ನು ಅರೆವಾಸಿ ಒತ್ತುವ ಸೂಚನೆಯನ್ನೂ ಪಾಲಿಸಬಹುದು.

–ಡಿ.ವಿ.ಎಂ. ಪ್ರಕಾಶ್, ಗೋಕುಲ ರಸ್ತೆ, 2ನೇ ಬ್ಲಾಕ್, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಬಸವ ಮಾರ್ಗ ಫೌಂಡೇಶನ್

ಭಾನುವಾರದ ದಿನ (2.3.2025) ಮಿತ್ರ ನವೀನ್ ಅವರ ಆಹ್ವಾನದ ಮೇರೆಗೆ ಬಸವ ಮಾರ್ಗ ಫೌಂಡೇಶನ್ ಸಂಸ್ಥೆಯ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದೆ. ಅಲ್ಲಿ ಅಪೂರ್ವ ದೃಶ್ಯಗಳ ಅನುಭವವಾಯಿತು. ಅದನ್ನು ಹಂಚಿಕೊಳ್ಳಲು ಕೆಲವು ಮಾತುಗಳನ್ನು ಬರೆಯುತ್ತಿದ್ದೇನೆ.

ಮದ್ಯಪಾನವೆಂಬ ವ್ಯಸನ ಅಥವಾ ಚಟವು ಮಾನವ ಕುಲಕ್ಕೆ ಯಾವಾಗ ಅಂಟಿಕೊಂಡಿತೋ ತಿಳಿಯದು. ಅಂದಿನಿಂದ ಇಂದಿನವರೆಗೆ ಮಾಡಿರುವ ಅನರ್ಥಗಳಿಗೆ ಕೊನೆಯಿಲ್ಲ. ಹಲವಾರು ರಾಜರು ಮದ್ಯದ ದಾಸರಾಗಿದ್ದರೆಂಬುದನ್ನು ಕೇಳಿದ್ದೇವೆ. ವಾಲ್ಮೀಕಿ ರಾಮಾಯಣದಲ್ಲಿ ಕಿಷ್ಕಿಂಧಕಾಂಡದಲ್ಲಿ ಸುಗ್ರೀವನು ರಾಜನಾದಾಗ ಮದಮತ್ತನಾಗಿದ್ದನೆಂದು ಹೇಳಲಾಗಿದೆ. ಲಕ್ಷ್ಮಣನು ಕೋಪಾವಿಷ್ಟನಾಗಿ ಕಿಷ್ಕಿಂಧಾನಗರವನ್ನು ಪ್ರವೇಶಿಸಿದಾಗ ಅವನನ್ನು ಸಮಾಧಾನಗೊಳಿಸಲು ಸುಗ್ರೀವನು ತಾರೆಯನ್ನು ಕಳುಹಿಸುತ್ತಾನೆ. ಆಗ ಅವಳೂ ಪಾನ ಮಾಡಿದ್ದಳು. ಅವಳ ಹೆಜ್ಜೆ ಎಡವುತ್ತಿತ್ತು ಎಂದು ವಾಲ್ಮೀಕಿಗಳು ವರ್ಣಿಸಿದ್ದಾರೆ. ಇದರಿಂದ ಸ್ತ್ರೀಯರೂ ಆಗ ಮದ್ಯಪಾನವನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಇಂದಿನ ದಿನದಲ್ಲಿ ಸರ್ಕಾರಗಳು ಮದ್ಯವನ್ನು ಆದಾಯದ ಮೂಲವೆಂದು ಪರಿಗಣಿಸಿ ಮದ್ಯೋದ್ಯಮವನ್ನೂ ಮದ್ಯದ ಮಾರಾಟವನ್ನು ಪ್ರೋತ್ಸಾಹಿಸುತ್ತವೆ. ಪ್ರತಿಯೊಂದು ಊರಿನಲ್ಲಿಯೂ ಮದ್ಯದ ಅಂಗಡಿಗಳಿವೆ. ಇದರಿಂದ ಮುಗ್ಧ ಯುವಕರು ಮದ್ಯಪಾನದ ಚಟಕ್ಕೆ ಬಲಿಯಾಗಿ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಅನೇಕ ಸ್ತ್ರೀಯರೂ ಈ ಬಲೆಯಲ್ಲಿ ಬಿದ್ದು ಬಿಡಿಸಿಕೊಳ್ಳಲಾಗದೆ ಒದ್ದಾಡುತ್ತಿದ್ದಾರೆಂಬುದು ಇಂದಿನ ವಾಸ್ತವ.

ಅಂತಹವರನ್ನು ಪಾನದ ವಿಷವರ್ತುಲದಿಂದ ಬಿಡಿಸಿ, ವ್ಯಸನ ಮುಕ್ತರನ್ನಾಗಿ ಮಾಡಿ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆಯನ್ನು ನೀಡಲು ಮೈಸೂರಿನಲ್ಲಿ ಉದಯಿಸಿರುವ ಸಂಸ್ಥೆ ಬಸವ ಮಾರ್ಗ ಫೌಂಡೇಶನ್. ಇದರ ಸ್ಥಾಪನೆಯಾದದ್ದು 2019–20ರಲ್ಲಿ. ಕಳೆದ ಐದು ವರ್ಷಗಳಲ್ಲಿ ಇದು ಬೆಳೆದು ಈಗ ನಾಲ್ಕು ಶಾಖೆಗಳನ್ನು ಹೊಂದಿದೆ. ಇದುವರೆಗೆ ಸಾವಿರಾರು ಮದ್ಯವ್ಯಸನಿಗಳು ಇಲ್ಲಿನ ಶಿಬಿರಗಳಲ್ಲಿ ಭಾಗವಹಿಸಿ ವ್ಯಸನಮುಕ್ತರಾಗಿ ತಮ್ಮ ಸುಂದರ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ.

ಆರಂಭ ಹೇಗಾಯಿತು?

ಮೈಸೂರಿನ ಕೆ.ಜಿ. ಕೊಪ್ಪಲಿನ ನಿವಾಸಿ ಶ್ರೀ ಸೋನಿಕರಿಗೌಡ ಮತ್ತು ಬಸಮ್ಮನವರ ಮೊಮ್ಮಗ, ಶ್ರೀ ಶ್ರೀನಿವಾಸ್ ಹಾಗೂ ಶ್ರೀಮತಿ ಚೆನ್ನಮ್ಮನವರ ಮಗ ಶ್ರೀ ಬಸವರಾಜ್ ಅವರು ಬಸವ ಮಾರ್ಗ ಫೌಂಡೇಶನ್‌ನ ಮುಖ್ಯ ಸಂಸ್ಥಾಪಕರು. ವಿಶೇಷವೇನೆಂದರೆ ಬಸವರಾಜ್ ಸ್ನೇಹಿತರ ಬಲವಂತದಿಂದ ಶೋಕಿಗಾಗಿ ಮದ್ಯಪಾನವನ್ನಾರಂಭಿಸಿದ್ದರಂತೆ. ಕೆಲವೇ ದಿನಗಳಲ್ಲಿ ಅದು ವ್ಯಸನ (ಬಿಡಲಾಗದ ಚಟ)ವಾಗಿ ಪರಿಣಮಿಸಿತ್ತು. ನೆಮ್ಮದಿಯನ್ನು ಮನಃಶಾಂತಿಯನ್ನು ಕಳೆದುಕೊಂಡದ್ದಲ್ಲದೆ ಮಾತಾಪಿತೃಗಳ ಕೋಪಕ್ಕೆ ಗುರಿಯಾದರು. ಆಗ ದೈವಪ್ರೇರಣೆಯಿಂದ ಮದ್ಯವನ್ನು ಮುಟ್ಟುವುದಿಲ್ಲ ಎಂದು ಸಂಕಲ್ಪ ಮಾಡಿ ವ್ಯಸನಮುಕ್ತರಾದರು.

ತನ್ನಂತೆ ನಾನಾ ಕಾರಣಗಳಿಂದ ಮದ್ಯಪಾನವನ್ನು ಆರಂಭಿಸಿ ಅದರ ಜಾಲದಲ್ಲಿ ಸಿಕ್ಕಿಕೊಂಡು ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿರುವ ಜನರಿಗೆ ಅದರಿಂದ ಬಿಡುಗಡೆ ಮಾಡಿಸಿ ಹೊಸದಾರಿಯನ್ನು ಹಾಕಿಕೊಡಲು ಶ್ರೀ ಬಸವರಾಜ್ ಸಂಕಲ್ಪಿಸಿದರು. ಅದರ ಫಲವೇ



ಬಸವ ಮಾರ್ಗ ಫೌಂಡೇಶನ್. ಮನೋವೈದ್ಯರು, ಆಪ್ತ ಸಮಾಲೋಚಕರನ್ನು ನಿಯೋಜನೆಗೊಳಿಸಿ 21 ದಿನಗಳ ಶಿಬಿರದಲ್ಲಿ ಮದ್ಯವ್ಯಸನದಿಂದ ಮುಕ್ತರಾಗುವ ವೈಜ್ಞಾನಿಕ ವಿಧಾನಗಳನ್ನು ಇಲ್ಲಿ ಅನುಸರಿಸಲಾಗುತ್ತಿದೆ.

ಈ ಲೇಖಕನು ಭಾನುವಾರ (2.3.2025) ಕಾರ್ಯಕ್ರಮಕ್ಕೆ ಹೋದಾಗ ಅಲ್ಲಿ ನಲವತ್ತು ಜನ ಮದ್ಯ ವ್ಯಸನಮುಕ್ತ ಶಿಬಿರಾರ್ಥಿಗಳಿದ್ದರು. ಅವರು ಕರ್ನಾಟಕ ರಾಜ್ಯದ ನಾನಾ ಭಾಗಗಳಿಂದ ಬಂದವರು. ಸಮಾರಂಭದಲ್ಲಿ ಅವರ ಸುಸಂಸ್ಕೃತ ನಡವಳಿಕೆಯನ್ನು ನೋಡಿ ವಿಸ್ಮಯ ಸಂತೋಷಗಳಾದುವು. ಸಂಸ್ಥೆಯವರು ಅವರೆಲ್ಲರಿಗೂ ಅರ್ಹತಾ ಪತ್ರಗಳನ್ನು ವಿತರಿಸಿದರು. ಒಬ್ಬಿಬ್ಬರನ್ನು ಬಿಟ್ಟರೆ ಆ ಶಿಬಿರದಲ್ಲಿದ್ದವರೆಲ್ಲ ತರುಣರು. ತಮ್ಮ ಅನುಭವಗಳನ್ನು ಅವರು ಬಿಚ್ಚಿಟ್ಟರು. ಅವರ ಪೋಷಕರೂ ಅಲ್ಲಿಗೆ ಬಂದಿದ್ದರು. ಅವರ ಮುಖಗಳು ಆನಂದಭಾಷ್ಪಗಳಿಂದ ತುಂಬಿದ್ದವು.

ಮದ್ಯಪಾನವೆಂಬುದು ಒಂದು ಉದಾಹರಣೆ ಮಾತ್ರ. ಇಂದು ಯುವಕರನ್ನು, ವಿದ್ಯಾರ್ಥಿಗಳನ್ನು ಅಡ್ಡದಾರಿಗೆ ಎಳೆದು ಪ್ರಪಾತಕ್ಕೆ ತಳ್ಳುವ ಹಲವು ಮಾದಕ ವಸ್ತುಗಳಿವೆ. ಅವುಗಳನ್ನು ಗುಟ್ಟಾಗಿ ಮಾರಿ ಲಾಭ ಮಾಡಿಕೊಳ್ಳುವ ಸಮಾಜದ್ರೋಹಿಗಳಿದ್ದಾರೆ. ಬಸವ ಮಾರ್ಗ ಫೌಂಡೇಶನ್ ಅಂತಹ ವ್ಯಸನಗಳಿಗೆ ದಾಸರಾದವರನ್ನೂ ವ್ಯಸನ ಮುಕ್ತಗೊಳಿಸುವ ಕಾರ್ಯದಲ್ಲಿ ತೊಡಗಿದೆ.

ಸ್ವಯಂ ಸೇವಕರ ತಂಡ

ಕುಡಿತಕ್ಕೆ ದಾಸರಾದವರನ್ನು ಶಿಬಿರಕ್ಕೆ ಸೇರಿಸಿಕೊಂಡಾಗ ಅವರನ್ನು ನೋಡಿಕೊಳ್ಳುವುದು ಸುಲಭ ಕಾರ್ಯವಲ್ಲ. ಅವರ ಮಾನಸಿಕ ಸ್ಥಿತಿಯನ್ನು ಅರಿತುಕೊಂಡು ಪರಿವರ್ತನೆಯಲ್ಲಿ ತೊಡಗಬೇಕಾಗುತ್ತದೆ. ಹಿಂದೆ ಮದ್ಯವ್ಯಸನಿಗಳಾಗಿದ್ದು ಈಗ ವ್ಯಸನಮುಕ್ತರಾಗಿ ಸೇವಾ ಮನೋಭಾವನೆಯನ್ನು ಬೆಳೆಸಿಕೊಂಡಿರುವವರು ಇಲ್ಲಿ ಸ್ವಯಂಸೇವಕರಾಗಿದ್ದಾರೆ. ಸುಮಾರು 25 ಸ್ವಯಂ ಸೇವಕರು ಈಗ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಶಿಬಿರದಲ್ಲಿದ್ದಾಗ ವ್ಯಸನಮುಕ್ತಿಯ ಜೊತೆಗೆ ಉದ್ಯೋಗ ತರಬೇತಿ ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಶಿಬಿರದಲ್ಲಿದ್ದೇವೆಂದು ಶಿಬಿರಾರ್ಥಿಗಳು ಸೋಮಾರಿತನದಿಂದ ಕಾಲವನ್ನು ಕಳೆಯುವಂತಿಲ್ಲ. ನಗರದಲ್ಲಿ, ಉದ್ಯಾನವನಗಳಲ್ಲಿ ಅವರು ಪರಿಸರ ರಕ್ಷಣೆಗಾಗಿ ದುಡಿಯಬೇಕು. ಸೋಮಾರಿ ಮನಸ್ಸಿನಲ್ಲಿ ದೆವ್ವಗಳು ನೆಲೆಸುತ್ತವೆ. (An idle mind is the devil's workshop) ಎಂದು ಹೇಳುತ್ತಾರೆ. ವ್ಯರ್ಥವಾಗಿ ಕಾಲವನ್ನು ಕಳೆಯುವ ಬದಲು ಒಂದು ಸಸಿಯನ್ನು ನೆಟ್ಟರೆ ಅಥವಾ ನಾಲ್ಕೈದು ಗಿಡಗಳಿಗೆ ನೀರು ಸುರಿದರೆ ಪರಮಾತ್ಮನ ಪೂಜೆ ಮಾಡಿದಂತೆ ಎಂಬುದು ಸತ್ಯ. ಈ ತತ್ತ್ವವನ್ನು ಶಿಬಿರಾರ್ಥಿಗಳಿಗೆ ಮನದಟ್ಟು ಮಾಡಿ ಸೇವಾ ಕಾರ್ಯದಲ್ಲಿ ತೊಡಗಿಸಲಾಗುತ್ತಿದೆ.

ಯೋಗಾಭ್ಯಾಸ

ವ್ಯಸನಮುಕ್ತರು ತಮ್ಮ ಮನೆಗೆ ಹಿಂದಿರುಗಿದ ಮೇಲೆ ಮತ್ತೆ ವ್ಯಸನಗಳು ಅವರನ್ನು ಸೆಳೆದುಕೊಳ್ಳಬಾರದು. ಅವರು ಯೋಗಾಸನಗಳನ್ನೂ ಪ್ರಾಣಾಯಾಮವನ್ನೂ ಕಲಿತರೆ ಅವರೆಂದೂ ಮತ್ತೆ ಹಳೆಯ ಚಟಗಳಿಗೆ ಒಳಗಾಗರು. ಯೋಗವೆಂಬುದು ಒಂದು ಜೀವನ ಮಾರ್ಗ. ಅಹಿಂಸೆ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಬ್ರಹ್ಮಚರ್ಯ (ಕಾಮ ವಶರಾಗದಿರುವುದು), ಅಪರಿಗ್ರಹ (ಅನವಶ್ಯಕವಾದ ಧನಕನಕ ವಸ್ತುಗಳನ್ನು ಸಂಗ್ರಹಿಸದಿರುವುದು) ಇವೆಲ್ಲವೂ ಯೋಗಿಯ ಲಕ್ಷಣಗಳು. ಇದನ್ನೇ ಭಕ್ತಿ ಭಂಡಾರಿ ಬಸವಣ್ಣನವರು – "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ" ಎಂದು ಹೇಳಿದ್ದಾರೆ.

ಯೋಗದಿಂದ ಚಿತ್ತ (ಮನಸ್ಸು) ಶುದ್ಧವಾಗುತ್ತದೆ. ಮನಸ್ಸಿನಲ್ಲಿರುವ ಕಲ್ಮಶಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳು ತೊಲಗುತ್ತವೆ. ಮದ್ಯವ್ಯಸನ ಮುಕ್ತರಾದವರು ಯೋಗಾಭ್ಯಾಸವನ್ನು ಕಲಿತು ಮುಂದುವರಿಸಿದರೆ ಆದರ್ಶ ಪ್ರಜೆಗಳಾಗುವುದರಲ್ಲಿ ಸಂಶಯ ಇಲ್ಲ. ಈ ಉನ್ನತ ಧ್ಯೇಯದಿಂದ ಬಸವ ಮಾರ್ಗ ಫೌಂಡೇಶನ್ ಕಾರ್ಯಶೀಲವಾಗಿದೆ.

ಬುದ್ಧ, ಬಸವಣ್ಣ, ಮದರ್ ತೆರೇಸಾ, ಸಿದ್ದೇಶ್ವರಸ್ವಾಮಿ, ಕುವೆಂಪು, ಬೇಂದ್ರೆ ಮುಂತಾದವರ ಚಿತ್ರಗಳು ಬಸವ ಮಾರ್ಗದ ಕಟ್ಟಡಗಳಲ್ಲಿ ಸ್ಫೂರ್ತಿಯನ್ನು ತುಂಬುತ್ತಿವೆ. ಶಿಬಿರಾರ್ಥಿಗಳಿಗೆ ದೈಹಿಕ ಆರೋಗ್ಯಕ್ಕಾಗಿ ಉತ್ತಮ ಆಹಾರವನ್ನು ಕೊಡುವುದಷ್ಟೇ ಅಲ್ಲ, ಮಾನಸಿಕ ಆರೋಗ್ಯಕ್ಕಾಗಿ ಮತ್ತು ಬೌದ್ಧಿಕ ಬೆಳವಣಿಗೆಗಾಗಿ ಉತ್ತಮ ಸಾಹಿತ್ಯವನ್ನು ಕೊಡಲು ಪ್ರಯತ್ನಗಳಾಗುತ್ತಿವೆ. ಮನುಷ್ಯರು ಪರಿಪೂರ್ಣ ಮಾನವರಾಗಬೇಕು. ಅವರ ಮಾರ್ಗದಲ್ಲಿ ಮುಳ್ಳಿನಂತೆ ಬೆಳೆದಿರುವುದು ಮದ್ಯ, ಮಾದಕ, ಜೂಜು ಮುಂತಾದ ವ್ಯಸನಗಳು. ಬಸವ ಮಾರ್ಗದ ಸದ್ಯದ ಗುರಿ ಮದ್ಯಪಾನ, ಮಾದಕ ಸೇವನೆ ಇತ್ಯಾದಿ ಚಟಗಳನ್ನು ಬೆಳೆಸಿಕೊಂಡಿರುವವರನ್ನು ವ್ಯಸನಮುಕ್ತರನ್ನಾಗಿ ಮಾಡಿ ಅವರ ಬದುಕನ್ನು ಪರಿವರ್ತಿಸುವುದು. ಅಂತಿಮ ಗುರಿ ಇಡೀ ಸಮಾಜವನ್ನೇ ವ್ಯಸನಮುಕ್ತವನ್ನಾಗಿ ಮಾಡುವುದು. ಧೂಮಪಾನ, ಮದ್ಯಪಾನ, ಜೂಜು ಇತ್ಯಾದಿ ವ್ಯಸನಗಳು ದೀರ್ಘಕಾಲದಿಂದ ಮಾನವ ಕುಲವನ್ನು ಕಾಡುತ್ತಿರುವ ಕಾಯಿಲೆಗಳಾಗಿವೆ. ಇವು ನಿರ್ನಾಮವಾಗಬೇಕು. ಇದಕ್ಕಾಗಿ ಮಕ್ಕಳಿಗೆ ವ್ಯಸನಗಳಿಂದ ಉಂಟಾದ ಹಾನಿಯ ಬಗೆಗೆ ಅರಿವನ್ನುಂಟು ಮಾಡುವ ಪಾಠಗಳನ್ನಿಡಬೇಕು. ನಾಟಕ, ಸಿನಿಮಾ, ಟೆಲಿವಿಶನ್ ಇತ್ಯಾದಿಗಳಲ್ಲಿ ಧೂಮಪಾನ–ಮದ್ಯಪಾನ ಇತ್ಯಾದಿಗಳನ್ನು ವೈಭವೀಕರಿಸುವ ದೃಶ್ಯಗಳಿರದಂತೆ ಮಾಡಬೇಕು. ಈ ದಿಸೆಯಲ್ಲಿ ಪ್ರಯತ್ನ ಮಾಡುತ್ತಿರುವ ಬಸವ ಮಾರ್ಗದ ಸಾಫಲ್ಯವನ್ನು ನಾವೆಲ್ಲ ನಿರೀಕ್ಷಿಸೋಣ.

ಮೈಸೂರಿನಲ್ಲಿ ಆವತ್ತಿನ ದಿನಗಳಲ್ಲೇ ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡಿದ್ದ

ಸ್ಟರ್ಲಿಂಗ್, ಸ್ಕೈಲೈನ್ ಚಿತ್ರಮಂದಿರಗಳು ಇನ್ನು ನೆನಪು ಮಾತ್ರ

● ಅವಳಿ ಚಿತ್ರಮಂದಿರಗಳ ನೆಲಸಮ ಆರಂಭವಾಗಿದೆ ● ಹಳೆ ಚಿತ್ರ ಪ್ರೇಮಿಗಳಿಗೆ ಅತ್ಯಂತ ಬೇಸರದ ಸಂಗತಿ



ನೆಲಸಮಗೊಳ್ಳುತ್ತಿರುವ ಸ್ಟರ್ಲಿಂಗ್–ಸ್ಕೈಲೈನ್ ಅವಳಿ ಚಿತ್ರಮಂದಿರದ ಕಟ್ಟಡ.

ಮೈಸೂರು, ಮಾ.4(ಎಸ್‌ಬಿಡಿ)– ಬಹುಭಾಷಾ ಚಲನಚಿತ್ರಗಳ ಪ್ರದರ್ಶನದ ಮೂಲಕ ಮನೆಮಾತಾಗಿದ್ದ ಮೈಸೂರಿನ ಅವಳಿ ಚಿತ್ರಮಂದಿರಗಳಾದ ಸ್ಟರ್ಲಿಂಗ್ ಹಾಗೂ ಸ್ಕೈಲೈನ್ ಇತಿಹಾಸದ ಪುಟ ಸೇರಿವೆ.

ವಿದ್ಯಾರಣ್ಯಪುರಂನ ವಿಶ್ವೇಶ್ವರನಗರ ಕೈಗಾರಿಕಾ ಪ್ರದೇಶದಲ್ಲಿನ ಈ ಅವಳಿ ಚಿತ್ರಮಂದಿರಗಳ ನೆಲಸಮಗೊಳಿಸಲಾಗುತ್ತಿದೆ. ಸಿನಿಮಾ ಸಂಗೀತ–ಸಂಭಾಷಣೆ ಮಾರ್ದನಿಸುತ್ತಿದ್ದ ಸ್ಥಳದಲ್ಲೀಗ ಜೆಸಿಬಿಗಳು ಘರ್ಜಿಸುತ್ತಿವೆ. ಚಲನಚಿತ್ರಗಳ ಸುಂದರ ದೃಶ್ಯಗಳ ಬದಲು ಬೀಳುವ ಗೋಡೆಗಳ ಧೂಳು ಆವರಿಸುತ್ತಿದೆ. ಮೂರ್ನಾಲ್ಕು ದಶಕಗಳಿಂದ ಸಿನಿಮಾ ಪ್ರಿಯರನ್ನು ರಂಜಿಸಿದ ಅವಳಿ ಬೆಳ್ಳಿ ಪರದೆಗಳು ಶಾಶ್ವತವಾಗಿ ಮರೆಯಾಗುತ್ತಿವೆ. ಕಟ್ಟಡ ನೆಲಸಮಗೊಳಿಸುವ ವೇಳೆ ಹಲವರು ಕೆಲಕಾಲ ನಿಂತು, ಚಿತ್ರಮಂದಿರದೊಂದಿಗೆ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ಕೆಲವರ ಮುಖದಲ್ಲಿ ಬೇಸರ ಗೋಚರಿಸುತ್ತಿತ್ತು.

ಮೊದಲ ಮಲ್ಟಿಪ್ಲೆಕ್ಸ್!: ಸದ್ಯ ಮಲ್ಟಿಪ್ಲೆಕ್ಸ್ ಜಮಾನ. ಏಕ ಪರದೆ ಚಿತ್ರಮಂದಿರಗಳು ಒಂದೊಂದೇ ಮರೆಯಾಗುತ್ತಿವೆ. ಆದರೆ ದಶಕಗಳ ಹಿಂದೆಯೇ ಮೈಸೂರಿನ ಸಿನಿಪ್ರಿಯರಿಗೆ ಮಲ್ಟಿಪ್ಲೆಕ್ಸ್ ಅನುಭವ ದೊರಕಿತ್ತು. ಒಂದೇ ಆವರಣದಲ್ಲಿ ಸ್ಟರ್ಲಿಂಗ್ ಹಾಗೂ ಸ್ಕೈಲೈನ್ ಅವಳಿ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶಿಸಿದ್ದು ಆ ಕಾಲಕ್ಕೆ ಹೊಸತಾಗಿತ್ತು. ಕೆಲ ವರ್ಷಗಳಿಂದ ಒಂದೇ ಸೂರಿನಲ್ಲಿ ಹಲವು ಪರದೆಗಳಲ್ಲಿ ಚಿತ್ರ ಪ್ರದರ್ಶಿಸುವ ಮಲ್ಟಿಪ್ಲೆಕ್ಸ್ ಜನಪ್ರಿಯವಾಗಿದೆ. ಆದರೆ ಆಧುನಿಕ ಚಿತ್ರಮಂದಿರಗಳ ರೂಪದಲ್ಲಿ ಸ್ಟರ್ಲಿಂಗ್ ಹಾಗೂ ಸ್ಕೈಲೈನ್ ದಶಕಗಳ ಹಿಂದೆಯೇ ಗುರುತಿಸಿಕೊಂಡಿದ್ದವು.

ಸ್ಟರ್ಲಿಂಗ್–ಸ್ಕೈಲೈನ್ ಚಿತ್ರಮಂದಿರಗಳಲ್ಲಿ ಕನ್ನಡದ ಜೊತೆಗೆ ಹಿಂದಿ, ಇಂಗ್ಲಿಷ್, ತೆಲುಗು, ತಮಿಳು ಸೇರಿದಂತೆ ವಿವಿಧ ಭಾಷೆಗಳ ಸಿನಿಮಾಗಳು ಪ್ರದರ್ಶನಗೊಂಡಿವೆ. ಬೇರೆ ಭಾಷೆಗಳ ಉತ್ತಮ ಸಿನಿಮಾ ನೋಡಲೆಂದೇ ಮೈಸೂರಿನವರು ಮಾತ್ರವಲ್ಲದೇ ಸುತ್ತಮುತ್ತಲ ಜಿಲ್ಲೆಗಳಿಂದಲೂ ಪ್ರೇಕ್ಷಕರು ಬರುತ್ತಿದ್ದರು. ಮೈಸೂರಿಗೆ ಹೊರ ರಾಜ್ಯ ಹಾಗೂ ವಿದೇಶಗಳಿಂದ ಪ್ರವಾಸಕ್ಕೆಂದು ಬಂದವರೂ ಈ ಚಿತ್ರಮಂದಿರಗಳಲ್ಲಿ ಸಿನಿಮಾ ನೋಡಿದ್ದಾರೆ ಎಂದು ಹೇಳಲಾಗುತ್ತಿದೆ. ಕನ್ನಡದ ಹಲವು ಜನಪ್ರಿಯ ಚಿತ್ರಗಳು, ಹಾಲಿವುಡ್, ಬಾಲಿವುಡ್ ಸಿನಿಮಾಗಳ ಮೂಲಕ ಲಕ್ಷಾಂತರ ಸಿನಿಮಾ ಪ್ರೇಮಿಗಳನ್ನು ರಂಜಿಸಿದ್ದ ಈ ಚಿತ್ರಮಂದಿರಗಳು ಕಾರಣಾಂತರಗಳಿಂದ ಕೆಲ ವರ್ಷಗಳಿಂದ ಪ್ರದರ್ಶನ ನಿಲ್ಲಿಸಿದ್ದವು. ಇದೀಗ ಭೌತಿಕವಾಗಿ ಕಣ್ಮರೆಯಾಗುವ ಮೂಲಕ ಅವಳಿ ಚಿತ್ರಮಂದಿರಗಳು ಇತಿಹಾಸದ ಪುಟ ಸೇರುತ್ತಿವೆ.

ಅವಳಿ ಚಿತ್ರಮಂದಿರಗಳ ವಿಸ್ತೀರ್ಣ, ಆಸನ ಸಾಮರ್ಥ್ಯದಲ್ಲಿ ವ್ಯತ್ಯಾಸವಿತ್ತು. ಸ್ಟರ್ಲಿಂಗ್ 336 ಬಾಲ್ಕನಿ, 269 ಮಿನಿ ಬಾಲ್ಕನಿ, 200 ಸೆಕೆಂಡ್ ಕ್ಲಾಸ್ ಆಸನಗಳ ಜೊತೆಗೆ 56x24 ಗಾತ್ರದ ದೊಡ್ಡ ಪರದೆ ಹೊಂದಿತ್ತು. ಮೊದಲ ಮಹಡಿಯಲ್ಲಿದ್ದ ಮಿನಿ ಥಿಯೇಟರ್ ಆಗಿದ್ದ ಸ್ಕೈಲೈನ್ 34x15 ಗಾತ್ರದ ಪರದೆಯೊಂದಿಗೆ 198 ಪ್ರಥಮ ದರ್ಜೆ ಮತ್ತು 54 ಎರಡನೇ ದರ್ಜೆಯ ಆಸನಗಳನ್ನು ಹೊಂದಿತ್ತು. ಹೆಚ್ಚಾಗಿ ಇಂಗ್ಲಿಷ್ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಹಿನ್ನೆಲೆಯಲ್ಲಿ ಅತ್ಯಾಧುನಿಕ ದೃಶ್ಯ ಹಾಗೂ ಧ್ವನಿ ತಂತ್ರಜ್ಞಾನವನ್ನು ಅಳವಡಿಸಲಾಗಿತ್ತು. ಮುಂಬೈನಲ್ಲಿನ ಗಂಗಾ–ಜಮುನಾ, ಬೆಂಗಳೂರಿನಲ್ಲಿರುವ ಬ್ಲೂಮೂನ್–ಬ್ಲೂ ಡೈಮಂಡ್ ಮಾದರಿಯಲ್ಲಿ ಈ ಅವಳಿ ಚಿತ್ರಮಂದಿರಗಳನ್ನು ನಿರ್ಮಿಸಿದ್ದರಂತೆ. 1974ರಲ್ಲಿ ಸ್ಟರ್ಲಿಂಗ್ ಪ್ರದರ್ಶನ ಆರಂಭಿಸಿತ್ತು. ನಾಲ್ಕು ವರ್ಷಗಳ ನಂತರ ಸ್ಕೈಲೈನ್ ಆರಂಭವಾಗಿತ್ತು. ಆರಂಭದಲ್ಲಿ ಪ್ರೇಕ್ಷಕರ ಕೊರತೆ ಉಂಟಾಯಿತಾದರೂ ಕ್ರಮೇಣ ಹೆಚ್ಚಾಗಿ ಇಂಗ್ಲಿಷ್ ಚಲನಚಿತ್ರಗಳು ಮತ್ತು ಕೆಲವೊಮ್ಮೆ ಹಿಂದಿ ಸಿನಿಮಾ ಪ್ರದರ್ಶನದ ಮೂಲಕ ತನ್ನದೇ ಪ್ರೇಕ್ಷಕ ವರ್ಗವನ್ನು ಸೆಳೆದಿಟ್ಟುಕೊಂಡಿದ್ದವು. ಮಾಲೀಕತ್ವ ಬದಲಾದ ನಂತರ ಕಾಲಾನುಸಾರ ಚಿತ್ರಮಂದಿರಗಳಲ್ಲಿ ಉಪಗ್ರಹ ಪ್ರದರ್ಶನ, ಪುಶ್‌ಬ್ಯಾಕ್ ಆಸನಗಳು, ಎರಡನೇ ಬಾಲ್ಕನಿ ಸೇರಿದಂತೆ ಹಲವು ಬದಲಾವಣೆಗಳಾದವು. ಇದಕ್ಕಾಗಿ ಎರಡು ವರ್ಷಗಳು ಪ್ರದರ್ಶನ ಸ್ಥಗಿತಗೊಳಿಸಲಾಗಿತ್ತು. ಇದೀಗ ಶಾಶ್ವತವಾಗಿ ಮರೆಯಾಗುತ್ತಿವೆ. ಮೈಸೂರಿನಲ್ಲಿ ನೆಲಸಮಗೊಂಡ ಹಲವು ಚಿತ್ರಮಂದಿರಗಳ ಪಟ್ಟಿಗೆ ಸ್ಟರ್ಲಿಂಗ್ ಹಾಗೂ ಸ್ಕೈಲೈನ್ ಕೂಡ ಸೇರಿಕೊಂಡಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಹಾಸನ ಮಿತ್ರ

ಹಾಸನ ಜಿಲ್ಲೆಯಲ್ಲಿ ಹಕ್ಕಿ ಜ್ವರವಿಲ್ಲ; ಆತಂಕ ಬೇಡ



ಹಾಸನ ಜಿಲ್ಲಾಧಿಕಾರಿ ಸಿ.ಸತ್ಯಭಾಮ ಮಂಗಳವಾರ ತಮ್ಮ ಕಚೇರಿಯಲ್ಲಿ ಅಂತರ ಇಲಾಖೆ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದರು.

ಹಾಸನ: ಜಿಲ್ಲೆಯಲ್ಲಿ ಯಾವುದೇ ಹಕ್ಕಿ ಜ್ವರ ಪ್ರಕರಣಗಳು ಕಂಡು ಬಂದಿಲ್ಲ. ಜನರು ಆತಂಕ ಪಡುವ ಅಗತ್ಯವಿಲ್ಲ. ಆದರೂ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಸೂಚನೆ ನೀಡಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಅಂತರ ಇಲಾಖೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರ ಮತ್ತು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಕೋಳಿ ಮಾರಾಟ ಅಂಗಡಿಗಳಲ್ಲಿ ಸ್ವಚ್ಛತೆ ಕಾಪಾಡುವಂತೆ ಸೂಚಿಸಿ, ನಗರಸಭೆ ವತಿಯಿಂದ ಮಾರುಕಟ್ಟೆಗಳಲ್ಲಿ ಫಾಗಿಂಗ್ ಮಾಡಿಸಲು ಕ್ರಮ ಕೈಗೊಳ್ಳುವಂತೆ ನಗರಸಭೆ ಆಯುಕ್ತರಿಗೆ ತಿಳಿಸಿದರು.

ಪೌಲ್ಟ್ರಿ ಫಾರಂಗಳಲ್ಲಿ ಕರ್ತವ್ಯ ನಿರ್ವಹಿಸುವ ಕಾರ್ಮಿಕರ ಆರೋಗ್ಯದ ಹಿತ ದೃಷ್ಟಿಯಿಂದ ಸುರಕ್ಷತಾ ಸಲಕರಣೆಗಳನ್ನು ನೀಡುವಂತೆ ಮಾಲೀಕರಿಗೆ ತಿಳಿಸಿದ ಅವರು, ಪೌಲ್ಟ್ರಿ ಫಾರಂ ಮಾಲೀಕರೆಲ್ಲರಿಗೂ ಅರಿವು ಮೂಡಿಸಿ, ತಮ್ಮ ತಮ್ಮ ಫಾರಂಗಳಲ್ಲಿ ಕಡ್ಡಾಯವಾಗಿ ಜೈವಿಕ ಭದ್ರತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ತಿಳಿಸಿದರು.

ಜಿಲ್ಲೆಯಲ್ಲಿರುವ ಕೋಳಿ ಫಾರಂಗಳ ಸಂಖ್ಯೆ, ಮಾಲೀಕರ ವಿಳಾಸ, ಕೋಳಿಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಒಳಗೊಂಡ ಮಾಹಿತಿ ಸಿದ್ಧಪಡಿಸಿ ಇಟ್ಟುಕೊಳ್ಳುವಂತೆ ಪಶುಪಾಲನಾ ಇಲಾಖೆ ಉಪನಿರ್ದೇಶಕರಿಗೆ ಸೂಚಿಸಿದ ಜಿಲ್ಲಾಧಿಕಾರಿ ಸತ್ಯಭಾಮಾ, ಜಿಲ್ಲೆಗಳಲ್ಲಿರುವ ಪಕ್ಷಿಧಾಮಗಳು, ವಲಸೆ ಹಕ್ಕಿಗಳು ಕಂಡುಬರುವ ಸ್ಥಳಗಳು, ಕೆರೆ, ಹೊಂಡ ಇತ್ಯಾದಿಗಳ ವಿವರವನ್ನು ಸಿದ್ಧಪಡಿಸಿಕೊಂಡು ಅದರ ಬಗ್ಗೆ ನಿಗಾ ವಹಿಸಲು ಜಿಲ್ಲಾ ಧಿಕಾರಿಗಳು ತಿಳಿಸಿದರು.

ಹಕ್ಕಿ ಜ್ವರ ಅಥವಾ ಕೋಳಿ ಶೀತ ಜ್ವರ, ಎಚ್5ಎನ್1 ವೈರಸ್‌ನಿಂದ ಹರಡುವ ರೋಗ. ಇದು ಟರ್ಕಿ ಕೋಳಿ, ಗಿನಿ ಕೋಣ, ಬಾತು ಕೋಳಿ, ಗೀಜಗ ಮುಂತಾದ ಹಕ್ಕಿಗಳಲ್ಲಿ ಕಾಣಿಸಿಕೊಳ್ಳುವ ಸಾಂಕ್ರಾಮಿಕ ಕಾಯಿಲೆಯಾಗಿದ್ದು, ಸಾಮಾನ್ಯವಾಗಿ ಹಕ್ಕಿಗಳಿಂದ ಹಕ್ಕಿಗಳಿಗೆ ಹರಡುತ್ತದೆ. ಕೆಲವೊಮ್ಮೆ ರೋಗ ಪೀಡಿತ ಹಕ್ಕಿಗಳ ಸಂಪರ್ಕದಿಂದ ಮನುಷ್ಯರಲ್ಲೂ ಈ ಜ್ವರದ ಲಕ್ಷಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು.

ರೋಗ ಪೀಡಿತ ಕೋಳಿ ಅಥವಾ ಹಕ್ಕಿಗಳ ಮಾಂಸವನ್ನು ಸರಿಯಾಗಿ ಬೇಯಿಸದೇ ತಿನ್ನುವುದರಿಂದ, ಸೋಂಕಿರುವ ಹಸಿ ಮೊಟ್ಟೆಗಳನ್ನು ಸೇವಿಸುವುದರಿಂದ ಹಾಗೂ ಕೋಳಿಗಳ ಹಿಪ್ಪೆಗಳು, ಮನುಷ್ಯರು ಕುಡಿಯುವ ನೀರಿನೊಂದಿಗೆ ಬೆರೆತು ಕಲುಷಿತಗೊಂಡಾಗ ಈ ಕಾಯಿಲೆ ಹರಡುತ್ತದೆ. ಕೆಲವು ಸಂದರ್ಭಗಳಲ್ಲಿ ಗಾಳಿಯ ಮೂಲಕವೂ ಮನುಷ್ಯರಿಗೆ ಹರಡುತ್ತದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಕೃಷ್ಣಮೂರ್ತಿ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ರಮೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅನಿಲ್‌ಕುಮಾರ್, ಕುಕ್ಕುಟೋದ್ಯಮ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಹರೀಶ್ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆ



ಹಾಸನ: ನಗರದ ಅಂಬೇಡ್ಕರ್ ಭವನದಲ್ಲಿ ಬಿಎಸ್‌ಎಸ್ ಸಂಸ್ಥೆ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಮಾಡಲಾಯಿತು.

ಪಿಎಸ್‌ಐ ಆನಂದ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ವಿತರಿಸಿ ಮಾತನಾಡಿದ ಅವರು, ಇಂದಿನ ಯುವಜನತೆ ಮೊಬೈಲ್ ಬಳಸುವುದರಿಂದ ಆಗುವ ಅನಾನುಕೂಲಗಳ ಬಗ್ಗೆ ತಿಳಿಸುತ್ತಾ, ಯುವಜನತೆ ಅದನ್ನು ಒಳ್ಳೆಯ ಉದ್ದೇಶಕ್ಕಾಗಿ ಬಳಸಿಕೊಳ್ಳಬೇಕೆಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ಕಷ್ಟಪಟ್ಟು ಓದುವುದರ ಮುಖಾಂತರ ತಮ್ಮ ಗುರಿಗಳನ್ನು ಸಾಧಿಸಲು ಸಾಧ್ಯವಿದೆ. ಪೋಷಕರು ಮಕ್ಕಳ ನಡವಳಿಕೆ ಮೇಲೆ ನಿಗಾವಹಿಸುವ ಅವಶ್ಯಕತೆ ಇದೆ ಎಂದು ಕಿವಿಮಾತು ಹೇಳಿದರು.

ಬಿಎಸ್‌ಎಸ್ ಮೈಕ್ರೋ ಫೈನಾನ್ಸ್ ಲಿ. ಸಿಇಓ ಎಸ್.ಪಂಚಾಕ್ಷರಿ, ಸಿಎಸ್‌ಆರ್ ಚೀಫ್ ಮ್ಯಾನೇಜರ್ ಪಂಡಿತ್ ಗಂಗಾಧರ ಪಾಟೀಲ್, ಹೆಡ್ ಹೆಚ್.ವಿ.ಜಗದೀಶ್, ಡಿಎಂ ಪ್ರಸನ್ನ, ಪ್ರಶಾಂತ್‌ಕುಮಾರ್, ರಮೇಶ್ ಕುಮಾರ್ ಇತರರು ಉಪಸ್ಥಿತರಿದ್ದರು.

ಬ್ಯಾಗ್‌ನಲ್ಲಿದ್ದ 4 ಲಕ್ಷ ನಗದು ಕಳವು

ಹಾಸನ: ಹಗರೆ–ಹಾಸನ ಮಾರ್ಗದಲ್ಲಿ ಚಲಿಸುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿದ್ದ 4 ಲಕ್ಷ ಕಳವು ಮಾಡಲಾಗಿದೆ. ಬೇಲೂರು ತಾಲೂಕು ಮಾದಿಹಳ್ಳಿ ಹೋಬಳಿ ಕಲ್ಯಾಣಪುರದ ಎಂ.ಎಸ್.ನಳಿನಾ ಹಾಗೂ ರವಿಕುಮಾರ್ ದಂಪತಿ ಹಣ ಕಳೆದುಕೊಂಡವರು. ಮಹಾರಾಷ್ಟ್ರದಲ್ಲಿ ಕೆಲಸ ಮಾಡಿಕೊಂಡಿರುವ ದಂಪತಿ ಇತ್ತೀಚೆಗೆ ಊರಿಗೆ ಬಂದಿದ್ದರು. ಕಲ್ಯಾಣಪುರದಲ್ಲಿದ್ದ ತಮ್ಮ ಜಾಗ ಮಾರಾಟ ಮಾಡಿ ಬೆಂಗಳೂರಿನಲ್ಲಿ ನಿವೇಶನ ಖರೀದಿಗೆ ಮುಂದಾಗಿದ್ದರು. ಜಾಗ ಮಾರಾಟದಿಂದ ಬಂದಿದ್ದ 4 ಲಕ್ಷದೊಂದಿಗೆ ಬೆಂಗಳೂರಿಗೆ ತೆರಳುತ್ತಿದ್ದಾಗ ಕಳ್ಳತನ ನಡೆದಿದೆ. ಹಗರೆಯಿಂದ ಹಾಸನಕ್ಕೆ ಬರಲು ಕೆಎಸ್‌ಆರ್‌ಟಿಸಿ ಬಸ್ ಹತ್ತಿದ್ದು, ಹೊಸ ಬಸ್ ನಿಲ್ದಾಣದಲ್ಲಿ ಬಸ್ ಇಳಿದು ಬ್ಯಾಗ್ ನೋಡಿಕೊಂಡಾಗ ಹಣ ಕಳವಾಗಿರುವುದು ತಿಳಿದಿದೆ. ಹಾಸನ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾ.7, ದಂತ ವೈದ್ಯರ ಪುಸ್ತಕ ಬಿಡುಗಡೆ

ಹಾಸನ: ನಗರದ ಲಯನ್ ಸೇವಾ ಸಂಸ್ಥೆಯಲ್ಲಿ ಮಾ.7ರಂದು ಸಂಜೆ 7.30ಕ್ಕೆ ಲಯನ್ಸ್ ಸೇವಾ ಸಂಸ್ಥೆ ಸದಸ್ಯರ ಸಾಮಾನ್ಯ ಸಭೆ ಮತ್ತು ದಂತ ವೈದ್ಯರ ಪುಸ್ತಕ ಬಿಡುಗಡೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಲಯನ್ ಅಧ್ಯಕ್ಷ ಐ.ಜಿ.ರಮೇಶ್ ತಿಳಿಸಿದ್ದಾರೆ. ಸಭೆಯಲ್ಲಿ ದಂತ ತಜ್ಞರು, ಓರಲ್ ಮೆಡಿಸಿನ್ ಹಾಗೂ ರೇಡಿಯಾಲಜಿ ತಜ್ಞರು ಹಾಗೂ ಹಿರಿಯ ದಂತ ಆರೋಗ್ಯಾಧಿಕಾರಿ ಜೆ.ಡಿ.ಸ್ಮಿತಾ, ಬಾಯಿ ಆರೋಗ್ಯ ಮತ್ತು ಹಲ್ಲುಗಳ ಆರೋಗ್ಯದ ಬಗ್ಗೆ ಮಾತನಾಡುವರು. 'ಬಾಯಿ ದೈಹಿಕ ಆರೋಗ್ಯದ ಕೈಗನ್ನಡಿ' ಎಂಬ ಪುಸ್ತಕವನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹೆಚ್.ಎಲ್. ಮಲ್ಲೇಶ್‌ಗೌಡ ಬಿಡುಗಡೆ ಮಾಡಲಿದ್ದಾರೆ. ಅಂತರ ರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಲಯನ್ ಸಂಸ್ಥೆಯ ಹಿರಿಯ ಸದಸ್ಯೆ ಮಾಲತಿ ಹೆಗಡೆ ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದ್ದಾರೆ.

ಚುಟುಕು ಕವಿ ಕಾಜಾಣ ಕಾರ್ಯಕ್ರಮ

ಹಾಸನ: ಸಕಲೇಶಪುರ ತಾಲೂಕು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಏಪ್ರಿಲ್ ತಿಂಗಳಿನಲ್ಲಿ ಚುಟುಕು ಕವಿ ಕಾಜಾಣ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ತಾಲೂಕು ಚುಸಾಪ ಅಧ್ಯಕ್ಷ ಬಿ.ಮಲ್ಲೇಶ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಚುಟುಕು ವಿಚಾರ ಗೋಷ್ಠಿ, ರಾಜ್ಯ ಮಟ್ಟದ ಚುಟುಕು ಕವಿಗೋಷ್ಠಿ ಏರ್ಪಡಿಸಲಾಗಿದೆ. ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕವಿಗಳನ್ನು ಪರಿಷತ್ ವತಿಯಿಂದ ಗೌರವಿಸಲಾಗುವುದು. ಆಸಕ್ತರು ತಮ್ಮ ಭಾವಚಿತ್ರದೊಂದಿಗೆ ಸ್ವ ಪರಿಚಯ ಹಾಗೂ ಸ್ವರಚಿತ ಮೂರು ಚುಟುಕುಗಳನ್ನು ಮಾತ್ರ ಮಾ.15ರೊಳಗೆ 9008180219, 9663300228 ವಾಟ್ಸಾಪ್‌ಗೆ ಕಳುಹಿಸಿಕೊಡಲು ತಿಳಿಸಿದ್ದಾರೆ.

ಕುಲಪತಿ, ರಿಜಿಸ್ಟ್ರಾರ್‌ಗಳ ನೇಮಕಾತಿಗಾಗಿಯೇ ಹೊಸ ವಿಶ್ವವಿದ್ಯಾಲಯಗಳ ತೆರೆಯುವ ಅವಶ್ಯಕತೆ ಇಲ್ಲ

● ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ ನುಡಿ ● ಬಿಜೆಪಿ ಸರ್ಕಾರದವರು 10 ವಿಶ್ವವಿದ್ಯಾಲಯ ತೆರೆದು ತಲಾ 2 ಕೋಟಿ ಘೋಷಿಸಿ, ಬಿಡುಗಡೆ ಕೂಡ ಮಾಡಿಲ್ಲ ● ಒಂದು ವಿವಿ ಸ್ಥಾಪನೆಗೆ 500ರಿಂದ 600 ಎಕರೆ ಭೂಮಿ ಬೇಕು; ಮೂಲಸೌಕರ್ಯಕ್ಕೆ ನೂರಾರು ಕೋಟಿ ಬೇಕು ● ಚಿತ್ರರಂಗದವರ ಕುರಿತಾದ ನಟ್ಟು–ಬೋಲ್ಟು ಹೇಳಿಕೆ ಸಮರ್ಥನೆ



ವಿಧಾನಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಬೆಂಗಳೂರು, ಮಾ.4(ಕೆಎಂಶಿ)–ಕುಲಪತಿ ಹಾಗೂ ರಿಜಿಸ್ಟ್ರಾರ್‌ಗಳ ನೇಮಕಾತಿಗಾಗಿಯೇ ಹೊಸ ವಿಶ್ವ ವಿದ್ಯಾಲಯಗಳನ್ನು ತೆರೆಯುವ ಅವಶ್ಯಕತೆ ಇಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ಕಾಗಿ ತಿಳಿಸಿದ್ದಾರೆ.

ಒಂದು ಎಕರೆ, ಎರಡು ಎಕರೆ ಭೂಮಿಯಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳನ್ನೇ ವಿಶ್ವವಿದ್ಯಾಲಯ ಎಂಬುದಾಗಿ ಪರಿವರ್ತಿಸಿ ಹಿಂದಿನ ಬಿಜೆಪಿ ಸರ್ಕಾರ ಕೈತೊಳೆದುಕೊಂಡಿದೆ ಎಂದು ಡಿಕೆಶಿ ಖಾರವಾಗಿ ನುಡಿದರು.

10 ವಿಶ್ವ ವಿದ್ಯಾಲಯಗಳನ್ನು ಪ್ರಾರಂಭಿಸಿದ ಅಂದಿನ ಸರ್ಕಾರ ಪ್ರತಿ ವಿವಿಗೆ ತಲಾ 2 ಕೋಟಿ ರೂ. ಮೀಸಲಿರಿಸಿ, ಆ ಹಣವನ್ನೂ ಬಿಡುಗಡೆ ಮಾಡಿಲ್ಲ.

ಬೆಂಗಳೂರು, ಮೈಸೂರು ವಿವಿಗಳಿಗೆ ವಿಶ್ವಮಟ್ಟದಲ್ಲಿ ಮಾನ್ಯತೆ ಇದೆ. ಅಂತಹ ವಿವಿಗಳನ್ನು ಛಿದ್ರ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವರು ಸ್ಥಾಪಿಸಿದ ವಿವಿಗಳಿಗೆ ವಿದ್ಯಾರ್ಥಿಗಳಿಲ್ಲ, ಕೊಠಡಿಗಳಿಲ್ಲ, ಬೋಧಕರಿಲ್ಲ. ಒಂದು ವಿವಿ ಸ್ಥಾಪನೆಗೆ ಕನಿಷ್ಠ 500ರಿಂದ 600 ಎಕರೆ ಭೂಮಿ ಬೇಕು, ಜೊತೆಗೆ ಮೂಲಸೌಕರ್ಯಕ್ಕೆ ನೂರಾರು ಕೋಟಿ ರೂ. ಬೇಕು. ಇದ್ಯಾವುದನ್ನೂ ಮಾಡದ ಹಿಂದಿನ ಸರ್ಕಾರ ಹಳೆ ಕಟ್ಟಡಕ್ಕೆ ನಾಮಫಲಕ ಹಾಕಿ ನಾಮಕರಣ ಮಾಡಿ ಹೋಗಿದ್ದಾರೆ. ಮಂಡ್ಯ, ಚಾಮರಾಜನಗರ, ಕೊಡಗಿನ ವಿದ್ಯಾರ್ಥಿಗಳು ಹೊಸ ವಿವಿಗಳಿಗೆ ಹೋಗಲು ಆಸಕ್ತಿ ತೋರಿಸಿಲ್ಲ, ಅವರು ಹಳೇ ವಿವಿಗಳಲ್ಲೇ ಉಳಿಯಲು ಒತ್ತುಕೊಟ್ಟಿದ್ದಾರೆ.

ನಾವು ವಿದ್ಯಾರ್ಥಿಗಳ ಹಿತದೃಷ್ಟಿ ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಹೊಸ ವಿವಿಗಳ ನಿರ್ಧಾರ ಕೈಗೊಳ್ಳುತ್ತೇವೆ. ಬಿಜೆಪಿಯವರು ರಾಜಕೀಯಕ್ಕಾಗಿ ಬೀದಿಗಿಳಿದಿದ್ದಾರೆ, ಅವರಿಗೆ ಈ ವಿವಿಗಳು ಉಳಿಯಬೇಕೆಂದಿದ್ದರೆ, ಕೇಂದ್ರದಿಂದ ಹಣ ತರಲಿ ಎಂದು ಸವಾಲು ಹಾಕಿದರು.

ಚಿತ್ರರಂಗದ ಒಳಿತಿಗಾಗಿ ಹೇಳಿದ್ದೇನೆ: ಚಿತ್ರರಂಗದವರ ಕುರಿತಾದ ನಟ್ಟು, ಬೋಲ್ಟು ಹೇಳಿಕೆಗೆ ವ್ಯಕ್ತವಾಗುತ್ತಿರುವ ವಿರೋಧದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚಿತ್ರರಂಗದ ಒಳಿತಿಗಾಗಿ ಮಾತನಾಡಿದ್ದೇನೆ. ಒಂದೆರಡು ಸಿನಿಮಾಗಳಿಂದ ಕನ್ನಡ ಚಿತ್ರರಂಗಕ್ಕೆ ಉತ್ತಮ ಯೋಗ ಬಂದಿದೆ. ನನ್ನ ಹಿತವಚನವನ್ನು ಹಳ್ಳಿಭಾಷೆಯಲ್ಲಿ ಒರಟಾಗಿ ಹೇಳಿದ್ದೇನೆ. ನನಗೂ ಚಿತ್ರರಂಗ ಉಳಿಯಬೇಕು ಎನ್ನುವ ಆಸೆಯಿದೆ ಎಂದರು.

ಬಣ್ಣ ಕಟ್ಟಿ ಮಾತನಾಡಲು ಬರುವುದಿಲ್ಲ, ನೇರವಾಗಿ ಹೇಳುತ್ತೇನೆ, ಮಾಧ್ಯಮದವರು ನನ್ನನ್ನು 'ಬಂಡೆ' ಎಂದು ಕರೆಯುತ್ತಾರೆ, ನಾನೇನು ಬಂಡೆಯೇ?, ಬಂಡೆಯಂತೆ ಕಾಣುತ್ತೇನೆಯೇ? ಕಲ್ಲು ಕಡೆದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ, ನನ್ನ ಮಾತಿನ ಶೈಲಿ ಸರಿ ಇಲ್ಲದಿದ್ದರೆ ಸರಿಪಡಿಸಿಕೊಳ್ಳುತ್ತೇನೆ, ಆದರೆ ಸತ್ಯ ಹೇಳಿದ್ದೇನೆ.

ರಾಜ್ಯದ ನೆಲ, ಜಲ ಭಾಷೆ ರಕ್ಷಣೆಗೆ ಹೋರಾಟ ಮಾಡಬೇಕು. ಕಳಸಾ–ಬಂಡೂರಿ ಹೋರಾಟಕ್ಕೆ ಚಿತ್ರರಂಗದವರು ಏಕೆ ಹುಬ್ಬಳ್ಳಿಗೆ ಹೋದರು. ಡಾ.ರಾಜಕುಮಾರ್ ಪಕ್ಷ ಭೇದ ಮರೆತು ಹೋರಾಟಕ್ಕೆ ಏಕೆ ಬರುತ್ತಿದ್ದರು. ಈಗಿನ ಚಿತ್ರರಂಗದ ಜವಾಬ್ದಾರಿ ಏನು, ಡಾ.ರಾಜಕುಮಾರ್ ಇವರಿಗೆ ಮಾದರಿ ಅಲ್ಲವೇ.

ನನ್ನ ಮನೆಗೆ ನೀರು ತರಲು ಹೋರಾಟ ಮಾಡಲಿಲ್ಲ. ಇಡೀ ಬೆಂಗಳೂರಿಗೆ ನೀರು ತರಲು ಹೋರಾಟ ಮಾಡಿದ್ದೇವೆ. ಬೆಂಗಳೂರಲ್ಲಿ ಚಿತ್ರರಂಗದವರೂ ಇದ್ದಾರೆ. ಬರೀ ಕಾಂಗ್ರೆಸ್ ಕಾರ್ಯಕರ್ತರು ಇಲ್ಲ. ಚಿತ್ರರಂಗದವರು ಬರದೇ ಇದ್ದರೂ ಹೋರಾಟ ಮಾಡುತ್ತೇವೆ, ರಾಜಕೀಯವಾಗಿ ಯಾರ್ಯಾರದ್ದು ಏನೇನಿದೆ ಎಂಬುದು ತಿಳಿದಿದೆ. ಇನ್ನಾದರೂ ಬುದ್ಧಿ ಕಲಿಯಿರಿ ಎಂದಷ್ಟೇ ಹೇಳುತ್ತಿದ್ದೇನೆ. ತಗೊಳ್ಳೋದು ಬಿಡೋದು ಅವರಿಗೆ ಬಿಟ್ಟಿದ್ದು ಎಂದರು.

ಶಿವಕುಮಾರ್, ಸಿದ್ದರಾಮಯ್ಯ ಮನೆ ಕಾರ್ಯಕ್ರಮಕ್ಕೆ ಬರಬೇಡಿ, ನಿಮ್ಮ ಕಾರ್ಯಕ್ರಮಕ್ಕೆ ಬಂದು ಉಳಿಸಿ, ಬೆಳೆಸಿಕೊಂಡು ಹೋಗಿ. ಮನೆ ಹಬ್ಬ ಎಲ್ಲರೂ ಸೇರಿ ಆಚರಿಸಬೇಕಲ್ಲವೇ. ಟೀಕೆ ಮಾಡಲಿ, ಬಯ್ಯಲಿ, ಹೋರಾಟ ಮಾಡಲಿ, ಜೈಕಾರ ಕೂಗಲಿ, ತಲೆ ಕೆಡಿಕೊಳ್ಳುವುದಿಲ್ಲ, ನನಗೆ ಸಂತಸದ ವಿಚಾರವೇ. ನಾನು ಸಹ ಸಿನಿಮಾ ರಂಗದಿಂದಲೇ ಬಂದವನು, ಕನ್ನಡ ಚಿತ್ರರಂಗ ಸಾಯುತ್ತಿದೆ. ಹೊಸ ಸಿನಿಮಾಗಳು ಬರುತ್ತಿಲ್ಲ. ಈ ಹಿಂದೆ ಇಂದಿರಾಗಾಂಧಿ ಹೆಸರಿನಲ್ಲಿ ಟೂರಿಂಗ್ ಟಾಕೀಸ್ ನಡೆಸುತ್ತಿದ್ದೆ. ನಮ್ಮ ಒಡೆತನದ 23 ಸಿನಿಮಾ ಪ್ರದರ್ಶನ ಪರದೆಗಳು ಬೆಂಗಳೂರಿನಲ್ಲಿವೆ.

ಮುಂದಿನ ವರ್ಷ ಬೆಂಗಳೂರಿನಲ್ಲಿ ಐಫಾ (ಐಐಎಫ್‌ಎ) ಪ್ರಶಸ್ತಿ ಆಯೋಜನೆ ಕುರಿತು ಆಲೋಚನೆ ಮಾಡಿದ್ದೇನೆ. ಪ್ರಶಸ್ತಿ ನೀಡುವ ತಂಡ ಈಗಾಗಲೇ ಎರಡು ಸುತ್ತಿನ ಚರ್ಚೆ ನಡೆಸಿದೆ. ಇತ್ತೀಚೆಗೆ ಅಬುದಾಬಿಗೆ ಹೋದಾಗಲೂ ಚರ್ಚೆ ನಡೆಸಿದ್ದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಪಕ್ಷ ಶಾಸಕರು ಮಾತನಾಡುವುದು ನೇರಪ್ರಸಾರದಲ್ಲಿ ಬರುತ್ತಿಲ್ಲ

● ವಿಪಕ್ಷ ಶಾಸಕರ ಆಕ್ಷೇಪಕ್ಕೆ ಆಡಳಿತ ಪಕ್ಷದ ಶಾಸಕರಿಂದ ಗದ್ದಲ
● ಕಲಾಪ ಕೆಲ ಸಮಯ ಮುಂದೂಡಿಕೆ

ಬೆಂಗಳೂರು, ಮಾ.4(ಕೆಎಂಶಿ)–ಕಾರ್ಯಕಲಾಪಗಳ ನೇರಪ್ರಸಾರದಲ್ಲಿ ಪ್ರತಿಪಕ್ಷ ಶಾಸಕರು ಮಾತನಾಡುವ ವಿಚಾರ ಪ್ರಸಾರವಾಗುತ್ತಿಲ್ಲ ಎಂಬ ಪ್ರತಿಪಕ್ಷ ಶಾಸಕರ ಆಕ್ಷೇಪ ವಾಗ್ವಾದಕ್ಕೆ ಎಡೆಮಾಡಿ ಸದನ ಕಲಾಪ 10 ನಿಮಿಷ ಮುಂದೂಡಿದ ಪ್ರಸಂಗ ವಿಧಾನಸಭೆಯಲ್ಲಿಂದು ಜರುಗಿತು.

ವಿರೋಧಪಕ್ಷದ ನಾಯಕ ಆರ್.ಅಶೋಕ್, ಕೆಪಿಎಸ್‌ಸಿ ನೇಮಕಾತಿ ವಿಚಾರ ಕುರಿತು ನಿಲುವಳಿ ಸೂಚನೆಯ ಪೂರ್ವಭಾವಿ ಪ್ರಸ್ತಾಪ ಸಂದರ್ಭದಲ್ಲಿ ಕಾನೂನು ಸಚಿವ ಎಚ್.ಕೆ.ಪಾಟೀಲ್ ಸಮಜಾಯಿಷಿ ನೀಡಲು ಮುಂದಾದಾಗ ವಿರೋಧಪಕ್ಷದ ಉಪನಾಯಕ ಅರವಿಂದ್ ಬೆಲ್ಲದ್, ಸದನ ಕಾರ್ಯಕಲಾಪಗಳು ನೇರ ಪ್ರಸಾರವಾಗುತ್ತಿವೆ. ಆದರೆ ಪ್ರತಿಪಕ್ಷ ಸದಸ್ಯರು ಮಾತನಾಡುವುದು ಸಭಾಂಗಣದಲ್ಲಿ ಅಳವಡಿಸಿರುವ ಟಿವಿಗಳಲ್ಲಿ ಪ್ರಸಾರವಾಗುತ್ತಿಲ್ಲ, ಸರ್ಕಾರ ಪ್ರಸಾರ ಮಾಡದಂತೆ ಸೂಚನೆ ಕೊಟ್ಟಿದೆಯೇ ಎಂದರು.

ಈ ವಿಚಾರ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೆವು. ಈ ಹಿಂದೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯಕಲಾಪಗಳ ನೇರಪ್ರಸಾರ ಮಾಡುತ್ತಿತ್ತು. ಕೆಲವು ಸಚಿವರು ಅನವಶ್ಯಕವಾಗಿ ಎದ್ದು ನಿಲ್ಲುತ್ತಾರೆ, ಇದನ್ನು ನಿಯಂತ್ರಿಸಬೇಕು.

ಯಾವ ನಟ್ಟು, ಬೋಲ್ಟು ಲೂಸ್ ಆಗಿದೆ ಹೇಳಿ, ಅದನ್ನು ಸರಿಪಡಿಸಬೇಕಲ್ಲವೇ ಎಂದಾಗ, ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ನಡುವೆ ಮಾತಿನ ಚಕಮಕಿ, ಆರೋಪ–ಪ್ರತ್ಯಾರೋಪಕ್ಕೆ ಎಡೆಮಾಡಿಕೊಟ್ಟಿತು. ಮಧ್ಯಪ್ರವೇಶಿಸಿದ ಸಭಾಧ್ಯಕ್ಷ ಯು.ಟಿ.ಖಾದರ್, ತಾಂತ್ರಿಕ ಸಮಸ್ಯೆಯಾಗಿರಬೇಕು, ಸರಿಪಡಿಸಲು ಸೂಚಿಸಲಾಗಿದೆ ಎಂದರೂ ಸುಮ್ಮನಾಗದ ಪ್ರತಿಪಕ್ಷ ಬಿಜೆಪಿ ಸದಸ್ಯರು ಪ್ರತಿಭಟಿಸಿ, ತಾಂತ್ರಿಕ ಸಮಸ್ಯೆ ಸರಿಪಡಿಸುವವರೆಗೂ ಮುಂದೂಡಿ, ನಂತರ ಚರ್ಚೆ ಮಾಡೋಣ ಎಂದಾಗ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಮಾತಿನ ಚಕಮಕಿ ನಡೆದು ಗದ್ದಲದ ವಾತಾವರಣ ಉಂಟಾಯಿತು. ಮಧ್ಯಪ್ರವೇಶಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ನೀವು ಮಾತನಾಡುವುದು ದಾಖಲೆಗೆ ಹೋಗುತ್ತಿದೆ. ಮಾಧ್ಯಮದವರೂ ಇದ್ದಾರೆ, ಇನ್ನೇನು ಬೇಕು. ಸದನದಲ್ಲಿ ಜವಾಬ್ದಾರಿಯಿಂದ ಮಾತನಾಡಿ ಎಂದರು.

ಇದಕ್ಕೆ ಆಕ್ಷೇಪಿಸಿದ ಬಿಜೆಪಿ ಶಾಸಕರು, ಆಡಳಿತ ಪಕ್ಷದವರು ಮಾತನಾಡುವಾಗ ಟಿವಿ ಪರದೆ ಮೇಲೆ ಕಾಣುತ್ತಾರೆ, ಸಭಾಧ್ಯಕ್ಷರು ಮಾತನಾಡುವಾಗಲೂ ಕಾಣುತ್ತಾರೆ. ಆದರೆ, ನಾವು ಮಾತನಾಡುವಾಗ ಮಾತ್ರ ಕಾಣುವುದಿಲ್ಲ, ನಿಷ್ಪಕ್ಷಪಾತದಿಂದ ಕಾರ್ಯಕಲಾಪಗಳ ನೇರಪ್ರಸಾರ ಮಾಡಬೇಕು, ಏಕಪಕ್ಷೀಯವಾಗಿ ಮಾಡಬೇಡಿ ಎಂದರು.

ಮಧ್ಯಪ್ರವೇಶಿಸಿದ ಸಭಾಧ್ಯಕ್ಷರು, ನಿಲುವಳಿ ಸೂಚನೆ ವಿಚಾರ ಗಂಭೀರ ಚರ್ಚೆಯಾಗುತ್ತಿವೆ. ಕಾರ್ಯಕಲಾಪ ನೇರ ಪ್ರಸಾರದ ತಾಂತ್ರಿಕ ಸಮಸ್ಯೆ ಸರಿಪಡಿಸಲು ಹೇಳಿ 10 ನಿಮಿಷ ಕಳೆಯಿತು, ಆದರೂ ಸರಿಯಾಗದ ಹಿನ್ನೆಲೆಯಲ್ಲಿ ಕಲಾಪವನ್ನು 10 ನಿಮಿಷ ಮುಂದೂಡಿರುವುದಾಗಿ ತಿಳಿಸಿದರು.

ಯುವರಾಜ ಕಾಲೇಜು ಯುವ ಪ್ರತಿಭೆ ಸೈಯದ್ ಮುಜಮ್ಮಿಲ್ ಅಹ್ಮದ್‌ಗೆ ಅಭಿನಂದನೆ



ಮೈಸೂರು, ಮಾ. 4– ಯುವರಾಜ ಕಾಲೇಜಿನ ಹಳೆಯ ವಿದ್ಯಾರ್ಥಿ ಸೈಯದ್ ಮುಜಮ್ಮಿಲ್ ಅಹ್ಮದ್ ಅವರು ಹಾಡಿದ 'ರಾವಣ ರಾಜ್ಯದಲ್ಲಿ ನವದಂಪತಿಗಳು' ಮುಂಬರುವ ಕನ್ನಡ ಚಿತ್ರದಲ್ಲಿನ ಪ್ಲೇಬ್ಯಾಕ್ ಸಾಂಗ್ ಈಗಾಗಲೇ ಜನಪ್ರಿಯತೆ ಗಳಿಸಿದ್ದು, ಇದನ್ನು ಕನ್ನಡ ಸಿನಿಮಾ ರಂಗದಲ್ಲಿ ಕವ್ವಾಲಿ ಶೈಲಿಯ ಹೊಸ ಪ್ರಯೋಗವೆಂದು ಪರಿಗಣಿಸಲಾಗಿದೆ.

ಸೈಯದ್ ಮುಜಮ್ಮಿಲ್ ಅಹ್ಮದ್ ಅವರು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪರಿಣತಿ ಗಳಿಸಿದ್ದಾರೆ. ಕವ್ವಾಲಿ ಮತ್ತು ಸೂಫಿ ಶೈಲಿಯ ಹಾಡುಗಳ ಜೊತೆಗೆ ಸ್ವತಃ ಸಂಗೀತ ಸಂಯೋಜಕರೂ, ಸಾಹಿತ್ಯಕಾರರೂ ಆಗಿದ್ದಾರೆ.

ಮುಂಬರುವ ಚಿತ್ರ 'ನೀನು ಅಪ್ಪಟ ಕನ್ನಡ ನಾರಿ' ಕನ್ನಡ ಪ್ಲೇಬ್ಯಾಕ್ ಹಾಡಿಗೆ ಧ್ವನಿ ನೀಡಿದ್ದು, ಇದೊಂದು ಕವ್ವಾಲಿ ಶೈಲಿಯ ವಿಶೇಷ ಪ್ರಯೋಗವಾಗಿದೆ. ಈ ಹಾಡಿಗೆ ಸಂಗೀತ ನಿರ್ದೇಶಕ ಅಭಿನಂದನ್ ಕಶ್ಯಪ್ ಸಂಗೀತ ನೀಡಿದ್ದು, ಈಗಾಗಲೇ ಜನಮನ ಗೆದ್ದಿದೆ. ಈ ಸಿನಿಮಾ ಮಾ.6ರಂದು ಬಿಡುಗಡೆಯಾಗಲಿದೆ.

ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ದೃಷ್ಟಿಯಿಂದ ಅವರು ಮೈಸೂರು ಮಹಾನಗರ ಪಾಲಿಕೆಗಾಗಿ ಸ್ವಚ್ಛ ಸರ್ವೇಕ್ಷಣ ಅಭಿಯಾನದಲ್ಲಿ ಎರಡು ಹಾಡುಗಳನ್ನು ಹಾಡಿದ್ದಾರೆ. 'ಸಬ್ಸೆ ಪ್ಯಾರಾ ಹಿಂದೂಸ್ತಾನ್' ದೇಶಭಕ್ತಿಗೀತೆ ಸಂಯೋಜಿಸಿದ್ದು ಶೀಘ್ರದಲ್ಲಿ ಬಿಡುಗಡೆಯಾಗಲಿದೆ. ಅವರ ವಿಶಿಷ್ಟ ಕಂಠಸಿರಿ, ಹಾರ್ಮೋನಿಯಂ ಶೈಲಿ ಮತ್ತು ಕಲಾತ್ಮಕ ನಾವೀನ್ಯತೆಗಳು ಮುಂದಿನ ಪೀಳಿಗೆಯ ಗಾಯಕರಿಗೆ ಪ್ರೇರಣೆಯಾಗಲಿದೆ.

ಈ ಹಿನ್ನೆಲೆಯಲ್ಲಿ ಯುವರಾಜ ಕಾಲೇಜು ಪ್ರಾಂಶುಪಾಲರಾದ ಪ್ರೊ.ಎಸ್.ಮಹದೇವಮೂರ್ತಿ ಅವರು ಹಳೆಯ ವಿದ್ಯಾರ್ಥಿ ಯುವ ಪ್ರತಿಭೆ ಸೈಯದ್ ಮುಜಮ್ಮಿಲ್ ಅಹ್ಮದ್ ಅವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಪ್ರೊ. ಕೆ.ಅಜಯಕುಮಾರ್, ಡಾ.ಎಸ್.ಉಷಾ, ಡಾ.ವಂದನಾ ಯಾದವ್, ಡಾ.ಎನ್.ಎಸ್.ನೇತ್ರ, ಜಿ.ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಕಡಿತವಾಗಿದೆ

ವಿಧಾನಸಭೆಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಮಾಹಿತಿ



ಬೆಂಗಳೂರು,ಮಾ.4(ಕೆಎಂಶಿ)–ಸೈಬರ್ ಕ್ರೈಂ ಘಟನೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಕಳೆದ 1 ವರ್ಷದಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಗಿಂದು ತಿಳಿಸಿದ್ದಾರೆ.


ಪ್ರಶ್ನೋತ್ತರ ವೇಳೆಯಲ್ಲಿ ಬಿ.ಪಿ.ಹರೀಶ್ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಗಾಂಜಾ, ಅಫೀಮು, ಮಟ್ಕಾ ದಂಧೆ, ಕಳ್ಳಭಟ್ಟಿ, ಸರಗಳ್ಳತನ, ವಾಹನ ಕಳವು ಹಾಗೂ ಮಾದಕವಸ್ತುಗಳ ಮಾರಾಟದ ಮೇಲೆ ನಿರಂತರ ನಿಗಾ ವಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ರಾತ್ರಿ ಪಾಳಿ ಗಸ್ತು ಹೆಚ್ಚಿಸಲಾಗಿದೆ. ಹರಿಹರದಲ್ಲಿ 2023ರಿಂದ ಫೆಬ್ರವರಿ 24ರವರೆಗೆ 123 ಪ್ರಕರಣಗಳು ದಾಖಲಾಗಿವೆ ಎಂದು ಹೇಳಿದರು.

ಸರ್ಕಾರದಿಂದಲೇ ಡಾ.ರಾಜ್ ಜಯಂತಿ ಆಚರಣೆಗೆ ಮನವಿ



ವರನಟ ಡಾ.ರಾಜಕುಮಾರ್ ಹುಟ್ಟುಹಬ್ಬವನ್ನು ಸರ್ಕಾರದಿಂದಲೇ ಆಚರಿಸುವಂತೆ ಮೈಸೂರು ಕನ್ನಡ ವೇದಿಕೆ ವತಿಯಿಂದ ಮೀನಾ ತೂಗುದೀಪ್ ಶ್ರೀನಿವಾಸ್ ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಸಿದ್ದಪ್ಪ ಎಲ್‌ಐಸಿ, ಭಾನುಮೋಹನ್, ಶಿವಣ್ಣ ನಾಯಕರ್, ಮಹಮ್ಮದ್ ಇತರರು ಹಾಜರಿದ್ದರು.

ವಿಧಾನಸಭೆಯ ಪಶ್ಚಿಮ ದ್ವಾರದ ಬಳಿ ವಿಧಾನಮಂಡಲ ಐತಿಹಾಸಿಕ ಘಟನೆಗಳುಳ್ಳ ಛಾಯಾಚಿತ್ರ ಪ್ರದರ್ಶನ



ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಐತಿಹಾಸಿಕ ಘಟನೆಗಳ ಛಾಯಾಚಿತ್ರಗಳ ಪ್ರದರ್ಶನವನ್ನು ಉದ್ಘಾಟಿಸಿದರು.



ಬೆಂಗಳೂರು, ಮಾ.4(ಕೆಎಂಶಿ)– ಪಶ್ಚಿಮದ್ವಾರದಿಂದ ವಿಧಾನಸಭೆಯ ಸಭಾಂಗಣಕ್ಕೆ ಹೋಗುವ ಇಕ್ಕೆಲಗಳಲ್ಲಿ 1881ರಿಂದ ಈವರೆಗಿನ ವಿಧಾನಮಂಡಲದ ಐತಿಹಾಸಿಕ ಘಟನೆಗಳನ್ನು ಬಿಂಬಿಸುವ ಛಾಯಾಚಿತ್ರಗಳನ್ನು ಅಳವಡಿಸಿರುವುದು ಆಕರ್ಷಣೀಯವಾಗಿದೆ.

ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಐತಿಹಾಸಿಕ ಘಟನೆಗಳ ಛಾಯಾಚಿತ್ರಗಳ ಪ್ರದರ್ಶನ ಉದ್ಘಾಟಿಸಿದರು.

ನಾಡಿನ ಸಂಸದೀಯ ಆಡಳಿತ ವ್ಯವಸ್ಥೆಯ ಐತಿಹಾಸಿಕ ಘಟನೆಗಳ ಉಲ್ಲೇಖ ಇಲ್ಲಿದ್ದು, ಮೈಸೂರಿನ ಸಾರ್ವಜನಿಕರ ಕಚೇರಿ ಕಟ್ಟಡ, ಹಳೆಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 1881ರಿಂದ 1923ರವರೆಗೆ ಪ್ರಜಾಪ್ರತಿನಿಧಿ ಅಧಿವೇಶನಗಳು ನಡೆದಿದ್ದವು. ಆಗಿನ 10ನೇ ಚಾಮರಾಜ ಒಡೆಯರ್, 1881ರ ಆಗಸ್ಟ್ 25ರಂದು ಪ್ರಜಾಪ್ರತಿನಿಧಿ ಸಭೆ ಆರಂಭಿಸಿದ ರೈತರ ಮತ್ತು ವರ್ತಕರ 144 ಪ್ರತಿನಿಧಿಗಳನ್ನು ಒಳಗೊಂಡ ಅಧಿವೇಶನ, ಅಂದಿನ ದಿವಾನರಾಗಿದ್ದ ರಂಗಾಚಾರ್ಲು ಅಧ್ಯಕ್ಷತೆಯಲ್ಲಿ 7ನೇ ಅಕ್ಟೋಬರ್ 1981ರಂದು ನಡೆದ ಛಾಯಾಚಿತ್ರವಿದೆ.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಪಟ್ಟಾಭಿಷೇಕ ನಡೆದ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಪ್ರಜಾಪ್ರತಿನಿಧಿ ಅಧಿವೇಶನಗಳು 1924ರಿಂದ 1948ರವರೆಗೆ ಸಮಾವೇಶಗೊಂಡಿವೆ. ಬೆಂಗಳೂರಿನಲ್ಲಿ 1942ರ ಜೂನ್ 1ರಂದು ಪ್ರಥಮ ಪ್ರಜಾಪ್ರತಿನಿಧಿ ಅಧಿವೇಶನ ಸರ್. ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ನಡೆದಿದ್ದು, 1942ರಿಂದ 1952ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಗಳು ಇದೇ ಕಟ್ಟಡದಲ್ಲಿ ನಡೆದಿದ್ದವು.

ಬೆಂಗಳೂರಿನ ಹಳೇ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ 1950ರಿಂದ 1955ರವರೆಗೆ ಅಧಿವೇಶನಗಳು ನಡೆದಿದ್ದು, ಈ ಕಟ್ಟಡ ಮೈಸೂರು ರಾಜ್ಯದ ಆಡಳಿತ ಕಚೇರಿಯಾಗಿದ್ದು, 1951ರಿಂದ 1955ರಲ್ಲಿ ಮೈಸೂರು ವಿವಿ ಆಡಳಿತ ಕಚೇರಿಯಾಗಿದ್ದ ಕ್ರಾಫರ್ಡ್ ಹಾಲ್‌ನಲ್ಲಿ ವಿಧಾನಸಭೆ ಅಧಿವೇಶನಗಳು ನಡೆದಿದ್ದವು. ಆಗಿನ ಅಠಾರ ಕಚೇರಿಯಲ್ಲಿ 1955ರಿಂದ 1956ರವರೆಗೆ ವಿಧಾನಸಭಾ ಅಧಿವೇಶನಗಳು ಜರುಗಿದ್ದು, ಈ ಕಟ್ಟಡದಲ್ಲಿ ಸ್ವತಂತ್ರ ಮೈಸೂರು ರಾಜ್ಯದ ಪ್ರಥಮ ಸರ್ಕಾರದ ಸಚಿವ ಸಂಪುಟ ಸದಸ್ಯರ ಪ್ರಮಾಣವಚನ ಸಮಾರಂಭವೂ ನಡೆದಿದೆ. ರಾಷ್ಟ್ರದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು 1951ರ ಜುಲೈ 13ರಂದು ವಿಧಾನಸೌಧ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು ರಾಜ್ಯದ ಪ್ರಮುಖರಾಗಿದ್ದ ಜಯಚಾಮರಾಜ ಒಡೆಯರ್ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಮೇಲುಸ್ತುವಾರಿಯಲ್ಲಿ ವಿಧಾನಸೌಧದ ಕಟ್ಟಡ ನಿರ್ಮಾಣವಾಗಿದ್ದು, 1956ರ ಡಿಸೆಂಬರ್ 19ರಿಂದ ವಿಧಾನಸಭೆಯಲ್ಲಿ ಕಾರ್ಯಕಲಾಪಗಳು ಆರಂಭಗೊಂಡ ಚಿತ್ರಗಳಿವೆ. ವಿಧಾನಸಭೆಯ ಸಭಾಂಗಣದಲ್ಲಿ ಅಂದಿನ ರಾಜ್ಯಪಾಲ ಜಯಚಾಮರಾಜ ಒಡೆಯರ್, ಸದನಗಳ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದ ಹಾಗೂ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಕುರಿತ ಎಲ್ಲಾ ಮಾಹಿತಿ ಪ್ರದರ್ಶಿಸುವ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಸ್ಪೀಕರ್ ಯು.ಟಿ. ಖಾದರ್, ವಿಧಾನಸೌಧದಲ್ಲಿ ಸ್ಥಳಾವಕಾಶ ಲಭ್ಯವಿರುವ ಕಡೆಗಳಲ್ಲಿ ಐತಿಹಾಸಿಕ ಛಾಯಾಚಿತ್ರಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಲಾಗಿದೆ ಎಂದರು.

ಕೊತ್ತತ್ತಿಯಲ್ಲಿ ವಿಜಯೇಂದ್ರ ಭತ್ತದ ನಾಟಿ

ಜಿವೈವಿಗೆ ನೂರಾರು ಬಿಜೆಪಿ ಮುಖಂಡರು, ರೈತ ಮಹಿಳೆಯರು ಸಾಥ್



ಕೊತ್ತತ್ತಿ ಗ್ರಾಮದ ಭತ್ತದ ಗದ್ದೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಟಿ ಮಾಡುತ್ತಿರುವುದು.

ಮಂಡ್ಯ,ಮಾ.4(ಮೋಹನ್‌ರಾಜ್)– ತಮ್ಮ ತಂದೆ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹುಟ್ಟೂರು ಮಂಡ್ಯ ಜಿಲ್ಲೆಯ ಕೃಷಿ ಭೂಮಿಗಿಳಿದು ಭತ್ತದ ನಾಟಿ ಮಾಡುವ ಮೂಲಕ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಭಾಗದ ರೈತರು ಹಾಗೂ ಪಕ್ಷದ ಕಾರ್ಯಕರ್ತರ ಗಮನ ಸೆಳೆದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ಜಿಲ್ಲೆಯ ಕೊತ್ತತ್ತಿ ಗ್ರಾಮದಲ್ಲಿ ಸ್ಥಳೀಯ ಬಿಜೆಪಿ ಮುಖಂಡ ಸಚ್ಚಿದಾನಂದ ಇಂಡುವಾಳು ನೇತೃತ್ವದಲ್ಲಿ ಈ ಭಾಗದ ರೈತರಿಗೆ ಆಶ್ಚರ್ಯ ತುಂಬಲು ಮಂಗಳವಾರ ಭತ್ತದ ನಾಟಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಬೆಳಿಗ್ಗೆ 11 ಗಂಟೆಗೆ ಮಂಡ್ಯ ತಾಲೂಕಿನ ಕ್ಯಾತುಂಗೆರೆ ಗ್ರಾಮಕ್ಕೆ ಆಗಮಿಸಿದ ವಿಜಯೇಂದ್ರಗೆ ಕ್ರೇನ್ ಮೂಲಕ ಬೃಹತ್ ಕಬ್ಬಿನ ಹಾರವನ್ನು ಹಾಕಿ ಸ್ವಾಗತಿಸಲಾಯಿತು. ನಂತರ ಪಕ್ಕದಲ್ಲೇ ಇದ್ದ ವೀರಾಂಜನೇಯ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಬಿಳಿ ಶರ್ಟ್ ಹಾಗೂ ಪಂಚೆಯಲ್ಲಿ ಕಂಗೊಳಿಸುತ್ತಿದ್ದ ಬಿಜೆಪಿ ರಾಜ್ಯಾಧ್ಯಕ್ಷರು ಸ್ವತಃ ತಾವೇ ಟ್ರಾಕ್ಟರ್ ಚಲಾಯಿಸುವ ಮೂಲಕ ಕ್ಯಾತುಂಗೆರೆ, ಬೇವಿನಹಳ್ಳಿ ಮಾರ್ಗವಾಗಿ ಕೊತ್ತತ್ತಿಗೆ ಆಗಮಿಸಿದರು. ಈ ಸಂದರ್ಭದಲ್ಲಿ ರ್ಯಾಲಿಯಲ್ಲಿ ಸಾವಿರಾರು ಮಂದಿ ಬಿಜೆಪಿ ಕಾರ್ಯಕರ್ತರು ವಿಜಯೇಂದ್ರಗೆ ಸಾಥ್ ನೀಡಿದರು.

ರೈತ ಮಹಿಳೆಯರೊಂದಿಗೆ ನಾಟಿ: ಕೊತ್ತತ್ತಿ ಗ್ರಾಮಕ್ಕೆ ಆಗಮಿಸಿದ ಬಳಿಕ ಗ್ರಾಮದ ರೈತರಾದ ಸುಕೇಂದ್ರ ಮತ್ತು ಶಿವಬಸಪ್ಪ ಎಂಬುವವರ ಎರಡು ಎಕರೆ ಜಮೀನಿನಲ್ಲಿ ರೈತ ಮಹಿಳೆಯರು ಹಾಗೂ ಸ್ಥಳೀಯ ಬಿಜೆಪಿ ಮುಖಂಡರೊಂದಿಗೆ ವಿಜಯೇಂದ್ರ ಪಂಚೆ ಸೊಂಟಕ್ಕೆ ಕಟ್ಟಿ ಕೆಸರು ಗದ್ದೆಗಿಳಿದು ನಾಟಿ ಪೈರು ನೆಟ್ಟರು. ಈ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ರೈತ ಮಹಿಳೆಯರೊಂದಿಗೆ ಸಾಮೂಹಿಕ ಭೋಜನ: ನಾಟಿ ಕಾರ್ಯದ ಬಳಿಕ ರೈತರೊಂದಿಗೆ ಬಿ.ವೈ.ವಿಜಯೇಂದ್ರ ಸಾಮೂಹಿಕ ಭೋಜನ ಸವಿದರು. ನಾಟಿ ಕಾರ್ಯ ನಡೆದ ಪಕ್ಕದಲ್ಲೇ ಸಾಮೂಹಿಕ ಭೋಜನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ರೈತ ಮಹಿಳೆಯರು ಹಾಗೂ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಅವರೇ ಕಾಳು ಕೂಟು, ಮುದ್ದೆ, ಅನ್ನ, ಸಾಂಬಾರ್, ಮೈಸೂರು ಪಾಕ್‌ನ್ನು ವಿಜಯೇಂದ್ರ ಸವಿದರು. ಇದಾದ ಬಳಿಕ ತಮ್ಮೊಂದಿಗೆ ನಾಟಿ ಮಾಡಿದ ರೈತ ಮಹಿಳೆಯರಿಗೆ ಅಭಿನಂದಿಸಿ, ಕೆಲ ಹೊತ್ತು ಮಾತುಕತೆ ನಡೆಸಿದರು.

> ಮಂಡ್ಯ ಜಿಲ್ಲೆ ಅಂದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಜನ್ಮ ಕೊಟ್ಟ ಪುಣ್ಯಭೂಮಿ. ಜಿಲ್ಲೆಯ ಬೂಕನಕೆರೆ ಯಡಿಯೂರಪ್ಪರಿಗೆ ಜನ್ಮ ಕೊಟ್ಟ ಊರು. ನಾನು ಕೂಡ ಮಂಡ್ಯ ಜಿಲ್ಲೆಯ ಮೊಮ್ಮಗ. ಯಡಿಯೂರಪ್ಪ ರೈತರ ಪರ ಹೋರಾಟ ಮಾಡಿಕೊಂಡು ಬಂದವರು. ಅವರಿಗೆ ಪ್ರೇರಣೆ ಸಿಕ್ಕಿದ್ದೆ ಮಂಡ್ಯ ಮಣ್ಣಿನ ಪ್ರಭಾವದಿಂದಾಗಿ. ಯಡಿಯೂರಪ್ಪ ರೈತರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿ, ತಮ್ಮ ಅಧಿಕಾರದುದ್ದಕ್ಕೂ ರೈತರ ಏಳ್ಗೆಗಾಗಿ ಶ್ರಮಿಸಿದರು. ಯಡಿಯೂರಪ್ಪ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ರೈತರಿಗಾಗಿ ಪಂಪ್ ಸೆಟ್ ಕೊಟ್ಟರು. ಪ್ರಧಾನಿ ನರೇಂದ್ರ ಮೋದಿ ಅವರು ಕಿಸಾನ್ ಸಮ್ಮಾನ್ ಯೋಜನೆನಡಿ 6 ಸಾವಿರ ಹಣವನ್ನು ರೈತರಿಗೆ ಕೊಡುತ್ತಿದ್ದರು. ಅದರ ಜೊತೆಯಾಗಿ ಕರ್ನಾಟಕದಲ್ಲಿ ಯಡಿಯೂರಪ್ಪ ಅವರು 4 ಸಾವಿರ ಹಣವನ್ನು ಕೇಂದ್ರ ಸರ್ಕಾರದ ಆರು ಸಾವಿರ ಹಣದ ಜೊತೆಗೆ ಸೇರಿಸಿ ನೀಡುತ್ತಿದ್ದರು. ಆದರೆ ಪ್ರಸ್ತುತ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಯೋಜನೆ ನಿಲ್ಲಿಸಿದೆ. ರೈತ ವಿದ್ಯಾ ನಿಧಿಯನ್ನು ಸಹ ನಿಲ್ಲಿಸಿದೆ. – ಬಿ.ವೈ.ವಿಜಯೇಂದ್ರ

ತಂದೆಯ ಹುಟ್ಟೂರಲ್ಲಿ ನಾಟಿ ಮಾಡಿದ್ದು ಖುಷಿ ತಂದಿದೆ: ಕೊತ್ತತ್ತಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿಜೆಪಿ ಕಾರ್ಯಕರ್ತರು ಮತ್ತು ರೈತರೊಂದಿಗೆ ನಾಟಿ ಕಾರ್ಯ ಮಾಡಿದ್ದೇವೆ. ಮಂಡ್ಯ ಜಿಲ್ಲೆ ಸಕ್ಕರೆನಾಡು, ಅಕ್ಕರೆಯ ಜಿಲ್ಲೆಯಾಗಿದ್ದು, ಮಂಡ್ಯ ಜಿಲ್ಲೆಯಲ್ಲಿ ಜಲ ಸಂಪತ್ತು, ಸಿರಿ ಸಂಪತ್ತು ಹಾಗೂ ಧಾನ್ಯ ಸಂಪತ್ತಿದೆ. ಮಂಡ್ಯ ಜಿಲ್ಲೆ ಅಷ್ಟು ಹಸಿರಾಗಲು ಮೈಸೂರು ಮಹಾರಾಜರೇ ಕಾರಣ ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಶಾಸಕ ಸತೀಶ್ ರೆಡ್ಡಿ, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಸ್ಥಳೀಯ ಬಿಜೆಪಿ ಮುಖಂಡ ಎಸ್.ಸಚ್ಚಿದಾನಂದ ಇಂಡುವಾಳು, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್‌ಕುಮಾರ್, ಮುಖಂಡರಾದ ಅಶೋಕ್ ಜಯರಾಮ್, ಲಕ್ಷ್ಮಿ ಅಶ್ವಿನ್‌ಗೌಡ, ಡಾ.ಸಿದ್ದರಾಮಯ್ಯ, ಎಚ್.ಆರ್.ಅರವಿಂದ್, ಹೀಹಳ್ಳಿ ರಮೇಶ್, ಬೇವಿನಹಳ್ಳಿ ಮಹೇಶ್ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಹರಳಹಳ್ಳಿ ಕೃಷಿ ಪತ್ತಿನ ಸಂಘ ಜೆಡಿಎಸ್ ತೆಕ್ಕೆಗೆ



ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ ಜೆಡಿಎಸ್ ಬೆಂಬಲಿತ ಸದಸ್ಯರು.

ಕೆ.ಆರ್.ಪೇಟೆ,ಮಾ.4– ತಾಲೂಕಿನ ಶೀಳನೆರೆ ಹೋಬಳಿಯ ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಾಸಕ ಹೆಚ್.ಟಿ.ಮಂಜು ನೇತೃತ್ವದಲ್ಲಿ ಎಲ್ಲಾ 11 ಸ್ಥಾನಗಳಲ್ಲಿಯೂ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿದ್ದಾರೆ. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಸೋಲು ಕಂಡಿದ್ದಾರೆ.

ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಟಿ.ಲೋಕೇಶ್ (812), ಆರ್.ಎಸ್.ಪ್ರೇಮಕುಮಾರ್(750), ಗುರುಪ್ರಸಾದ್(744), ವಿ.ಬಿ.ಚಂದ್ರಶೇಖರ್(704), ಎಂ.ಕೆ.ರಮೇಶ್(703), ಬಿಸಿಎಂ.ಎ ಮೀಸಲು ಕ್ಷೇತ್ರದಿಂದ ಮಂಜುಳ(688), ಬಿಸಿಎಂ.ಬಿ. ಮೀಸಲು ಕ್ಷೇತ್ರದಿಂದ ಈರೇಗೌಡ(776), ಮಹಿಳಾ ಮೀಸಲು ಕ್ಷೇತ್ರದಿಂದ ಭಾಗ್ಯಮ್ಮ(721), ದೇವಮ್ಮ(715), ಎಸ್.ಸಿ.ಮೀಸಲು ಕ್ಷೇತ್ರದಿಂದ ತಿಮ್ಮಯ್ಯ(738) ಮತಗಳನ್ನು ಪಡೆದು ಭರ್ಜರಿ ಜಯ ಸಾಧಿಸಿದ್ದಾರೆ. ಅದೇ ರೀತಿ ಸಾಲಗಾರರಲ್ಲದ ಕ್ಷೇತ್ರದಿಂದ ಬೈರಾಪುರ ಹರೀಶ್ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ಒಟ್ಟಾರೆ ಎಲ್ಲಾ 11 ಕ್ಷೇತ್ರಗಳಲ್ಲಿಯೂ ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಜಯ ಸಾಧಿಸುವ ಮೂಲಕ ಎಲ್ಲಾ ಸ್ಥಾನಗಳನ್ನು ಸ್ವೀಪ್ ಮಾಡುವ ಸಾಧನೆ ಮಾಡಿದ್ದಾರೆ.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್‌ಕುಮಾರ್ ಕಾರ್ಯನಿರ್ವಹಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷಅಶೋಕ್, ಬೇಲದಕೆರೆ ನಂಜೇಗೌಡ, ಯೋಗೇಶ್, ಬೇಲದಕೆರೆ ಪಾಪೇಗೌಡ, ಕೃಷ್ಣೇಗೌಡ, ಶಿವಣ್ಣಶೆಟ್ಟಿ ಆರ್.ಟಿ.ಚಂದ್ರು ನಾಗೇಗೌಡ, ಕಾಳೇಗೌಡ, ಬಸವರಾಜು, ದೀಪು, ತೀರ್ಥಪ್ರಸಾದ್, ಶ್ರೀಧರ್, ಮಂಜೇಗೌಡ ಉಪಸ್ಥಿತರಿದ್ದರು.

ಬೇಬಿಬೆಟ್ಟದಲ್ಲಿ ಶ್ರೀ ಮಹದೇಶ್ವರ, ಶ್ರೀ ಸಿದ್ದೇಶ್ವರಸ್ವಾಮಿಯ ವೈಭವದ ರಥೋತ್ಸವ

ಚಿನಕುರಳಿ, ಮಾ.4– ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಭಾರಿ ದನಗಳ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಶ್ರೀ ಮಹದೇಶ್ವರ ಹಾಗೂ ಶ್ರೀಸಿದ್ದೇಶ್ವರ ಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರೆ ಆವರಣದಲ್ಲಿ ನಡೆದ ಶ್ರೀಮಹದೇಶ್ವರಸ್ವಾಮಿ ದೇವಸ್ಥಾನದ ಬಳಿ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಶ್ರೀರಾಮಯೋಗೀಶ್ವರ ಪೀಠಾಧ್ಯಕ್ಷ ಶ್ರೀಶಿವಬಸವಸ್ವಾಮೀಜಿ, ಸಿದ್ದಗಂಗಾ ಮಠದ ಶಿವಸಿದ್ದೇಶ್ವರಸ್ವಾಮೀಜಿ ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ರಥೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳಿಂದ ಹಲವಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ, ಉಘೇ ಮಾದಪ್ಪ... ಉಘೇ ಮಾದಪ್ಪ ಎಂಬ ಘೋಷಣೆ ಕೂಗುತ್ತ ಹಣ್ಣು ಜವನ ಎಸೆದು ಭಕ್ತಿ ಭಾವ ಪ್ರದರ್ಶಿಸಿದರು. ದೇವಸ್ಥಾನದ ಸುತ್ತಲೂ ರಥವನ್ನು ಎಳೆಯುವ ಮೂಲಕ ಭಕ್ತರು ಭಕ್ತಿಭಾವ ಸಮರ್ಪಿಸಿದರು. ರಥೋತ್ಸವದಲ್ಲಿ ಸಮಾಜಸೇವಕ ಕೆಆರ್.ಪೇಟೆಯ ಆರ್‌ಟಿಓ ಮಲ್ಲಿಕಾರ್ಜುನ್ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು.



ಬೇಬಿಬೆಟ್ಟದ ಜಾತ್ರಾ ಮಹೋತ್ಸವದಲ್ಲಿ ಮಂಗಳವಾರ ಶ್ರೀಮಹದೇಶ್ವರ ಹಾಗೂ ಶ್ರೀಸಿದ್ದೇಶ್ವರಸ್ವಾಮಿಯ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ಶಾಸಕ ದರ್ಶನ್‌ಪುಟ್ಟಣ್ಣಯ್ಯ ಮಾತನಾಡಿ, ಬೇಬಿಬೆಟ್ಟದ ಭಾರಿ ದನಗಳ ಜಾತ್ರಾ ಮಹೋತ್ಸವವು ವಿಶೇಷವಾದ ಜಾತ್ರೆ ಆಗಿದೆ. ಜಾತ್ರೆಯಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ರಾಸುಗಳು ಆಗಮಿಸುವ ಮೂಲಕ ಜಾತ್ರೆಗೆ ಮೆರಗು ನೀಡಿದೆ, ರಥೋತ್ಸವದಲ್ಲಿ ಈ ಭಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಯಶಸ್ವಿಗೊಳಿಸಿದ್ದಾರೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಯಧುವೀರ್ ಭಾಗಿ: ಬೇಬಿಬೆಟ್ಟದಲ್ಲಿ ಭಾರಿ ದನಗಳ ಜಾತ್ರಾ ಮಹೋತ್ಸವಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮೈಸೂರು–ಕೊಡಗು ಸಂಸದ ಯಧುವೀರ್ ಒಡೆಯರ್ ಭಾಗವಹಿಸಿ ಶುಭಹಾರೈಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್ ಕುಮಾರ್, ಮುಖಂಡರಾದ ಅಶೋಕ್‌ಜಯರಾಮ್, ಡಾ.ಸಿದ್ದರಾಮಯ್ಯ, ಮದ್ದೂರುಸ್ವಾಮಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷ ಮಂಗಳ ನವೀನ್‌ಕುಮಾರ್, ಧನಂಜಯ್, ಸೋಮಶೇಖರ್, ನಿರಂಜನ್‌ಬಾಬು, ರೈತ ಮುಖಂಡ ರಾಘುಪ್ರಸಾಶ್ ಭಾಗವಹಿಸಿದ್ದರು.

ತಾಲೂಕು ಕಚೇರಿಗೆ ರೈತರ ಮುತ್ತಿಗೆ, ಪ್ರತಿಭಟನೆ



ಶ್ರೀರಂಗಪಟ್ಟಣ ತಹಸೀಲ್ದಾರ್‌ಗೆ ಮನವಿ ಸಲ್ಲಿಸುತ್ತಿರುವ ರೈತರು.

ಶ್ರೀರಂಗಪಟ್ಟಣ: ಕ್ರಷರ್‌ಗಳಿಂದ ಅಧಿಕ ಭಾರ ತುಂಬಿದ ಬೃಹತ್ ಲಾರಿಗಳ ಸಂಚಾರದಿಂದಾಗಿ ರಸ್ತೆಗಳು ಸಂಪೂರ್ಣವಾಗಿ ಹಳ್ಳ ಬಿದ್ದು, ಧೂಳಿನಿಂದ ಸ್ಥಳೀಯ ನಿವಾಸಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಆರೋಪಿಸಿ ವಿವಿಧ ಗ್ರಾಮಗಳ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಲೂಕು ಕಚೇರಿಗೆ ರೈತ ಸಂಘದ ಮಂಜೇಶ್ ಗೌಡ ನೇತೃತ್ವದಲ್ಲಿ ನೂರಾರು ಮಹಿಳೆಯರು ಹಾಗೂ ಪುರುಷರು ಮುತ್ತಿಗೆ ಹಾಕಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಹಂಗರಹಳ್ಳಿ, ಕಾಳೇನಹಳ್ಳಿ, ಚೆನ್ನನಕೆರೆ, ಮುಂಡಗದೊರೆ ಸೇರಿದಂತೆ ಅರಣ್ಯ ವ್ಯಾಪ್ತಿ ಹಾಗೂ ಸಿದ್ದಾಪುರ ಜಕ್ಕನಹಳ್ಳಿ, ಗಣಂಗೂರು, ಗೌಡಹಳ್ಳಿ ಗೋಮಾಳಗಳಲ್ಲಿ ಅಕ್ರಮ ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ಜೊತೆಗೆ ಗ್ರಾಮಗಳ ಮೂಲಕ ಹಾದು ಹೋಗುವ ಅಧಿಕ ಲೋಡ್ ತುಂಬಿದ ಭಾರೀ ವಾಹನಗಳಿಂದಾಗಿ ರಸ್ತೆಗಳು ಹಾಳಾಗುತ್ತಿವೆ. ಈ ಬಗ್ಗೆ ತಾಲೂಕು ಮಟ್ಟದ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಅಕ್ರಮವನ್ನು ತಡೆಯಲು ತಾಲೂಕು ಆಡಳಿತ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳಕ್ಕೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಆಗಮಿಸಿ ಕೂಡಲೇ ಅಕ್ರಮ ಗಣಿಗಾರಿಕೆ ಹಾಗೂ ಕ್ರಷರ್ ವಾಹನಗಳ ಹಾವಳಿ ತಡೆಗಟ್ಟುವ ಭರವಸೆ ನೀಡಬೇಕು ಎಂದು ಒತ್ತಾಯಿಸಿದರು. ತಹಸೀಲ್ದಾರ್ ಪರಶುರಾಮ್ ಸತ್ತಿಗೇರಿ ಸ್ಥಳಕ್ಕಾಗಮಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಮಹೇಶ್, ರವಿಚಂದ್ರ, ಚುಂದಗಾಲು ಶಂಕರ್, ಕೊಡಿಶೆಟ್ಟಿಪುರ ತೇಜು ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ಗೆ ಭಾರತ

2000 ಹಾಗೂ 2017ರಲ್ಲಿ ರನ್ನರ್ ಅಪ್ ಎನಿಸಿಕೊಂಡಿತ್ತು. ಮಂಗಳವಾರ ದುಬೈನ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 49.3 ಓವರ್‌ಗಳಲ್ಲಿ 264 ರನ್‌ಗಳಿಗೆ ಆಲೌಟಾಯಿತು. ಆಸೀಸ್ ನೀಡಿದ ಗೆಲುವಿನ ಗುರಿ ಬೆನ್ನತ್ತಿದ ಭಾರತ ಇನ್ನೂ 11 ಎಸೆತಗಳು ಬಾಕಿ ಇರುವಾಗಲೇ 48.1 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 267 ರನ್ ಗಳಿಸಿ ಜಯಭೇರಿ ಬಾರಿಸಿತು. ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 30 ರನ್‌ಗಳ ಜೊತೆಯಾಟವಾಡಿದರು. ಈ ವೇಳೆ ಗಿಲ್ ಕೇವಲ 8 ರನ್ ಗಳಿಸಿ ಡ್ವಾರ್ಶೂಸ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ರೋಹಿತ್ ಶರ್ಮಾ ಕೂಡ 28 ರನ್ ಗಳಿಸಿ ಭರ್ಜರಿ ಹೊಡೆತಕ್ಕೆ ಕೈಹಾಕಿ ಕೂಪರ್ ಕಾನೋಲಿ ಬೌಲಿಂಗ್‌ನಲ್ಲಿ ಔಟಾದರು.

ಕೊಹ್ಲಿ–ಶ್ರೇಯಸ್ ಅಯ್ಯರ್ ಅಮೋಘ ಜೊತೆಯಾಟ: ಬಳಿಕ ಜೊತೆಗೂಡಿದ ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್ ಭಾರತ ತಂಡದ ರನ್ ಗಳಿಕೆಗೆ ವೇಗ ನೀಡಿದರು. ಈ ಜೋಡಿ 3ನೇ ವಿಕೆಟ್‌ಗೆ 91 ರನ್‌ಗಳ ಜೊತೆಯಾಟವಾಡಿತು. ಆದರೆ 45 ರನ್ ಗಳಿಸಿ ಅರ್ಧ ಶತಕದ ಹೊಸ್ತಿಲಲ್ಲಿದ್ದ ಶ್ರೇಯಸ್ ಅಯ್ಯರ್ ಆಡ್ಯಂ ಜಂಪಾ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಕೈಹಾಕಿ ಕ್ಲೀನ್ ಬೌಲ್ಡ್ ಆದರು. ಬಳಿಕ ಕೊಹ್ಲಿ ಜೊತೆಗೂಡಿದ ಅಕ್ಷರ್ ಪಟೇಲ್ (28 ರನ್) ಭರವಸೆ ಮೂಡಿಸಿದರಾದರೂ, ನಾಥನ್ ಎಲ್ಲಿಸ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಅಕ್ಷರ್ ಪಟೇಲ್ ನಿರ್ಗಮನ ಬಳಿಕ ತಂಡವನ್ನು ಗೆಲುವಿನತ್ತ ಸಾಗಿಸಿದ ವಿರಾಟ್ ಕೊಹ್ಲಿ 98 ಎಸೆತಗಳಲ್ಲಿ 5 ಬೌಂಡರಿ ಒಳಗೊಂಡ 84 ರನ್ ಗಳಿಸಿದ್ದ ವೇಳೆ ಆಡ್ಯಂ ಜಂಪಾ ಬೌಲಿಂಗ್‌ನಲ್ಲಿ ಡ್ವಾರ್ಶೂಸ್‌ಗೆ ಕ್ಯಾಚ್ ನೀಡಿ ಔಟಾದರು. ಆ ಮೂಲಕ ಶತಕದಿಂದ ವಂಚಿತರಾದರು.

ಬಳಿಕ ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ ಬಂದಷ್ಟೇ ವೇಗವಾಗಿ 28 ರನ್ ಗಳಿಸಿ ಭಾರತದ ಗೆಲುವನ್ನು ಸುಲಭಗೊಳಿಸಿದರು. ಆದರೆ ಮತ್ತೆ ದೊಡ್ಡ ಹೊಡೆತಕ್ಕೆ ಮುಂದಾಗಿ ಮ್ಯಾಕ್ಸ್‌ವೆಲ್‌ಗೆ ಕ್ಯಾಚ್ ನೀಡಿ ಔಟಾದರು. ನಂತರ ಕ್ರೀಸ್‌ಗೆ ಬಂದ ರವೀಂದ್ರ ಜಡೇಜಾ 2 ರನ್ ಮತ್ತು ಕೆಎಲ್ ರಾಹುಲ್ ಅಜೇಯ 42 ರನ್ ಗಳಿಸಿ ಗೆಲುವಿನ ಔಪಚಾರಿಕತೆ ಮುಗಿಸಿದರು. ಆಸ್ಟ್ರೇಲಿಯಾ ಪರ ನಾಥನ್ ಎಲ್ಲಿಸ್ ಮತ್ತು ಆಡಂ ಜಂಪಾ ತಲಾ 2, ಕೂಪರ್ ಕಾನೋಲಿ ಮತ್ತು ಡ್ವಾರ್ಶೂಸ್ ತಲಾ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ, ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಪರ ಟ್ರಾವಿಸ್ ಹೆಡ್ 39, ನಾಯಕ ಸ್ಟೀವ್ ಸ್ಮಿತ್ 73, ಮಾರ್ನಸ್ ಲಾಬುಷೇನ್ 29, ಅಲೆಕ್ಸ್ ಕ್ಯಾರಿ 61, ಜೋಶ್ ಇಂಗ್ಲಿಸ್ 11, ಗ್ಲೆನ್ ಮ್ಯಾಕ್ಸ್‌ವೆಲ್ 7, ಬೆನ್ ದ್ವಾರ್ಶಿಸ್ 19, ನೇಥನ್ ಎಲ್ಲಿಸ್ 10, ಆಡಂ ಜಂಪಾ 7 ರನ್ ಗಳಿಸಿದರು.

ಭಾರತದ ಪರ ಮೊಹಮ್ಮದ್ ಶಮಿ 3, ವರುಣ್ ಚಕ್ರವರ್ತಿ ಹಾಗೂ ರವೀಂದ್ರ ಜಡೇಜ ತಲಾ 2 ಮತ್ತು ಅಕ್ಷರ್ ಪಟೇಲ್ ಹಾಗೂ ಹಾರ್ದಿಕ್ ಪಾಂಡ್ಯ ತಲಾ ಒಂದು ವಿಕೆಟ್ ಗಳಿಸಿದರು. ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ದಾಖಲೆ ಸರದಾರ ಕೊಹ್ಲಿ...!'

ಏತನ್ಮಧ್ಯೆ ಆಸ್ಟ್ರೇಲಿಯಾ ಬ್ಯಾಟಿಂಗ್ ವೇಳೆ ಭಾರತದ ವಿರಾಟ್ ಕೊಹ್ಲಿ ದಾಖಲೆ ಬರೆದಿದ್ದಾರೆ. ಮೊದಲ ಇನ್ನಿಂಗ್ಸ್‌ನ 26ನೇ ಓವರ್‌ನಲ್ಲಿ ಜಡೇಜಾ ಎಸೆತದಲ್ಲಿ ಜೋಸ್ ಇಂಗ್ಲಿಸ್ ಅವರ ಕ್ಯಾಚ್ ಪಡೆಯುತ್ತಿದ್ದಂತೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ಪರ ಅತೀ ಹೆಚ್ಚು ಕ್ಯಾಚ್‌ಗಳನ್ನು ಪಡೆದ ದಾಖಲೆ ಬರೆದಿದ್ದಾರೆ. ಇಂಗ್ಲಿಸ್ ಕ್ಯಾಚ್ ಪಡೆಯುವ ಮೊದಲು, ರಾಹುಲ್ ದ್ರಾವಿಡ್ ಅವರೊಂದಿಗೆ ಜಂಟಿಯಾಗಿ ಸಾಧನೆ ಮಾಡಿದ ಆಟಗಾರ ಆಗಿದ್ದರು. ಇದೀಗ ದ್ರಾವಿಡ್ ಅವರನ್ನು ಹಿಂದಿಕ್ಕಿದ್ದಾರೆ. ವಿರಾಟ್ ಇದುವರೆಗೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 657 ಇನ್ನಿಂಗ್ಸ್‌ಗಳಲ್ಲಿ (ಎಲ್ಲಾ ಮೂರು ಸ್ವರೂಪಗಳು) 335 ಕ್ಯಾಚ್‌ಗಳನ್ನು ಪಡೆದಿದ್ದಾರೆ.

ಆದರೆ ರಾಹುಲ್ ದ್ರಾವಿಡ್ 571 ಇನ್ನಿಂಗ್ಸ್‌ಗಳಲ್ಲಿ 334 ಕ್ಯಾಚ್‌ಗಳನ್ನು ಪಡೆದ ಸಾಧನೆ ಮಾಡಿದ್ದಾರೆ. ವಿರಾಟ್ ಮತ್ತು ದ್ರಾವಿಡ್ ನಂತರ, ಮೊಹಮ್ಮದ್ ಅಜರುದ್ದೀನ್ (261) ಮತ್ತು ಸಚಿನ್ ತೆಂಡೂಲ್ಕರ್ (256) ಮೂರು ಸ್ವರೂಪಗಳಲ್ಲಿ ಅತೀ ಹೆಚ್ಚು ಕ್ಯಾಚ್‌ಗಳನ್ನು ಪಡೆದ ಆಟಗಾರರಾಗಿದ್ದಾರೆ.

ಒಟ್ಟಾರೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತೀ ಹೆಚ್ಚು ಕ್ಯಾಚ್‌ಗಳನ್ನು ಪಡೆದ ದಾಖಲೆ ಮಹೇಲ ಜಯವರ್ಧನೆ ಅವರ ಹೆಸರಿನಲ್ಲಿದೆ. ಜಯವರ್ಧನೆ 768 ಅಂತಾರಾಷ್ಟ್ರೀಯ ಇನ್ನಿಂಗ್ಸ್‌ಗಳಲ್ಲಿ 440 ಕ್ಯಾಚ್‌ಗಳನ್ನು ಪಡೆದುಕೊಂಡಿದ್ದಾರೆ. ಈ ಪಟ್ಟಿಯಲ್ಲಿ ಜಯವರ್ಧನೆ ನಂತರ ರಿಕಿ ಪಾಂಟಿಂಗ್ (364), ರಾಸ್ ಟೇಲರ್ (351) ಮತ್ತು ಜಾಕ್ವೆಸ್ ಕಾಲಿಸ್ (338) ಇದ್ದಾರೆ. ವಿರಾಟ್ 335 ಕ್ಯಾಚ್‌ಗಳೊಂದಿಗೆ ಐದನೇ ಸ್ಥಾನದಲ್ಲಿದ್ದಾರೆ.



ಚಾಂಪಿಯನ್ಸ್ ಟ್ರೋಫಿಯಲ್ಲಿ ನಂ1: ವಿರಾಟ್ ಕೊಹ್ಲಿ 40 ರನ್ ಗಳಿಸುತ್ತಿದ್ದಂತೆ ಭಾರತದ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದಾರೆ. ಚಾಂಪಿಯನ್ಸ್ ಟ್ರೋಫಿಯಲ್ಲಿ ಕೊಹ್ಲಿ ಈ ವರೆಗೆ 17 ಪಂದ್ಯಗಳನ್ನು ಆಡಿದ್ದು 16 ಇನ್ನಿಂಗ್ಸ್‌ಗಳಲ್ಲಿ 1 ಶತಕ ಮತ್ತು 5 ಅರ್ಧಶತಕಗಳೊಂದಿಗೆ 702 ರನ್ ಗಳಿಸಿದ್ದಾರೆ. ಈ ಮೂಲಕ ಕೊಹ್ಲಿ ಭಾರತದ ಮಾಜಿ ಆರಂಭಿಕ ಆಟಗಾರ ಶಿಖರ್ ಧವನ್ ಅವರನ್ನು ಹಿಂದಿಕ್ಕಿದ್ದಾರೆ. ಧವನ್ 10 ಪಂದ್ಯಗಳಲ್ಲಿ 3 ಶತಕ ಮತ್ತು 3 ಅರ್ಧಶತಕಗಳೊಂದಿಗೆ 701 ರನ್ ಗಳಿಸಿದ್ದರು.

ಸಚಿನ್ ದಾಖಲೆ ಬ್ರೇಕ್: ಐಸಿಸಿ ಟೂರ್ನಿಯಲ್ಲಿ 24ನೇ ಬಾರಿ 50ಕ್ಕಿಂತ ಹೆಚ್ಚು ರನ್ ಬಾರಿಸುವ ಮೂಲಕ ಸಚಿನ್ ತೆಂಡೂಲ್ಕರ್ ಅವರ ದಾಖಲೆಯನ್ನು ಕೊಹ್ಲಿ ಮುರಿದಿದ್ದಾರೆ.

ಇನ್ನು ಸರ್ಕಾರದ ಅನುಮತಿ ಕಡ್ಡಾಯ

ತೆಗೆದುಕೊಂಡರು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ರಚಿಸಿರುವುದು ಪ್ರಾಧಿಕಾರಗಳು ಬಡಾವಣೆ ನಿರ್ಮಿಸಿ ರಾಜ್ಯದ ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ನಿವೇಶನಗಳು ಸಿಗುವಂತಾಗಲಿ ಎನ್ನುವ ಉದ್ದೇಶದಿಂದಲೇ ಹೊರತು ಖಾಸಗಿ ಬಡಾವಣೆಗಳ ನಿರ್ಮಾಣ ಮತ್ತು ನಕ್ಷೆಗಳಿಗೆ ಅನುಮೋದನೆ ನೀಡಲು ಅಲ್ಲ.

ಖಾಸಗಿ ಬಡಾವಣೆಗಳ ನಿರ್ಮಾಣಕ್ಕೆ ಒಂದು ರೀತಿ ನಿಯಮಗಳು ಅನ್ವಯಿಸಿದರೆ ಸರ್ಕಾರದ (ನಗರಾಭಿವೃದ್ಧಿ ಪ್ರಾಧಿಕಾರಗಳ) ವತಿಯಿಂದ ನಿರ್ಮಾಣಕ್ಕೆ ಮತ್ತೊಂದು ರೀತಿ ನಿಯಮಗಳಿವೆ. ಇವು ತಾರತಮ್ಯದಿಂದ ಕೂಡಿವೆ. ಆದ್ದರಿಂದ ಎಲ್ಲದಕ್ಕೂ ಅನ್ವಯವಾಗುವಂತೆ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕು ಎಂದು ಸೂಚಿಸಿದರು. ರೈತರ ಮನವೊಲಿಸಿ, ಜಮೀನು ಪಡೆದು 50:50ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿ ಸಾಮಾನ್ಯ ಜನರಿಗೆ ಲಭ್ಯವಾಗುವಂತೆ ಪ್ರಾಧಿಕಾರಗಳು ಕೆಲಸ ಮಾಡಬೇಕು.

ಖಾಸಗಿ ಬಡಾವಣೆಗಳ ನಿರ್ಮಾಣ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯನ್ವಯ ನಾಗರಿಕ ಸೌಲಭ್ಯ, ಮೀಸಲು ನಿವೇಶನ, ಒಳಚರಂಡಿ ವ್ಯವಸ್ಥೆ, ಉದ್ಯಾನವನ, ರಸ್ತೆಗಳ ನಿರ್ಮಾಣ ನಿಯಮಾವಳಿಗಳನ್ನು ಖಾಸಗಿ ಬಡಾವಣೆಗಳಲ್ಲಿ ತರಲು ಸಾಧ್ಯವಿದೆ ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಪ್ರಾಧಿಕಾರಗಳಿಂದ ಬಡಾವಣೆಗಳು ನಿರ್ಮಾಣವಾದರೆ, ತಕರಾರು ಇರುವುದಿಲ್ಲ, ನಕ್ಷೆ ಕಾನೂನು ರೀತಿಯಲ್ಲಿ ಇರುತ್ತದೆ. ಜೊತೆಗೆ ಪ್ರಾಧಿಕಾರ ಗಳ ಮೇಲೆ ಜನರಿಗೆ ಗೌರವ ಹೆಚ್ಚಾಗುತ್ತದೆ. ಖಾಸಗಿಯವರು ಬಡಾವಣೆಗಳನ್ನು ನಿರ್ಮಿಸಿ ಸಾವಿರಾರು ನಿವೇಶನ ಮಾರಾಟ ಮಾಡಿ ಹೆಚ್ಚಿನ ಹಣ ಗಳಿಸುತ್ತಿರುವಾಗ ಪ್ರಾಧಿಕಾರಗಳ ಆಯುಕ್ತರು ಮತ್ತು ನಗರ ಯೋಜಕ ಸದಸ್ಯರುಗಳಿಂದ ಏಕೆ ಸಾಧ್ಯವಾಗುತ್ತಿಲ್ಲ ಎಂದರು. ನಗರಾಭಿವೃದ್ಧಿ ಪ್ರಾಧಿ ಕಾರಗಳು, ಯೋಜನಾ ಪ್ರಾಧಿಕಾರಗಳ ಹಣ ಸದ್ಬಳಕೆ ಮಾಡಿಕೊಳ್ಳಬೇಕು, ಬಡ್ಡಿಗಾಗಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡಬಾರದು, ಬಡಾವಣೆ ನಿರ್ಮಿಸಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಮೂರು ತಿಂಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಲಾಗುತ್ತದೆ, ಅಷ್ಟರಲ್ಲಿ ಪಗ್ರತಿ ಸಾಧಿಸಿರಬೇಕು ಎಂದರು.

55 ಲಕ್ಷ ಮನೆ, ನಿವೇಶನಗಳಿಗೆ ದಾಖಲೆ

ಮಾಲೀಕನಿಗೆ ದಾಖಲಾತಿ ಸಿಗಲಿದೆ. ಸರ್ಕಾರಕ್ಕೆ ಟ್ಯಾಕ್ಸ್ ಬರುತ್ತದೆ. ನಮ್ಮ ನಿರ್ಧಾರದಿಂದ ಸಾರ್ವಜನಿಕರು ಖುಷಿಯಾಗಿದ್ದಾರೆ. ಇದು ನಮ್ಮ ಸರ್ಕಾರದ ಐತಿಹಾಸಿಕ ನಿರ್ಧಾರ ಎಂದರು.

ಬಳಿಕ ಮಾತನಾಡಿದ ಸಚಿವ ರಹೀಂ ಖಾನ್, ನಗರ–ಪಟ್ಟಣ, ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಅನಧಿಕೃತ ನಿವೇಶನಗಳಿಗೆ, ಮನೆಗಳಿಗೆ ಒಂದು ಬಾರಿ 'ಬಿ' ಖಾತೆ ಮಾಡಿಕೊಡುವ ಪ್ರಕ್ರಿಯೆ ಶುರುವಾಗಿದೆ. ಇದು ನಮ್ಮ ಸರ್ಕಾರದ ಐತಿಹಾಸಿಕ ನಿರ್ಧಾರ. 40 ವರ್ಷಗಳಿಂದ ದಾಖಲಾತಿ ಇಲ್ಲದೆ ಜನರು ಕಣ್ಣೀರು ಹಾಕುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಸಚಿವ ಸಂಪುಟ ಉಪಸಮಿತಿ ನಿರ್ಣಯದಂತೆ ಬಿ–ಖಾತಾ ಮಾಡುವ ನಿರ್ಣಯ ಮಾಡಲಾಗಿದೆ. ಈಗಾಗಲೇ ಬಿ ಖಾತಾ ಪ್ರಕ್ರಿಯೆ ಶುರುವಾಗಿದೆ. ಸರ್ಕಾರದ ನಿಯಮದಿಂದ ಅನಧಿಕೃತವಾಗಿ ಮನೆ ನಿರ್ಮಾಣ ಮಾಡಿರುವವರಿಗೆ, ಮನೆ ಮಾಲೀಕನಿಗೆ ದಾಖಲಾತಿ ಸಿಗಲಿದೆ. ಇದು ನಮ್ಮ ಸರ್ಕಾರದ ಐತಿಹಾಸಿಕ ತೀರ್ಮಾನವಾಗಿದೆ ಎಂದರು.

ಅರಣ್ಯ ಪ್ರದೇಶದಲ್ಲಿ ಬೆಂಕಿ ತಡೆಗೆ ಅಗತ್ಯ ಮುಂಜಾಗ್ರತಾ ಕ್ರಮ ವಹಿಸಿ

ಸಾರ್ವಜನಿಕರಲ್ಲಿ ಅರಣ್ಯ ರಕ್ಷಣೆ ಅರಿವು ಮೂಡಿಸಿ: ಅರಣ್ಯ ಇಲಾಖೆ, ಅಗ್ನಿಶಾಮಕ ಠಾಣೆ ಅಧಿಕಾರಿಗಳಿಗೆ ಡಿಸಿ ಲಕ್ಷ್ಮೀಕಾಂತ ರೆಡ್ಡಿ ಸೂಚನೆ



ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಬೆಂಕಿ ಕುರಿತು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಸಂಬಂಧ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅರಣ್ಯ ಇಲಾಖೆ ಮತ್ತು ಅಗ್ನಿಶಾಮಕ ಠಾಣೆ ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಮಾ. 4(ಆರ್‌ಕೆ)– ಬೇಸಿಗೆ ಬಿಸಿಲು ಹೆಚ್ಚಾಗುತ್ತಿರುವುದರಿಂದ ಅರಣ್ಯ ಪ್ರದೇಶದಲ್ಲಿ ಬೆಂಕಿ ತಡೆಗೆ ಅಗತ್ಯ ಎಚ್ಚರಿಕಾ ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಇಂದಿಲ್ಲಿ ಅರಣ್ಯ ಇಲಾಖೆ ಮತ್ತು ಅಗ್ನಿಶಾಮಕ ಠಾಣೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಅರಣ್ಯ ಬೆಂಕಿ ಕುರಿತು ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಸಂಬಂಧ ಸಭೆ ನಡೆಸಿದ ಅವರು, ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಅರಣ್ಯದಲ್ಲಿ ಅಗ್ನಿ ಅವಘಡಗಳು ಸಂಭವಿಸಿ ಇಲಾಖೆಗೆ ಬೆಂಕಿ ನಂದಿಸುವುದು ಸವಾಲಾಗಿರುತ್ತದೆ ಎಂದು ಹೇಳಿದರು.

ಆರಂಭದಿಂದಲೇ ಅಗ್ನಿಶಾಮಕ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಉತ್ತಮ ಕಾರ್ಯಾಚರಣೆ ನಡೆಸುವ ಮೂಲಕ ಅಗ್ನಿ ಅವಘಡಗಳು ಸಂಭವಿಸದಂತೆ ತಡೆಯಬೇಕು, ಅದಕ್ಕೆ ಸಾರ್ವಜನಿಕರ ಸಹಕಾರವೂ ಬೇಕಾಗಿರುವುದರಿಂದ ವ್ಯಾಪಕ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.

ತಿ.ನರಸೀಪುರದ ಕುಂಭಮೇಳ, ಮೈಸೂರಿನ ಮಹಾರಾಣಿ ಕಾಲೇಜು ಕುಸಿತ ಸಂದರ್ಭ, ಚಾಮುಂಡಿಬೆಟ್ಟ ಮತ್ತು ಸಿವೇಜ್ ಫಾರಂನ ಕಸದ ರಾಶಿಗೆ ಬೆಂಕಿ ತಗುಲಿದ್ದ ವೇಳೆ ಅಗ್ನಿಶಾಮಕ ಅಧಿಕಾರಿಗಳಾದ ಗುರುರಾಜ್ ಮತ್ತು ಚಂದನ್ ನೇತೃತ್ವದ ತಂಡದ ಸಿಬ್ಬಂದಿ ನಡೆಸಿದ ಕಾರ್ಯಾಚರಣೆ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ಅರಣ್ಯ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಾಗ ತಕ್ಷಣ ನಂದಿಸಲು ಸಜ್ಜಾಗಬೇಕು ಎಂದರು.

ಬೆಂಕಿ ನಂದಿಸಲು ಅಗತ್ಯವಿರುವ ಹೆಚ್ಚುವರಿ ವಾಹನ, ಸಲಕರಣೆ ಖರೀದಿಗೆ ಅಗತ್ಯವಿರುವ ಅನುದಾನವನ್ನು ಜಿಲ್ಲಾ ವಿಪತ್ತು ನಿರ್ವಹಣಾ ನಿಧಿಯಿಂದ ಕೊಡಲಾಗುವುದು. ಅರಣ್ಯ ಸೇರಿದಂತೆ ಇನ್ನಿತರ ಯಾವುದೇ ಸ್ಥಳದಲ್ಲಿ ಬೆಂಕಿ ಕಾಣಿಸಿಕೊಂಡಲ್ಲಿ ಸಾರ್ವಜನಿಕರು ತಕ್ಷಣ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆಯೂ ಅರಿವು ಮೂಡಿಸಬೇಕು ಎಂದರು.

ಮೊದಲೇ ನೀರು ಲಭ್ಯವಿರುವ ಸ್ಥಳಗಳನ್ನು ಗುರುತಿಸಿಕೊಂಡು ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಾಗ ವಾಹನದಲ್ಲಿ ನೀರು ತುಂಬಿಸಿಕೊಂಡು ತಕ್ಷಣ ಬೆಂಕಿ ನಂದಿಸುವ ಕಾರ್ಯಕ್ಕೆ ಅನುವಾಗುವಂತೆ ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕು ಎಂದ ಲಕ್ಷ್ಮೀಕಾಂತ ರೆಡ್ಡಿ, ಬೀಡಿ–ಸಿಗರೇಟ್ ತುಂಡುಗಳನ್ನು ಎಲ್ಲೆಂದರಲ್ಲಿ ಎಸೆಯದಂತೆ ಸಾರ್ವಜನಿಕರಿಗೆ ಅರಿವು ಮೂಡಿಸಿ ಎಂದು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯ, ಇತ್ತೀಚೆಗೆ ಚಾಮುಂಡಿಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಾಗ ಅರಣ್ಯಾಧಿಕಾರಿಗಳು ಅಗ್ನಿಶಾಮಕ ಠಾಣೆ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಬೆಂಕಿ ನಂದಿಸಿದ್ದಾರೆ. ನಂತರ ಅಲ್ಲಿ ವಾಚ್ ಟವರ್‌ಗಳನ್ನು ನಿರ್ಮಿಸಿಕೊಂಡು ನಿಗಾ ವಹಿಸಲಾಗುತ್ತಿದ್ದು, ಅರಣ್ಯ ಪ್ರದೇಶದಲ್ಲೂ ಸಿಬ್ಬಂದಿ ಎಚ್ಚೆತ್ತು ಬೆಂಕಿ ತಗುಲದಂತೆ ನಿಗಾ ವಹಿಸುತ್ತಿದ್ದಾರೆ ಎಂದರು. ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜು, ಅಗ್ನಿಶಾಮಕ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಮರದ ಎಲೆಗಳಿಗೆ ಬೆಂಕಿ ಹಾಕುವವರಿಗೆ ದಂಡ

ಮೈಸೂರು,ಮಾ.4(ಆರ್‌ಕೆ)–ಮರದಿಂದ ಉದುರುವ ಒಣಗಿದ ಎಲೆಗಳಿಗೆ ಬೆಂಕಿ ಹಚ್ಚುವವರ ವಿರುದ್ಧ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗುತ್ತದೆ ಎಂದು ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಇಂದಿಲ್ಲಿ ತಿಳಿಸಿದ್ದಾರೆ.



ಈ ಹಿಂದಿನಿಂದಲೂ ನಗರಪಾಲಿಕೆ ಅಧಿಕಾರಿಗಳು ನಗರದ ರಸ್ತೆಗಳು, ಚರಂಡಿಗಳಲ್ಲಿ ಒಣಗಿದ ಎಲೆ (ತರಗು)ಗಳನ್ನು ಗುಡ್ಡೆ ಮಾಡಿ ಬೆಂಕಿ ಹಾಕಿ ಸುಟ್ಟು ಹಾಕುವವರ ವಿರುದ್ಧ ಕ್ರಮ ವಹಿಸುತ್ತಿದ್ದರು. ಈಗ ತಾವು ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಬಳಿಕ 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿ, ದಂಡ ಹಾಕಲಾಗಿದೆ ಎಂದು ತಿಳಿಸಿದರು. ವಸತಿ ಬಡಾವಣೆ, ವಾಣಿಜ್ಯ ಪ್ರದೇಶದ ರಸ್ತೆಗಳಲ್ಲಿ ಉದುರಿ ಬಿದ್ದ ಮರದ ಎಲೆಗಳಿಗೆ ಹಾಗೂ ಚರಂಡಿಗಳಲ್ಲಿ ಸಂಗ್ರಹವಾಗುವ ತರಗಿಗೆ ಬೆಂಕಿ ಹಾಕುವುದು ಕಾನೂನಿನಡಿ ಅಪರಾಧವಾಗಿದೆ. ವಾಯು ಮಾಲಿನ್ಯ ಉಂಟಾಗಿ ಪರಿಸರ ಹಾಳಾಗುತ್ತದೆ ಎಂದು ಆಯುಕ್ತರು ತಿಳಿಸಿದರು.

ಮಾ.7ರಿಂದ ಮೈಸೂರಲ್ಲಿ ನಂದಿ ರಥಯಾತ್ರೆ ಕಾರ್ಯಕ್ರಮ

ಮೈಸೂರು,ಮಾ.4(ಜಿಎ)–ಮೈಸೂರಿನಲ್ಲಿ ನಂದಿ ರಥಯಾತ್ರೆ ಸಮಿತಿ ವತಿಯಿಂದ ಮಾ.7 ಮತ್ತು 8ರಂದು ನಂದಿ ರಥಯಾತ್ರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಸಂಚಾಲಕ ಮಳವಳ್ಳಿ ಮಂಜುನಾಥ್ ಈ ವಿಷಯ ತಿಳಿಸಿ, ಮೈಸೂರಿಗೆ ಆಗಮಿಸುವ ರಥಯಾತ್ರೆಯನ್ನು ಮಾ.7ರಂದು ಮಧ್ಯಾಹ್ನ 3 ಗಂಟೆಗೆ ಮಣಿಪಾಲ್ ಆಸ್ಪತ್ರೆ ಬಳಿ ಪುಷ್ಪಾರ್ಚನೆಯೊಂದಿಗೆ ಸ್ವಾಗತಿಸಲಾಗುತ್ತದೆ. ಬಳಿಕ ಅಶೋಕ ರಸ್ತೆಯ ವೀರ ಗಣಪತಿ ದೇವಸ್ಥಾನ ಬಳಿ ನಂದಿ ಪೂಜೆ ನೆರವೇರಿಸಲಾಗುತ್ತದೆ. ಅಲ್ಲಿಂದ ಇರ್ವಿನ್ ರಸ್ತೆ ಮೂಲಕ ದಾಸಪ್ಪ ಸರ್ಕಲ್ ಮಾರ್ಗವಾಗಿ ಸಂಜೆ 5ಗಂಟೆಗೆ ರಥಯಾತ್ರೆ ಒಂಟಿಕೊಪ್ಪಲ್ ವೆಂಕಟರಮಣ ಸ್ವಾಮಿ ದೇವಸ್ಥಾನ ತಲುಪಲಿದೆ ಎಂದರು. ಇಲ್ಲಿಂದ ಶೋಭಾಯಾತ್ರೆ ವಿವಿಧ ಜಾನಪದ ಕಲಾತಂಡಗಳೊಡನೆ ಪಡುವಾರಹಳ್ಳಿಯ ಮಹಾದೇಶ್ವರ ದೇವಸ್ಥಾನ ತಲುಪಲಿದೆ. ಮಾ.8ರಂದು ಬೆಳಗ್ಗೆ 10ಗಂಟೆಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿ ಸಮಾರೋಪ ಕಾರ್ಯಕ್ರಮ ನಡೆಯಲಿದೆ. ತದನಂತರ ರಥಯಾತ್ರೆ ದೇವರಾಜ ಅರಸು ರಸ್ತೆ ಮೂಲಕ ಮೆಟ್ರೋಪೋಲ್ ವೃತ್ತದ ಮೂಲಕ ಪಿರಿಯಾಪಟ್ಟಣದತ್ತ ಹೊರಡಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಹದೇವು, ನವೀನ್ ಉಪಸ್ಥಿತರಿದ್ದರು.

ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿ ಶಾಖೆ ಉದ್ಘಾಟನೆ



ಮೈಸೂರಿನಲ್ಲಿ ಜೊಲ್ಲೆ ಗ್ರೂಪ್‌ನ ಅಂಗ ಸಂಸ್ಥೆ ಶ್ರೀ ಬೀರೇಶ್ವರ ಕೋ–ಆಪ್ ಕ್ರೆಡಿಟ್ ಸೊಸೈಟಿಯ 226ನೇ ಶಾಖೆಯನ್ನು ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷರಾದ ಶ್ರೀ ಚಿದಾನಂದ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಸಂಸದ ಯದುವೀರ ಒಡೆಯರ್ ಉದ್ಘಾಟಿಸಿದರು. ಮಾಜಿ ಸಚಿವೆ ಶಶಿಕಲಾ ಜೊಲ್ಲೆ, ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಮಲ್ಲಿಕಾರ್ಜುನಪ್ಪ, ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ ಭಟ್ಟ, ಮಾಜಿ ಮೇಯರ್ ಶಿವಕುಮಾರ, ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜ ಅರಸು, ಚಾಮರಾಜ ಕ್ಷೇತ್ರದ ಬಿಜೆಪಿ ಮಂಡಲ ಅಧ್ಯಕ್ಷ ಆರ್.ವಿ.ದಿನೇಶಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರಮಾಣ ಪತ್ರ ವಿತರಣೆ



ಮೈಸೂರಿನ ವಿಜಯನಗರದಲ್ಲಿರುವ ಖುಷಿ ವಿನು ಅಕಾಡೆಮಿಯಲ್ಲಿ ಮಹಿಳೆಯರಿಗಾಗಿ ಏರ್ಪಡಿಸಿದ್ದ 45 ದಿನಗಳ ಮೇಕಪ್ ಆರ್ಟಿಸ್ಟ್ ಕೋರ್ಸ್ ತರಬೇತಿ ಪಡೆದ ಮಹಿಳೆಯರಿಗೆ ಸಂಸ್ಥೆಯ ವತಿಯಿಂದ ಪ್ರಮಾಣ ಪತ್ರ ನೀಡಲಾಯಿತು. ಚಿತ್ರದಲ್ಲಿ ಸಂಸ್ಥೆಯ ಸಂಸ್ಥಾಪಕಿ ಖುಷಿ ವಿನು ಅವರನ್ನು ಕಾಣಬಹುದು.

ದೇವಲಾಪುರದಲ್ಲಿ ಕಣ್ಣಿನ ಉಚಿತ ತಪಾಸಣೆ; ಶಸ್ತ್ರಚಿಕಿತ್ಸಾ ಶಿಬಿರ



ಮೈಸೂರು,ಮಾ.4–ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸರ್ಕಾರಿ ಶುಶ್ರೂಷಾ ಮಹಾ ವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ತಾಲೂಕಿನ ದೇವಲಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿರುವ 7 ದಿನಗಳ ಕಣ್ಣಿನ ಉಚಿತ ತಪಾಸಣೆ ಮತ್ತು ಶಸ್ತ್ರಚಿಕಿತ್ಸಾ ಶಿಬಿರಕ್ಕೆ ಚಾಲನೆ ದೊರೆಯಿತು. ಕೆ.ಆರ್.ಆಸ್ಪತ್ರೆ ಹಿರಿಯ ನೇತ್ರ ತಜ್ಞ ಡಾ.ಎಂ.ಕೆ.ಚೇತನ್‌ಕುಮಾರ್ ನೇತೃತ್ವದ ತಂಡ ಶಿಬಿರಾರ್ಥಿಗಳಿಗೆ ತಪಾಸಣೆ ಮಾಡಿತು. ಶಿಬಿರದಲ್ಲಿ ಒಟ್ಟು 95 ಜನರು ಕಣ್ಣಿನ ಪರೀಕ್ಷೆಗೆ ಒಳಪಟ್ಟರು. ಈ ಪೈಕಿ 8 ಜನರನ್ನು ಶಸ್ತ್ರಚಿಕಿತ್ಸೆಗೆಂದು ಕೆ.ಆರ್.ಆಸ್ಪತ್ರೆಗೆ ಶಿಫಾರಸ್ಸು ಮಾಡಲಾಯಿತು. ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿ ಎಸ್.ಚಂದ್ರಶೇಖರ್, ನೋಡಲ್ ಅಧಿಕಾರಿ ಬಾಲರಾಜು ಇತರರು ಹಾಜರಿದ್ದರು.

ಶಶಾಂಕ್ ನಿಧನ



ಕೆ.ಆರ್.ಪೇಟೆ: ಪುರಸಭೆಯ ಹಿರಿಯ ಸದಸ್ಯ ಕೆ.ಸಿ.ಮಂಜುನಾಥ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮಂಗಳೂರು ವಿಭಾಗದ ಹಿರಿಯ ಅಧಿಕಾರಿ ವನಿತಾ ಮಂಜುನಾಥ್ ಅವರ ಪುತ್ರ ಶಶಾಂಕ್ (28) ಹೃದಯಾಘಾತದಿಂದ ನಿಧನರಾಗಿದ್ದಾರೆ. ಜಾರ್ಖಂಡ್ ಮೂಲದ ಯುವತಿಯನ್ನು ಕಳೆದ ಭಾನುವಾರ ವಿವಾಹವಾಗಿದ್ದ ಇವರು ಮಂಗಳವಾರ ಸಂಜೆ ಹೃದಯಾಘಾತಕ್ಕೆ ಒಳಗಾದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಾ.5ರಂದು ಬುಧವಾರ ಕೆ.ಆರ್.ಪೇಟೆ ಪಟ್ಟಣದ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಶೋಧಕರಿಗೆ ಪ್ರಾಮುಖ್ಯತೆ ನೀಡಿದರೆ ರಾಷ್ಟ್ರದ ಬೆಳವಣಿಗೆಯ ವೇಗ ಹೆಚ್ಚಳ

ರಾಷ್ಟ್ರೀಯ ವಿಜ್ಞಾನ ದಿನ ಉದ್ಘಾಟಿಸಿದ ಸಿಎಸ್‌ಐಆರ್ ಸಿಐಎಂಎಪಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ ದಿನೇಶ್ ಎ.ನಾಗೇಗೌಡ ಅಭಿಪ್ರಾಯ

ಮೈಸೂರು, ಮಾ.4(ಜಿಎ)–ಭಾರತದಲ್ಲಿ ಸಂಶೋಧಕರಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆತಾಗ ರಾಷ್ಟ್ರದ ಬೆಳವಣಿಗೆಯ ವೇಗ ಹೆಚ್ಚುತ್ತದೆ ಎಂದು ಬೆಂಗಳೂರಿನ ಸಿಎಸ್‌ಐಆರ್‌ಸಿ ಸಿಐಎಂಎಪಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ ದಿನೇಶ್ ಎ.ನಾಗೇಗೌಡ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಸಿಐಕ್ಯೂಎ (ಇಂಟರ್‌ನಲ್ ಕ್ವಾಲಿಟಿ ಎಸ್ಯೂರೆನ್ಸ್) ಕಾವೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನ ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರಗತಿಯಿಂದಲೇ ದೇಶಾಭಿವೃದ್ಧಿ ಸಾಧ್ಯ. ಆದ್ದರಿಂದ ಉಭಯ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ವಿನಿಯೋಗಿಸುವ ಮೂಲಕ ಸಂಶೋಧನಾ ಚಟುವಟಿಕೆಗಳಿಗೆ ಒತ್ತು ನೀಡುವುದು ಈಗಿನ ತುರ್ತು ಅಗತ್ಯವಾಗಿದೆ ಎಂದರು.

ಪಾಶ್ಚಿಮಾತ್ಯ ದೇಶಗಳು ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿವೆ. ಇದರಿಂದಲೇ ಅವುಗಳು ಪ್ರಗತಿ ಕಂಡಿವೆ. ಆದರೆ, ದೇಶದ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅನುದಾನ ಹೂಡಿಕೆ ಮಾಡಲು ಆಗಲಿಲ್ಲ. ಇದರ ಫಲವಾಗಿ ಭಾರತವು ಈ ಕ್ಷೇತ್ರದಲ್ಲಿ ಹಿಂದುಳಿದಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಕರ್ನಾಟಕ ರಾಜ್ಯ ಮುಕ್ತ ವಿವಿಯ ಭೌತಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಸಿಐಕ್ಯೂಎ (ಇಂಟರ್‌ನಲ್ ಕ್ವಾಲಿಟಿ ಎಸ್ಯೂರೆನ್ಸ್) ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನ ಕಾರ್ಯಕ್ರಮದಲ್ಲಿ 'ಲೈಫ್ ಆಫ್ ಸೈನ್ಸ್ ನ್ಯೂಸ್ ಲೆಟರ್' ಅನ್ನು ಸಿಎಸ್‌ಐಆರ್ ಸಿಐಎಂಎಪಿ ಸಂಶೋಧನಾ ಸಂಸ್ಥೆಯ ವಿಜ್ಞಾನಿ ದಿನೇಶ್ ಎ.ನಾಗೇಗೌಡ ಬಿಡುಗಡೆಗೊಳಿಸಿದರು.

ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿಜ್ಞಾನ ಸಂಶೋಧನೆಗೆ ಮಹತ್ವ ನೀಡಿ ಪ್ರೋತ್ಸಾಹಧನ ನೀಡುತ್ತಿದ್ದು, ವಿವಿಧ ವೈಜ್ಞಾನಿಕ ಸಂಸ್ಥೆಗಳೂ ಸಹಕಾರ ನೀಡುತ್ತಿದೆ. ನಮ್ಮ ಸಂಸ್ಥೆಯು ಔಷಧೀಯ ಸಸ್ಯಗಳ ಬೆಳವಣಿಗೆಯ ಹಾದಿಯ ಕುರಿತು ಸಂಶೋಧನೆ ಮಾಡುತ್ತಿದೆ. ದೇಶದಲ್ಲಿ ಅನೇಕ ಮರ ಹಾಗೂ ಗಿಡಗಳನ್ನು ಔಷಧ ಮತ್ತು ಸುಗಂಧದ್ರವ್ಯಕ್ಕಾಗಿ ಬಳಸುತ್ತಾರೆ. ಆದರೆ ಕೆಲವು ಗಿಡಗಳು ಉಪಯೋಗದ ಹಂತಕ್ಕೆ ಬರಲು ಅನೇಕ ವರ್ಷ ಕಾಯಬೇಕಾಗುತ್ತದೆ. ಶ್ರೀ ಗಂಧದ ಮರದಿಂದ ಎಣ್ಣೆ ತೆಗೆಯಲು 20 ವರ್ಷ ಕಾಯಬೇಕಾಗುತ್ತದೆ. ಹೀಗಾಗಿ ಅವುಗಳಿಂದ ಬೇಗನೆ ಉಪಯೋಗ ಪಡೆಯಲು ತಂತ್ರಜ್ಞಾನ ಬಳಸಿ ವಿವಿಧ ಸಂಶೋಧನೆ ನಡೆಸುತ್ತಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಹಣಕಾಸು ಅಧಿಕಾರಿ ಪ್ರೊ.ಎಸ್.ನಿರಂಜನ್, ವಿಜ್ಞಾನ ವಿಭಾಗದ ನಿರ್ದೇಶಕಿ ಸುನೀತಾ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಎಸ್.ವಿ.ನಿರಂಜನ, ಡಾ.ಸೈಯದ್ ಬೇಕರ್ ಉಪಸ್ಥಿತರಿದ್ದರು.

> "ಯುವ ಸಮೂಹಕ್ಕೆ ವಿಜ್ಞಾನದ ಕುರಿತು ಕುತೂಹಲ ಮೂಡಿಸುವ ಬಗ್ಗೆ ಯೋಜನೆ ರೂಪಿಸಬೇಕು. ಅನೇಕರಿಗೆ ವಿಜ್ಞಾನ ದಿನಾಚರಣೆ ಕಾರಣವೇ ತಿಳಿದಿಲ್ಲ. ಸಿ.ವಿ.ರಾಮನ್ ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ನೊಬೆಲ್ ಪುರಸ್ಕಾರ ಪಡೆದರು. ಆದರೆ ಸ್ವಾತಂತ್ರ್ಯ ದೊರೆತ ಬಳಿಕ ದೇಶದ ಯಾರೊಬ್ಬರೂ ಈ ಸಾಧನೆ ಮಾಡಿಲ್ಲವೆಂಬುದು ವಿಪರ್ಯಾಸ. ವಿಕಸಿತ ಭಾರತದ ಕಲ್ಪನೆಗೆ ವಿಜ್ಞಾನದ ಆವಿಷ್ಕಾರಗಳು ಮುನ್ನುಡಿ ಬರೆಯುತ್ತವೆ. ಯುವ ಸಮೂಹವನ್ನು ವಿಜ್ಞಾನದ ಕಡೆಗೆ ಸೆಳೆಯುವ ಹಾಗೂ ಸಂಶೋಧನೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಕಾರ್ಯ ನಡೆಯಲಿ.
> –ದಿನೇಶ್ ಎ.ನಾಗೇಗೌಡ

ಗ್ರಾಮೀಣ ಪ್ರದೇಶದಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಕಾನೂನು ಕ್ರಮ



ಬೆಂಗಳೂರು, ಮಾ.4(ಕೆಎಂಶಿ)–ಗ್ರಾಮೀಣ ಪ್ರದೇಶದ ಅನಧಿಕೃತ ಸ್ಥಳಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ವಿಧಾನಸಭೆಯಲ್ಲಿಂದು ತಿಳಿಸಿದರು.

ಮಹಂತೇಶ್ ಶಿವಾನಂದ್ ಕೌಜಲಗಿ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಗ್ರಾಮೀಣ ಭಾಗಗಳಲ್ಲಿ ಕೆಲವು ವ್ಯಕ್ತಿಗಳು ಸ್ವಲಾಭಕ್ಕಾಗಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಇಲಾಖೆ ನಿಯಂತ್ರಿಸಲು ಮುಂದಾಗಿದೆ, ಕಾನೂನು ಉಲ್ಲಂಘಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಅಕ್ರಮ ಮದ್ಯ ಮಾರಾಟದಿಂದ ವಿದ್ಯಾರ್ಥಿಗಳು ಮದ್ಯವ್ಯಸನಿಗಳಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಪ್ರಾಪ್ತ ವಯಸ್ಕರಿಗೆ ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಅಕ್ರಮ ಮದ್ಯ ಮಾರಾಟ ತಡೆಗೆ ನಿರಂತರ ಗಸ್ತು ನಡೆಸಲಾಗುತ್ತಿದೆ. ಅಕ್ರಮ ಕಂಡುಬಂದಲ್ಲಿ ಅಬಕಾರಿ ನಿಯಮಗಳ ಪ್ರಕಾರ ಪ್ರಕರಣ ದಾಖಲಿಸಲಾಗುತ್ತಿದೆ. 2024–25ನೇ ಅಬಕಾರಿ ಸಾಲಿನ ಜನವರಿ ಅಂತ್ಯದವರೆಗೆ 17,390 ಮೊಕದ್ದಮೆ ದಾಖಲಿಸಿ 18,253 ಆರೋಪಿಗಳನ್ನು ಬಂಧಿಸಲಾಗಿದೆ. ಮದ್ಯ ಮಾರಾಟ ಷರತ್ತು ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಾಯಿಸಮಿತಿ ಸಭೆ ನಡೆಸಿ, ಇತರೆ ಇಲಾಖೆಗಳ ಸಮನ್ವಯದೊಂದಿಗೆ ಅಕ್ರಮ ಮಾರಾಟ ತಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ಏರ್‌ಫೋರ್ಸ್ ಗೋಲ್ಡ್ ಕಪ್ 2025ರ ಗಾಲ್ಫ್ ಪಂದ್ಯಾವಳಿ



ಮೈಸೂರಿನ ಜೆಡಬ್ಲ್ಯುಜಿಸಿ ಗಾಲ್ಫ್ ಮೈದಾನದಲ್ಲಿ 38ನೇ ಆವೃತ್ತಿಯ ಏರ್‌ಫೋರ್ಸ್ ಗೋಲ್ಡ್ ಕಪ್ 2025ರ ಗಾಲ್ಫ್ ಪಂದ್ಯಾವಳಿ ನಡೆಯಿತು. ಚಿತ್ರದಲ್ಲಿ (ಕುಳಿತಿರುವವರು–ಎಡದಿಂದ ಬಲಕ್ಕೆ): ವಿಂಗ್ ಕಮಾಂಡರ್ ಪ್ರದೀಪ್ ಪಿಳ್ಳೈ, ಎಂ.ಪ್ರೀತಲ್, ಎಚ್.ಸಿ. ಹೃಷಿಕೇಶ್, ಎಂ.ಸಿ.ಚೆಂಗಪ್ಪ, ಎಂ.ಚಿರಾಯು, ಡಾ.ಎನ್.ಅಭಿಷೇಕ್, ಜೆ.ಮಹೇಶ್, ವಿಂಗ್ ಕಮಾಂಡರ್ ಅನಿಷ್, ಬಿ.ಎನ್.ಸತೀಶ. (ನಿಂತಿರುವವರು–ಎಡದಿಂದ ಬಲಕ್ಕೆ) ಡಾ.ಎಸ್.ರವಿಕುಮಾರ್, ವಿಂಗ್ ಕಮಾಂಡರ್ ನರೇಂದ್ರ ಸಿಂಗ್, ಎಚ್.ಎಸ್.ಗೋಪಿನಾಥ್, ಕೆ.ಎನ್.ದೇವರಾಜು, ವಿ.ಜಿ.ಆಚಾರ್ (ಜೆಡಬ್ಲ್ಯುಜಿಸಿ ಗೌರವ ಕಾರ್ಯದರ್ಶಿ), ಏರ್‌ವೈಸ್ ಮಾರ್ಷಲ್ ಜೆ.ಟಿ.ಕುರಿಯನ್, ಕೆ.ಎಂ.ಅಚ್ಚಯ್ಯ, ಡಾ.ಅಬ್ರಹಾಂ ಥಾಮಸ್ (ಜೆಡಬ್ಲ್ಯುಜಿಸಿ ಅಧ್ಯಕ್ಷ), ರಂಜಿತ್ ಸನತ್, ವಿಂಗ್ ಕಮಾಂಡರ್ ಎಂ.ಡಿ.ಅಯ್ಯಣ್ಣ, ರೇರ್ ಅಡ್ಮಿರಲ್ ರವಿ ಗಾಯಕ್‌ವಾಡ್, ಏರ್ ಕಮಾಂಡರ್ ಅಭಿಜಿತ್ ಟೋಕೇಕರ್, ಏರ್‌ವೈಸ್ ಮಾರ್ಷಲ್ ಸಿಂಗ್, ಕೆ.ಬಿ.ಕುಶಾಲಪ್ಪ, ಎಂ.ಎಸ್.ಯಶ್ವಂತ್ (ಜೆಡಬ್ಲ್ಯುಜಿಸಿ ಕ್ಯಾಪ್ಟನ್), ಆರ್.ಎಸ್.ನಿತೀಶ್ (ಜೆಡಬ್ಲ್ಯುಜಿಸಿ ಗೌರವ ಖಜಾಂಚಿ) ಅವರನ್ನು ಚಿತ್ರದಲ್ಲಿ ಕಾಣಬಹುದು.

ಬೆಂಗಳೂರಿನ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕಿರುಚಿತ್ರ 'ನೆಲದ ಹಕ್ಕಿಯ ಹಾಡು' ಪ್ರದರ್ಶನ

ಮೈಸೂರು, ಮಾ.4(ಎಸ್‌ಪಿಎನ್)– ಮೈಸೂರಿನ ರವೀಂದ್ರನಾಥ್ ಠಾಗೂರ್ ಬಡಾವಣೆ ಸುತ್ತಮುತ್ತಲಿನಲ್ಲಿ ವನ್ಯಜೀವಿ ಛಾಯಾಗ್ರಾಹಕ ಡಾ.ಲೋಕೇಶ್‌ಮೊಸಳೆ ಚಿತ್ರಿಸಿರುವ 'ನೆಲದ ಹಕ್ಕಿಯ ಹಾಡು' (An Earthy Ode to Teeyee Teweet) ಕಿರುಚಿತ್ರವು ಈಗಾಗಲೇ ದೇಶ–ವಿದೇಶದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿದೆ. ಬೆಂಗಳೂರಿನಲ್ಲಿ ಮಾ.1ರಿಂದ 8ರವರೆಗೆ ನಡೆಯುತ್ತಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಾ.7ರಂದು ಸಂಜೆ 4.30ಕ್ಕೆ ಬೆಂಗಳೂರಿನ ಓರಿಯನ್ ಮಾಲ್‌ನಲ್ಲಿ ಈ ಕಿರುಚಿತ್ರ ಪ್ರದರ್ಶನಗೊಳ್ಳಲಿದೆ.

ಮಾ.10ರಿಂದ ಮೀನಾ ಬಜಾರ್‌ನಲ್ಲಿ ರಂಝಾನ್; ಯುಗಾದಿ ಮೇಳ

ಮೈಸೂರು,ಮಾ.4–ಮೈಸೂರಿನ ಲಷ್ಕರ್ ಮೊಹಲ್ಲಾದ ಮೀನಾ ಬಝಾರ್ ಮರ್ಚೆಂಟ್ಸ್ ಅಸೋಸಿಯೇಷನ್‌ನಿಂದ ಕಳೆದ 41 ವರ್ಷಗಳಿಂದ ರಂಝಾನ್ ಮೇಳವನ್ನು ನಡೆಸುತ್ತಾ ಬಂದಿದ್ದು, ಈ ವರ್ಷವೂ ಮಾ.10ರಿಂದ 30ರವರೆಗೆ ಬೆಳಿಗ್ಗೆ 10ರಿಂದ ರಾತ್ರಿ 11ರವರೆಗೆ ರಂಝಾನ್, ಯುಗಾದಿ ಮೇಳವನ್ನು ಮಿಲಾದ್ ಬಾಗ್, ಅಶೋಕ ರಸ್ತೆ ಸರ್ಕಲ್ ಮೂಲಕ ಸಾಡೇ ರಸ್ತೆ, ಮೀನಾ ಬಝಾರ್, ಯೂಸುಫ್ ಚೌಕ ಸರ್ಕಲ್, ಕುರ್ತಾ ಕಿಂಗ್ ಕ್ಲಾತ್ ಶಾಪ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಯೋಜಿಸಲಾಗಿದೆ.

ಇಲ್ಲಿ ಎಲ್ಲಾ ಜನಾಂಗದವರ ಪುರುಷರ, ಸ್ತ್ರೀಯರ, ಮಕ್ಕಳ ಬಟ್ಟೆ ಸೇರಿದಂತೆ ನಾನಾ ವಸ್ತುಗಳನ್ನು ಖರೀದಿಸಬಹುದು. ಇಲ್ಲಿಗೆ ರಾಜ್ಯ ಮತ್ತು ದೇಶದ ವಿವಿಧ ರಾಜ್ಯಗಳಿಂದ ವರ್ತಕರು ಆಗಮಿಸಿದ್ದು, ಬಟ್ಟೆ, ಪಾದರಕ್ಷೆ, ಟೋಪಿ, ಬಳೆಗಳು, ಮೆಹಂದಿ, ಸುಗಂಧ ದ್ರವ್ಯ ಮುಂತಾದ ಅನೇಕ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡ ಲಾಗುತ್ತದೆ. ಸಮಾಜ ಸೇವಕ ಅಫ್ರೋಜ್ ಪಾಷ ಮಾರ್ಗದರ್ಶನದಲ್ಲಿ ಮೀನಾ ಬಝಾರ್ ರಂಝಾನ್, ಯುಗಾದಿ ಮೇಳ 2025 ನಡೆಯುತ್ತಿದ್ದು, ಪೊಲೀಸ್ ಇಲಾಖೆ, ಪಾಲಿಕೆ ಆಯುಕ್ತರು, ಕೆಪಿಟಿ ಸಿಎಲ್, ಅಗ್ನಿಶಾಮಕ ಇಲಾಖೆ ಮತ್ತು ಇತರೆ ಇಲಾಖೆಗಳು ಸೌಲಭ್ಯಗಳನ್ನು ಒದಗಿಸಿಕೊಡಲು ಕೋರಲಾಗಿದೆ.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಗೊಳಿಸಿ; ಶೇ.100ರಷ್ಟು ಭೌತಿಕ, ಆರ್ಥಿಕ ಪ್ರಗತಿ ಸಾಧಿಸಿ

ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಕಟ್ಟುನಿಟ್ಟಿನ ಸೂಚನೆ

ಮೈಸೂರು,ಮಾ.4(ಪಿಎಂ)– ಮಾರ್ಗಸೂಚಿ ಅನುಸಾರ 2024–25ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಗೊಳಿಸಿ, ಶೇ.100ರಷ್ಟು ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ, ತಮ್ಮ ಇಲಾಖಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರಿನ ಜಿಪಂನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿಗಳ 3ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2024–25ನೇ ಸಾಲಿನ ಆರ್ಥಿಕ ವರ್ಷವು ಅಂತಿಮ ಹಂತದಲ್ಲಿದ್ದು, ಮಂಜೂರು ಮಾಡಿರುವ ಅನುದಾನದ ಪೂರ್ಣ ಪ್ರಮಾಣದಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು. ಜೊತೆಗೆ ಭೌತಿಕ ಪ್ರಗತಿಯೂ ಸಂಪೂರ್ಣವಾಗಿ ಆಗಬೇಕು ಎಂದು ನಿರ್ದೇಶನ ನೀಡಿದರು.



ಮೈಸೂರಿನ ಜಿಪಂ ಸಭಾಂಗಣದಲ್ಲಿ ಮಂಗಳವಾರ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮದಡಿಯ ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ, ಪಿಪಿಐಯುಸಿಡಿ, ಪಿಎಐಯುಸಿಡಿ ಇತ್ಯಾದಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಗತಿ ಸಾಧಿಸಲು ಗಂಭೀರ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಆರ್‌ಸಿಹೆಚ್ ಕಾರ್ಯಕ್ರಮದಡಿ ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿ ದಾಖಲಾತಿ ಮತ್ತು ನೋಂದಣಿ ಪ್ರಕ್ರಿಯೆಯು ಸೂಕ್ತ ಸಮಯದಲ್ಲಿ ಆಗಿರಬೇಕು. ಯಾವುದೇ ಪ್ರಕರಣದ ನೋಂದಣಿಯಲ್ಲಿ ತಡವಾಗಿರುವುದು ಕಂಡು ಬರಬಾರದು ಎಂದು ತಿಳಿಸಿದರು.

ಸಾಂಸ್ಥಿಕ ಹೆರಿಗೆಗಳ ನಿರ್ವಹಣೆ, ಜೆ.ಎಸ್.ವೈ ಯೋಜನೆಯಲ್ಲಿ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಸೇವಾ ಸಿಂಧೂ ತಂತ್ರಾಂಶದಲ್ಲಿ ದಾಖಲೀಕರಣ, ಹೆಚ್‌ಬಿಎನ್‌ಸಿ, ಹೆಚ್‌ಬಿವೈಸಿ ಕಾರ್ಯ ಚಟುವಟಿಕೆ ಅಪೌಷ್ಟಿಕ ಮಕ್ಕಳ ಗುರುತಿಸುವಿಕೆ ಮತ್ತು ಅಪೌಷ್ಟಿಕ ಮಕ್ಕಳನ್ನು ಎನ್‌ಆರ್‌ಸಿ ಕೇಂದ್ರಗಳಿಗೆ ದಾಖಲೀಕರಣ ಮಾಡುವುದು, ಪಿಎಂಎಸ್‌ಎಂಎ ಮತ್ತು ಇ–ಪಿಎಂಎಸ್‌ಎಂಎ ಕಾರ್ಯಕ್ರಮದಡಿ ಗರ್ಭಿಣಿಯರು ಹಾಗೂ ಬಾಣಂತಿಯರ ಆರೋಗ್ಯ ತಪಾಸಣೆ ಅತ್ಯಂತ ಕಾಳಜಿಯಿಂದ ನಡೆಸಬೇಕು. ಅಲ್ಲದೆ, ಈ ಬಗ್ಗೆ ತಂತ್ರಾಂಶದಲ್ಲಿ ಮಾಹಿತಿಯನ್ನು ಸಕಾಲದಲ್ಲಿ ದಾಖಲಿಸಬೇಕು ಎಂದು ಹೇಳಿದರು.

ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಪರಿಶೀಲನೆ ಅತ್ಯಂತ ಗಂಭೀರವಾಗಿ ಮಾಡಬೇಕು. ಆ ಮೂಲಕ ಲಸಿಕಾ ವಂಚಿತ ಮಕ್ಕಳ ಪಟ್ಟಿ ಮಾಡಿ, ಮುಂದಿನ ಕ್ರಮ ವಹಿಸಬೇಕು. ಜೊತೆಗೆ ಲಸಿಕೆ ಪಡೆದು ಫಲಾನುಭವಿಗಳ ಮಾಹಿತಿ ಯು–ವಿನ್ ತಂತ್ರಾಂಶದಲ್ಲಿ ದಾಖಲೀಕರಣ ಮಾಡುವುದು. ಜೊತೆಗೆ ಎಂಆರ್ ಲಸಿಕೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸುವ ಮೂಲಕ ದಡಾರ–ರುಬೆಲ್ಲಾ ರೋಗ ನಿರ್ಮೂಲನೆಗೆ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಕುಟುಂಬ ಕಲ್ಯಾಣ ಕಾರ್ಯಕ್ರಮದಡಿ ಅಂತರ ಬಳಕೆ, ಸಂತಾನಹರಣ ಶಸ್ತ್ರಚಿಕಿತ್ಸೆ, ಪಿಪಿಐಯುಸಿಡಿ ಕಾರ್ಯಕ್ರಮಗಳು ಮತ್ತು ಕಾಯಕಲ್ಪ ಕಾರ್ಯಕ್ರಮದಡಿಯಲ್ಲಿ ಪ್ರಶಸ್ತಿಗೆ ಭಾಜನರಾಗುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

ಸಿ–ಬ್ಯಾಕ್ ಕಾರ್ಯಕ್ರಮದ ಸಮೀಕ್ಷೆ ಮತ್ತು ಸ್ಕ್ರೀನಿಂಗ್, ಎನ್‌ಸಿಡಿ ಕಾರ್ಯಕ್ರಮದ ಫಾಲೋಅಪ್ ಸಮರ್ಪಕವಾಗಿರಬೇಕು. ವಿಹೆಚ್‌ಎಸ್‌ಎನ್‌ಸಿ ಸಭೆಗಳನ್ನು ನಿಯಮಾನುಸಾರ ಆಯೋಜಿಸಬೇಕು. ವಿಹೆಚ್‌ಎಸ್‌ಎನ್‌ಸಿ ಮತ್ತು ಎಆರ್‌ಎಸ್ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಆರ್‌ಸಿಹೆಚ್ ಪೋರ್ಟಲ್ ಮೂಲಕ ಅಭಾ ಕಾರ್ಡ್ ಲಿಂಕ್ ಮಾಡಿಸುವಲ್ಲಿ ಪ್ರಗತಿ ಸಾಧಿಸಬೇಕು. ಗೃಹ ಆರೋಗ್ಯ ಕಾರ್ಯಕ್ರಮ ಸರ್ಕಾರದ ಮಾರ್ಗಸೂಚಿ ಅನುಸಾರ ಯಶಸ್ವಿಯಾಗಿ ನಡೆಯಬೇಕು ಎಂದರು. ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಬಿ.ಬೃಂದಾ ಸೇರಿದಂತೆ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು, ತಾಲೂಕು ಆರೋಗ್ಯ ಅಧಿಕಾರಿಗಳು, ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಮತ್ತು ಆರೋಗ್ಯ ಸಿಬ್ಬಂದಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ದೇಶ – ವಿದೇಶ

ಉಕ್ರೇನ್‌ಗೆ ಸೇನಾ ನೆರವು ಸ್ಥಗಿತಗೊಳಿಸಿದ ಅಮೆರಿಕ



ವಾಷಿಂಗ್ಟನ್: ಅಮೆರಿಕ ಮತ್ತು ಉಕ್ರೇನ್ ನಡುವಿನ ರಾಜತಾಂತ್ರಿಕ ಬಿಕ್ಕಟ್ಟಿನ ಬೆನ್ನಲ್ಲೇ ಉಕ್ರೇನ್‌ಗೆ ಸೇನಾ ನೆರವನ್ನು ಸ್ಥಗಿತಗೊಳಿಸಿರುವುದಾಗಿ ಶ್ವೇತಭವನ ಅಧಿಕಾರಿಗಳು ತಿಳಿಸಿದ್ದಾರೆ. ಉಕ್ರೇನ್‌ಗೆ ಸೇನಾ ನೆರವನ್ನು ಸ್ಥಗಿತಗೊಳಿಸುವಂತೆ ಟ್ರಂಪ್ ಅವರು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್‌ಸೆತ್ ಅವರಿಗೆ ಆದೇಶಿಸಿದ್ದಾರೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದ್ದು, ನೆರವನ್ನು ಶಾಶ್ವತವಾಗಿ ರದ್ದುಗೊಳಿಸುತ್ತಿಲ್ಲವೆಂದೂ ತಿಳಿಸಿದ್ದಾರೆ. ಶುಕ್ರವಾರ ಅಮೆರಿಕದ ಓವಲ್ ಕಚೇರಿಯಲ್ಲಿ ಟ್ರಂಪ್ ಮತ್ತು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ನಡುವೆ ನಡೆದ ಚರ್ಚೆ, ವಾಕ್ಸಮರಕ್ಕೆ ತಿರುಗಿತ್ತು. ಸತತ 3 ವರ್ಷಗಳಿಂದ ನಡೆಯುತ್ತಿರುವ ರಷ್ಯಾ–ಉಕ್ರೇನ್ ಯುದ್ಧದಲ್ಲಿ ಅಮೆರಿಕವು ಸೇನಾ ನೆರವಿನ ರೂಪದಲ್ಲಿ ಶತಕೋಟಿ ಡಾಲರ್ ಸುರಿಸಿದೆ. ಇದಕ್ಕಾಗಿ ಉಕ್ರೇನ್ ಅಮೆರಿಕಕ್ಕೆ ಕೃತಜ್ಞತೆ ಸಲ್ಲಿಸಬೇಕು ಎಂದು ಟ್ರಂಪ್ ಹೇಳಿದ್ದರು. ಈ ಮಧ್ಯೆ ರಷ್ಯಾ ಮತ್ತು ಉಕ್ರೇನ್ ನಡುವೆ ಕದನ ವಿರಾಮ ಸಾಧ್ಯವಾಗಿಸಲು ಯೋಜನೆಯೊಂದು ರೂಪಿಸಲು ಯೂರೋಪಿಯನ್ ಒಕ್ಕೂಟ ಮುಂದಾಗಿದೆ.

ಸಿಂಧು ನದಿಯಲ್ಲಿ 80,000 ಕೋಟಿ ಮೌಲ್ಯದ ಚಿನ್ನದ ನಿಕ್ಷೇಪ ಪತ್ತೆ



ಇಸ್ಲಾಮಾಬಾದ್: ಆರ್ಥಿಕವಾಗಿ ದಿವಾಳಿ ಅಂಚಿನಲ್ಲಿರುವ ಪಾಕಿಸ್ತಾನದಲ್ಲಿ ಬರೋಬ್ಬರಿ 80 ಸಾವಿರ ಕೋಟಿ ಮೌಲ್ಯದ ಚಿನ್ನದ ನಿಕ್ಷೇಪ ಪತ್ತೆಯಾಗಿದೆ.

ಪಂಜಾಬ್ ಪ್ರಾಂತ್ಯದ ಅಟಾಕ್ ನಗರದ ಕಡೆಯಿಂದ ಹಾದು ಹೋಗುವ ಮಾರ್ಗದಲ್ಲಿ ನಿಕ್ಷೇಪ ಪತ್ತೆಯಾಗಿದೆ. 127 ಸ್ಥಳಗಳಲ್ಲಿನ ಮಾದರಿಯನ್ನು ಸಂಗ್ರಹಿಸಲಾಗಿ ಪರಿಶೀಲನೆ ನಡೆಸಿರುವ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ ಚಿನ್ನ ಇರುವುದನ್ನು ದೃಢಪಡಿಸಿದೆ ಎಂದು ಪಂಜಾಬ್ ಪ್ರಾಂತ್ಯದ ಮಾಜಿ ಗಣಿ ಸಚಿವ ಇಬ್ರಾಹಿಂ ಹಸನ್ ಮರಾದ್ ಈಚೆಗೆ ಹೇಳಿದ್ದರು. ಪಂಜಾಬ್ ಪ್ರಾಂತ್ಯದ ಸಿಂಧು ನದಿ ದಡದ 32 ಕಿ.ಮೀ. ದೂರದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿದೆ.

ಇದು ರಾಷ್ಟ್ರದ ಆರ್ಥಿಕ ಪ್ರಗತಿಗೆ ನೆರವಾಗಬಹುದು ಎಂದು ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಎಂಜಿನಿಯರಿಂಗ್ ಸೇವೆಗಳ ಪಾಕಿಸ್ತಾನ (ಎನ್‌ಇಎಸ್‌ಪಿಎಕೆ), ಪಂಜಾಬ್‌ನ ಗಣಿ ಮತ್ತು ಖನಿಜಗಳ ಇಲಾಖೆ ಅಂದಾಜಿಸಿದೆ. ಹಿಮಾಲಯದಲ್ಲಿ ಹುಟ್ಟುವ ಸಿಂಧು ನದಿ ಭಾರತದ ಮೂಲಕ ಪಾಕಿಸ್ತಾನ ಪ್ರವೇಶಿಸುತ್ತದೆ. ಸಿಂಧು ನದಿ ಪ್ರವೇಶಿಸುವ ನಿಖರ ಸ್ಥಳದಲ್ಲಿ ಚಿನ್ನದ ನಿಕ್ಷೇಪ ಪತ್ತೆಯಾಗಿದೆ ಎಂದು ಭೂಗರ್ಭಶಾಸ್ತ್ರಜ್ಞರು ಹೇಳಿದ್ದಾರೆ.

7,930 ಸರ್ಕಾರಿ ಶಾಲೆಗಳಲ್ಲಿ ತಲಾ ಒಬ್ಬರೇ ಶಿಕ್ಷಕ



ರಾಂಚಿ: ಜಾರ್ಖಂಡ್‌ನಲ್ಲಿ ಸುಮಾರು 7,930 ಸರ್ಕಾರಿ ಶಾಲೆಗಳಲ್ಲಿ ತಲಾ ಒಬ್ಬರು ಶಿಕ್ಷಕರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶಿಕ್ಷಣ ಸಚಿವ ರಾಮದಾಸ್ ಸೊರೇನ್ ತಿಳಿಸಿದ್ದಾರೆ.

ಶಿಕ್ಷಕರ ಸಮಸ್ಯೆ ಕುರಿತು ಜಾರ್ಖಂಡ್ ವಿಧಾನಸಭೆಯಲ್ಲಿ ಬಿಜೆಪಿ ಶಾಸಕ ರಾಜ್‌ಸಿನ್ಹಾ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿಕ್ಷಣ ಸಚಿವ ರಾಮದಾಸ್, ರಾಜ್ಯದಲ್ಲಿ 7,930 ಶಾಲೆಗಳು ತಲಾ ಒಬ್ಬರು ಶಿಕ್ಷಕರೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಈ ಏಕ–ಶಿಕ್ಷಕ ಶಾಲೆಗಳಲ್ಲಿ 3.81 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದಾರೆ ಎಂದು ಹೇಳಿದ್ದಾರೆ. ರಾಜ್ಯದಲ್ಲಿ 103 ಸರ್ಕಾರಿ ಶಾಲೆಗಳು ಯಾವುದೇ ವಿದ್ಯಾರ್ಥಿಗಳಿಲ್ಲದೆ ಕಾರ್ಯನಿರ್ವಹಿಸುತ್ತಿವೆ. ಆ ಶಾಲೆಗಳಲ್ಲಿ 17 ಮಂದಿ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳನ್ನು ಮರಳಿ ಶಾಲೆಗೆ ಕರೆತರಲು ನಾವು ಆಯಾ ಪ್ರದೇಶಗಳಲ್ಲಿ ಶಾಲಾ ಚಲೋ ಅಭಿಯಾನವನ್ನು ನಡೆಸುತ್ತಿದ್ದೇವೆ. 26,000 ಸಹಾಯಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ ಎಂದು ರಾಮದಾಸ್ ತಿಳಿಸಿದ್ದಾರೆ.

ಅನುಮತಿ ಇಲ್ಲದೇ ಪ್ರತಿಭಟಿಸಿದರೆ ಶಾಲಾ ಕಾಲೇಜುಗಳ ಅನುದಾನ ಕಡಿತ, ಜೈಲು



ವಾಷಿಂಗ್ಟನ್: ಅನುಮತಿ ಇಲ್ಲದೆ ಪ್ರತಿಭಟನೆ ನಡೆಸಿದ ಅಕ್ರಮ ಎಸಗಿದರೆ ಅಂಥ ಶಾಲೆ ಹಾಗೂ ಕಾಲೇಜುಗಳಿಗೆ ನೀಡುತ್ತಿರುವ ಅನುದಾನವನ್ನು ಕಡಿತಗೊಳಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

ಸಾಮಾಜಿಕ ಮಾಧ್ಯಮದಲ್ಲಿ ಈ ವಿಷಯ ಹಂಚಿಕೊಂಡಿರುವ ಅವರು, 'ಪ್ರತಿಭಟನೆ ನಡೆಸುವವರನ್ನು ಮುಲಾಜಿಲ್ಲದೆ ಜೈಲಿಗಟ್ಟಲಾಗುವುದು. ಒಂದೊಮ್ಮೆ ಪ್ರತಿಭಟನಾಕಾರರು ಅನ್ಯ ದೇಶದವರಾಗಿದ್ದರೆ ಗಡಿಪಾರು ಮಾಡಲಾಗುವುದು ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಪರಾಧ ಪ್ರಕರಣಗಳ ಗಂಭೀರತೆಯ ಆಧಾರದಲ್ಲಿ ಅಮೆರಿಕದ ವಿದ್ಯಾರ್ಥಿಗಳನ್ನು ಶಾಶ್ವತವಾಗಿ ಹೊರಹಾಕಲಾಗುವುದು. ಒಂದೊಮ್ಮೆ ಗಂಭೀರ ಪ್ರಕರಣದಲ್ಲಿ ವಿದ್ಯಾರ್ಥಿಗಳು ಭಾಗಿಯಾದಲ್ಲಿ ಬಂಧಿಸಲಾಗುವುದು ಎಂದಿದ್ದಾರೆ.

ಪಾನ್ ಮಸಾಲ ಜಗಿದು ವಿಧಾನಸಭೆಯಲ್ಲಿ ಉಗುಳಿದ ಶಾಸಕನಿಗೆ ಸ್ಪೀಕರ್ ತರಾಟೆ



ಲಖನೌ: ಪಾನ್ ಮಸಾಲ ಜಗಿದು ವಿಧಾನಸಭೆಯ ಪ್ರವೇಶದ್ವಾರದಲ್ಲಿ ಉಗಿದ ಶಾಸಕನಿಗೆ ಸ್ಪೀಕರ್ ತರಾಟೆಗೆ ತೆಗೆದುಕೊಂಡಿರುವ ಘಟನೆ ಉತ್ತರಪ್ರದೇಶದ ವಿಧಾನಸಭೆಯಲ್ಲಿ ನಡೆದಿದೆ. ವಿಧಾನಸಭೆಯ ಮುಖ್ಯ ಸಭಾಂಗಣದ ಪ್ರವೇಶದ್ವಾರದಲ್ಲಿ ಕಾರ್ಪೆಟ್ ಮೇಲೆ ಪಾನ್ ಮಸಾಲ ಉಗುಳಿದ್ದ ಸದಸ್ಯರನ್ನು ಸ್ಪೀಕರ್ ಸತೀಶ್ ಮಹಾನಾ ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ಎಲ್ಲ ಶಾಸಕರು ಇಂತಹ ನಡವಳಿಕೆಗಳನ್ನು ಬಿಟ್ಟು, ಸದನದ ಘನತೆಯನ್ನು ಕಾಪಾಡಿಕೊಳ್ಳಬೇಕೆಂದು ಕೇಳಿಕೊಂಡಿದ್ದಾರೆ. ಬೆಳಿಗ್ಗೆ ಸದನ ಸೇರುತ್ತಿದ್ದಂತೆ, ಸದನದಲ್ಲಿ ಒಬ್ಬ ಸದಸ್ಯರು ಪಾನ್ ಮಸಾಲ ಉಗುಳಿದ್ದಾರೆಂದು ಮಹಾನಾ ಹೇಳಿದ್ದಾರೆ. ಆ ಸದಸ್ಯರು ಯಾರೆಂದು ನನಗೆ ತಿಳಿದಿದೆ. ವಿಡಿಯೊ ಲಭ್ಯವಿದೆ. ಆದರೆ, ನಾನು ಯಾರನ್ನೂ ಅವಮಾನಿಸುವ ಉದ್ದೇಶವನ್ನು ಹೊಂದಿಲ್ಲದ ಕಾರಣ ಸಾರ್ವಜನಿಕವಾಗಿ ಹೆಸರು ಹೇಳಲು ಬಯಸುವುದಿಲ್ಲ. ಅದನ್ನು ಮಾಡಿದ ಸದಸ್ಯರು ನನ್ನನ್ನು ಭೇಟಿ ಮಾಡಬೇಕು. ಇಲ್ಲದಿದ್ದರೆ, ನಾನು ಅವರನ್ನು ಬಲವಂತವಾಗಿ ಕರೆಸಬೇಕಾಗುತ್ತದೆ ಎಂದರು. ಸದನದ ಕಲಾಪ ಆರಂಭವಾಗುವ ಮೊದಲು ಘಟನೆಯ ಬಗ್ಗೆ ಮಾಹಿತಿ ಪಡೆದ ಸ್ಪೀಕರ್, ಸ್ಥಳಕ್ಕೆ ಹೋಗಿ ಶುಚಿ ಕಾರ್ಯದ ಮೇಲ್ವಿಚಾರಣೆ ಮಾಡಿದ್ದೇನೆ ಎಂದು ಹೇಳಿದ್ದಾರೆ.

ಕೊಡಗು ವಿವಿ ರದ್ದು, ಸಿ, ಡಿ ಜಮೀನು ಹಸ್ತಾಂತರ ಗೊಂದಲ ವಿರೋಧಿಸಿ

ನಾಳೆಯಿಂದ ಮಡಿಕೇರಿಯಲ್ಲಿ ಬಿಜೆಪಿ ಅಹೋರಾತ್ರಿ ಧರಣಿ

ಸರ್ಕಾರ ಹೋರಾಟಕ್ಕೆ ಸ್ಪಂದಿಸದಿದ್ದರೆ ಕೊಡಗು ಜಿಲ್ಲಾ ಬಂದ್


ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿದರು.

ಮಡಿಕೇರಿ, ಮಾ.4– ಕೊಡಗು ವಿಶ್ವ ವಿದ್ಯಾನಿಲಯ ರದ್ದುಗೊಳಿಸುವ ರಾಜ್ಯ ಸರ್ಕಾರದ ನಿರ್ಧಾರ, 'ಸಿ ಮತ್ತು ಡಿ' ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಗೊಂದಲ ಮತ್ತು ಪರಿಶಿಷ್ಟರಿಗೆ ಮೀಸಲು ಹಣವನ್ನು ಉಚಿತ ಭಾಗ್ಯಗಳಿಗೆ ಬಳಸುತ್ತಿರುವುದನ್ನು ಖಂಡಿಸಿ ಭಾರತೀಯ ಜನತಾ ಪಾರ್ಟಿಯಿಂದ ಮಾ.6ರಂದು ಬೆಳಗ್ಗೆ 10 ಗಂಟೆಯಿಂದ ಮಾ.7ರ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಅಹೋರಾತ್ರಿ ಧರಣಿ ನಡೆಯಲಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಕೊಡಗಿನ ಜ್ವಲಂತ ಸಮಸ್ಯೆಗಳನ್ನು ಮುಂದಿಟ್ಟು ನಡೆಸುವ ಹೋರಾಟಕ್ಕೆ ರಾಜ್ಯ ಸರ್ಕಾರ ಸ್ಪಂದಿಸಿ, ತನ್ನ ಬಜೆಟ್ ಅಧಿವೇಶನ ದಲ್ಲಿ ಸ್ಪಂದನ ರೂಪವಾಗಿ ಪರಿಹಾರವನ್ನು ಒದಗಿಸ ಬೇಕು. ಇಲ್ಲವಾದಲ್ಲಿ ಮಾ.11ರಂದು ಸ್ವಯಂ ಪ್ರೇರಿತ 'ಕೊಡಗು ಜಿಲ್ಲಾ ಬಂದ್' ನಡೆಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು. ಪಕ್ಷದ ಜಿಲ್ಲಾ ಪದಾಧಿಕಾರಿಗಳ ಸಭೆಯಲ್ಲಿ ಕೊಡಗಿನ ಮೂಲಭೂತ ಸಮಸ್ಯೆಗಳ ಬಗ್ಗೆ ರಾಜ್ಯ ಸರ್ಕಾರದ ಗಮನ ಸೆಳೆಯುವ ಮೂಲಕ ಪರಿಹಾರವನ್ನು ಕಂಡು ಕೊಳ್ಳಲು 'ಜನಾಂದೋಲನ'ದ ನಿರ್ಧಾರ ಮಾಡ ಲಾಗಿದೆ. ಅದರ ಭಾಗವಾಗಿ ಧರಣಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಿಲ್ಲೆಯ ಶಾಸಕರ ನಿರಂತರ ಪ್ರಯತ್ನಗಳ ಫಲಸ್ವರೂಪವಾಗಿ ಕೊಡಗು ವಿ.ವಿ ಸ್ಥಾಪನೆ ಸಾಧ್ಯವಾಯಿತು. ಚಿಕ್ಕಅಳುವಾರದ ಕೊಡಗು ವಿವಿಯಲ್ಲಿ ಈಗಾಗಲೇ ಅದಕ್ಕೆ ಅಗತ್ಯವಾದ ಕಟ್ಟಡ, ವಸತಿ ನಿಲಯ ಎಲ್ಲವನ್ನು ಒದಗಿಸಲಾಗಿದೆ. ವಿವಿಯನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ವಾರ್ಷಿಕ 5ರಿಂದ 6 ಕೋಟಿ ಅನು ದಾನವನ್ನು ಕೊಡಲು ಸರ್ಕಾರಕ್ಕೆ ಸಾಧ್ಯವಾಗದಿರುವುದು ನಾಚಿಕೇಡಿನ ವಿಚಾರ. ನಾವು ಯಾವುದೇ ಕಾರಣಕ್ಕೂ ಕೊಡಗು ವಿ.ವಿ ರದ್ದುಗೊಳಿಸಲು ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ತೋರ್ಪಡಿಕೆಯ ಹೋರಾಟ: ಕೊಡಗಿನ 'ಸಿ ಮತ್ತು ಡಿ' ದರ್ಜೆಯ ಭೂಮಿಯನ್ನು ಅರಣ್ಯ ಇಲಾಖೆಗೆ ವಹಿಸುವ ಸರ್ಕಾರದ ಚಿಂತನೆಗಳ ವಿರುದ್ಧ ಈ ಕ್ಷೇತ್ರದ ಶಾಸಕ ಡಾ.ಮಂತರ್ ಗೌಡ ಅವರ ನೇತೃತ್ವದಲ್ಲೇ ಹೋರಾಟ ನಡೆದಿದೆ. ಹೀಗಿದ್ದೂ ಸರ್ಕಾರ ಕ್ರಮ ಕೈಗೊಂಡಿಲ್ಲವಾದರೆ, ಕೊಡಗು ವಿ.ವಿ ಉಳಿಸಿ ಹೋರಾಟದ ನೇತೃತ್ವವನ್ನು ಕಾಂಗ್ರೆಸ್‌ನ ವಿ.ಪಿ. ಶಶಿಧರ್ ವಹಿಸಿದ್ದರೂ ಪ್ರಯೋಜನವಾಗಿಲ್ಲ. ಈ ಎಲ್ಲಾ ಹೋರಾಟ ತೋರ್ಪಡಿಕೆ ಮಾತ್ರ ಎಂದು ಟೀಕಿಸಿದ ರವಿ ಕಾಳಪ್ಪ, ಜಿಲ್ಲೆಯ ಶಾಸಕರು ಈ ಮೂಲಭೂತ ಸಮಸ್ಯೆಗಳ ಬಗೆಹರಿಸಲು ಅಧಿವೇಶನದ ಬಾವಿಗಿಳಿದು ಹೋರಾಟವನ್ನು ರೂಪಿಸಲಿ ಎಂದು ಹೇಳಿದರು.

ರಾಜ್ಯದ ಕಳೆದ ಎರಡು ಬಜೆಟ್‌ಗಳಲ್ಲಿ ಪರಿಶಿಷ್ಟರ ಅಭಿವೃದ್ಧಿಗಾಗಿ ಶೇ.22ರಷ್ಟು ಅಂದರೆ ಅನುಕ್ರಮವಾಗಿ 11 ಸಾವಿರ ಕೋಟಿ ಮತ್ತು 14 ಸಾವಿರ ಕೋಟಿ, ಒಟ್ಟಾಗಿ 25 ಸಾವಿರ ಕೋಟಿ ಅನುದಾನವನ್ನು ಮೀಸಲಿಡಲಾಗಿತ್ತು. ಈ ಹಣವನ್ನು ನಾವು ಪರಿಶಿಷ್ಟರು, ಅಹಿಂದ ಪರವೆನ್ನುವ ಸರ್ಕಾರ ಉಚಿತ ಭಾಗ್ಯಗಳಿಗೆ ಬಳಸಿ ಕೊಂಡಿದೆ. ಯಾವುದೇ ಕಾರಣಕ್ಕೂ ಪರಿಶಿಷ್ಟರ ಮೀಸಲು ಅನುದಾನವನ್ನು ಉಚಿತ ಭಾಗ್ಯಗಳಿಗೆ ಬಳಸಬಾರದೆಂದು ರವಿ ಕಾಳಪ್ಪ ಆಗ್ರಹಿಸಿದರು.

ಬೆಳೆ ಪರಿಹಾರ–ವಿದ್ಯುತ್‌ಗೆ ಆಗ್ರಹ: ಪ್ರಸಕ್ತ ಸಾಲಿನಲ್ಲಿ ಕಾಫಿ ಉತ್ಪಾದನೆ ಶೇ.60ರಷ್ಟು ಕುಂಠಿತವಾಗಿದೆ. ಹೀಗಿದ್ದೂ ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಗಮನ ಹರಿಸಿಲ್ಲ. ಬಿಜೆಪಿ ಸರ್ಕಾರವಿದ್ದಾಗ ಬೆಳೆಗಾರರಿಗೆ 54 ಸಾವಿರ ರೂ. ಪರಿಹಾರವನ್ನು ನೀಡಿತ್ತು, ಅದೇ ರೀತಿಯ ಪರಿಹಾರ ಒದಗಿಸಬೇಕು. ರೈತರ 10 ಹೆಚ್.ಪಿ ಒಳಗಿನ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಬೇಕು. ಬಿಲ್ ಕಟ್ಟಲಿಲ್ಲ ಎನ್ನುವ ಕಾರಣಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸಬಾರದು ಎಂದು ಒತ್ತಾಯಿಸಿದರು. ವನ್ಯಜೀವಿಗಳು ಮತ್ತು ಮಾನವನ ನಡುವಿನ ಸಂಘರ್ಷ ಹೆಚ್ಚಾಗುತ್ತಿದ್ದು, ಸಮಸ್ಯೆ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಇಲ್ಲಿಯವರೆಗೆ ಕೈಗೊಂಡಿಲ್ಲ. ಈ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಖಾಸಗಿ ಜಮೀನುಗಳಲ್ಲಿನ ಮರಗಳ ಸರ್ವೆ, ಧಾರ್ಮಿಕ ಕಾರ್ಯಗಳಲ್ಲಿ ಬಳಸುವ ವನ್ಯಜೀವಿ ಉತ್ಪನ್ನಗಳಾದ ಕೊಂಬು, ಗರಿಗಳ ಬಳಕೆ ನಿಷೇಧಕ್ಕೆ ತಾತ್ಕಾಲಿಕವಾಗಿ ತಡೆಯಿದ್ದರು, ಮುಂದೊಂದು ದಿನ ಮತ್ತೆ ಸಮಸ್ಯೆ ಉದ್ಭವಿಸಬಹುದಾಗಿದೆ. ಹೀಗಾಗಿ ಈ ಆದೇಶಗಳನ್ನು ಹಿಂದಕ್ಕೆ ಪಡೆಯಲು ರಾಜ್ಯ ಸರ್ಕಾರ ಮುಂದಾಗಬೇಕು. ಈ ಎಲ್ಲಾ ವಿಚಾರಗಳನ್ನು ಮುಂದಿಟ್ಟುಕೊಂಡು ಹೋರಾಟ ರೂಪಿಸಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಡಿಕೇರಿ ಗ್ರಾಮಾಂತರ ಮಂಡಲ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ, ಮಡಿಕೇರಿ ನಗರ ಮಂಡಲ ಅಧ್ಯಕ್ಷ ಉಮೇಶ್ ಸುಬ್ರಮಣಿ, ವಿರಾಜಪೇಟೆ ಮಂಡಲ ಅಧ್ಯಕ್ಷ ಸುವಿನ್ ಗಣಪತಿ, ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್ ಮತ್ತು ಜಿಲ್ಲಾ ವಕ್ತಾರ ಬಿ.ಕೆ. ಅರುಣ್ ಕುಮಾರ್ ಉಪಸ್ಥಿತರಿದ್ದರು.

ಶಾಲೆಗೆ ಮಂಜೂರಾಗಿದ್ದ ಜಾಗದಲ್ಲಿ ಸ್ವಚ್ಛತಾ ಕಾರ್ಯಕ್ಕೆ ಅಡ್ಡಿ

ಗ್ರಾಮಸ್ಥರು, ವಿದ್ಯಾರ್ಥಿಗಳು, ಶಾಲಾಭಿವೃದ್ಧಿ ಸಮಿತಿ ಆಕ್ರೋಶ


ಸ್ವಚ್ಛತಾ ಕಾರ್ಯಕ್ಕೆ ಅಡ್ಡಿಪಡಿಸಿದ ಅರಣ್ಯ ಇಲಾಖೆ ಸಿಬ್ಬಂದಿ.

ಮಡಿಕೇರಿ, ಮಾ.4– ಕೊಯನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಂಪಾಜೆ ಗ್ರಾಮ ಪಂಚಾಯ್ತಿಯ ಸರ್ವೇ ನಂಬರ್ 69/1ರಲ್ಲಿ ಒಂದು ಎಕರೆ ಜಾಗವನ್ನು ಕಂದಾಯ ಇಲಾಖೆ ಮಂಜೂರು ಮಾಡಿದ್ದು, ಈ ಹಿನ್ನೆಲೆಯಲ್ಲಿ ಗ್ರಾಮಸ್ಥರು, ಶಾಲಾಭಿವೃದ್ಧಿ ಸಮಿತಿ, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘ, ಸಂಪಾಜೆ ಗ್ರಾಮ ಪಂಚಾಯ್ತಿ ಸದಸ್ಯರು, ಮತ್ತು ವಿದ್ಯಾರ್ಥಿಗಳ ಪೋಷಕರು ಜಾಗವನ್ನು ಸ್ವಚ್ಛಗೊಳಿಸಲು ತೆರಳಿದ ಸಂದರ್ಭ ಅರಣ್ಯ ಇಲಾಖೆ ಅಡ್ಡಿಪಡಿಸಿದ ಘಟನೆ ನಡೆದಿದೆ.

ಕಳೆದ ಮಳೆಗಾಲದಲ್ಲಿ ಪ್ರಾಕೃತಿಕ ವಿಕೋಪದಿಂದ ಶಾಲೆ ಬದಿಯ ಬೃಹತ್ ಬರೆ ಕುಸಿದು ಶಾಲಾ ಕೊಠಡಿಗಳು ತೀವ್ರ ಹಾನಿ ಗೊಳಗಾಗಿದ್ದವು. ಶಾಲಾ ಚಟುವಟಿಕೆಗೆ ಈ ಸ್ಥಳ ಸೂಕ್ತವಾಗಿಲ್ಲದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಹೊಸದಾಗಿ ಶಾಲೆ ನಿರ್ಮಾಣಕ್ಕೆ ಜಾಗ ಒದಗಿಸುವ ಭರವಸೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಸಂಪಾಜೆ ಗ್ರಾಮ ಪಂಚಾಯ್ತಿಯ ಸರ್ವೇ ನಂಬರ್ 69/1 ರಲ್ಲಿ 1 ಎಕರೆ ಜಾಗವನ್ನು ಕೊಯನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಂದಾಯ ಇಲಾಖೆ ಮಂಜೂರು ಮಾಡಿದ್ದು, ಕಳೆದ 10 ದಿನಗಳ ಹಿಂದೆ ಕೊಡನಾಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎಂಬ ನಾಮಫಲಕವನ್ನು ಈ ಜಾಗದಲ್ಲಿ ಅಳವಡಿಸಲಾಗಿತ್ತು. ಶಾಲೆಗೆ ಮಂಜೂರಾದ ಜಾಗವನ್ನು ಸ್ವಚ್ಛಗೊಳಿಸಲು ಗ್ರಾಮಸ್ಥರು ತೆರಳಿದ ಸಂದರ್ಭ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ, ತಡೆವೊಡ್ಡಿ ಇದು ಅರಣ್ಯ ಇಲಾಖೆಗೆ ಸೇರಿದ ಪ್ರದೇಶವಾಗಿದೆ ಎಂದು ಹೇಳಿ ಸ್ವಚ್ಛತಾ ಕಾರ್ಯಕ್ಕೆ ತಡೆ ಒಡ್ಡಿದರೆನ್ನಲಾಗಿದೆ.

ಇದರಿಂದ ಗ್ರಾಮಸ್ಥರು ಮತ್ತು ಅರಣ್ಯ ಇಲಾಖಾಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆದಿದೆ. ಈ ಸಂದರ್ಭ ಸಂಪಾಜೆ ಗ್ರಾಮ ಪಂಚಾಯ್ತಿ ಸದಸ್ಯ ಸುರೇಶ್ ಅವರನ್ನು ಅರಣ್ಯ ಇಲಾಖಾಧಿಕಾರಿಗಳು ವಶಕ್ಕೆ ಪಡೆದರು. ಇದರಿಂದ ತೀವ್ರ ಅಸಮಾಧಾನಗೊಂಡ ಸ್ಥಳೀಯರು ಸ್ಥಳದಲ್ಲೇ ಪ್ರತಿಭಟನೆ ನಡೆಸಿ ಅಸಮಾಧಾನ ವ್ಯಕ್ತಪಡಿಸಿದರು. ಕೊಯನಾಡು ಸರಕಾರಿ ಶಾಲೆಗೆ ಒಂದು ಎಕರೆ ಜಾಗದ ಆರ್‌ಟಿಸಿ ದೊರೆತಿದೆ ಎಂದು ಸ್ಥಳಕ್ಕಾಗಮಿಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೊಹ್ಸಿನ್ ಬಾಷಾ ಅವರನ್ನು ತರಾಟೆಗೆತ್ತಿಕೊಂಡರು.

ಈ ಸಂದರ್ಭ ಸಂಪಾಜೆ ಕಂದಾಯ ಅಧಿಕಾರಿ ವೆಂಕಟೇಶ್, ಕಂದಾಯ ಇಲಾಖೆಯ ಆರ್‌ಟಿಸಿಯಲ್ಲಿ 1 ಎಕರೆ ಜಾಗ ಶಾಲೆಗೆ ಮಂಜೂರಾಗಿರುವ ಬಗ್ಗೆ ಎಸಿಎಫ್ ಮೊಹ್ಸಿನ್ ಬಾಷಾ ಅವರ ಗಮನಕ್ಕೆ ತಂದರು. ಎಸಿಎಫ್ ಮೊಹ್ಸಿನ್ ಬಾಷಾ ಅವರು ಮಾತನಾಡಿ, ಜಾಗವು ಮೀಸಲು ಅರಣ್ಯ ಪ್ರದೇಶಕ್ಕೆ ಒಳಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಕಾನೂನು ಉಲ್ಲಂಘಿಸುವ ಕಾರ್ಯಕ್ಕೆ ಮುಂದಾಗಬಾರದೆಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರು. ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಎಸಿಎಫ್ ಮೊಹ್ಸಿನ್ ಬಾಷಾ, ಸಂಪಾಜೆಯ ಸರ್ವೆ ನಂಬರ್ 69/1ರಲ್ಲಿ ಆರ್‌ಟಿಸಿ ಇದೆ ಎಂದು ಗ್ರಾಮಸ್ಥರು, ಜಾಗವನ್ನು ಸ್ವಚ್ಛಗೊಳಿಸಲು ಬಂದ ಸಂದರ್ಭ ಅರಣ್ಯ ಇಲಾಖೆ ವತಿಯಿಂದ ತಡೆಯೊಡ್ಡಲಾಗಿದೆ. ಈ ಜಾಗವು ಅರಣ್ಯ ಅಲ್ಲ ಎಂಬುದಕ್ಕೆ ಯಾವುದೇ ದಾಖಲಾತಿ ಇಲ್ಲ. ಕೇವಲ ಆರ್‌ಟಿಸಿ ಇದೆಯಷ್ಟೇ, ಕಾರ್ಯನಿಮಿತ್ತ ತಹಶೀಲ್ದಾರ್ ಅವರು ಸ್ಥಳಕ್ಕೆ ಬಂದಿಲ್ಲ. ಮೂರು ದಿನಗಳ ಒಳಗೆ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ತಹಶೀಲ್ದಾರ್ ತಿಳಿಸಿದ್ದು, ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಡಿಎಫ್‌ಓ ಸಮ್ಮುಖದಲ್ಲಿ ಸಭೆ ನಡೆಸಿ ಕ್ರಮಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭ ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಪುರುಷೋತ್ತಮ, ಸದಸ್ಯರಾದ ಕುಸುಮಾಕರ, ಉಮೇಶ್, ಲೋಕೇಶ್, ಸಂಪಾಜೆ ಗ್ರಾಮ ಪಂಚಾಯ್ತಿ ಸದಸ್ಯರಾದ ಸುರೇಶ್, ನವೀನ್, ಜಗದೀಶ್, ಶಾಲಾ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಹನೀಫ್ ಸಂಪಾಜೆ ಹಾಗೂ ಗ್ರಾಮಸ್ಥರು, ಅರಣ್ಯ ಸಂಶೋಧನಾ ವಿಭಾಗದ ಎಸಿಎಫ್ ತೀರ್ಥ, ಸಂಪಾಜೆ ವಲಯ ಅರಣ್ಯಾಧಿಕಾರಿ ದೇಚಮ್ಮ, ಮಡಿಕೇರಿ ಗ್ರಾಮಾಂತರ ಪೊಲೀಸ್ ವೃತ್ತ ನಿರೀಕ್ಷಕ ಚಂದ್ರಶೇಖರ್ ಹಾಗೂ ಅರಣ್ಯ ಮತ್ತು ಪೊಲೀಸ್ ಸಿಬ್ಬಂದಿಗಳು ಹಾಜರಿದ್ದರು.

ಮಾ.8,ರಾಷ್ಟ್ರೀಯ ಲೋಕ ಅದಾಲತ್

ಮಡಿಕೇರಿ, ಮಾ.4– ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಮಾ.8 ರಂದು ಕೊಡಗು ಜಿಲ್ಲೆಯ ವಿವಿಧ ಹಂತದ ಎಲ್ಲಾ ನ್ಯಾಯಾಲಯಗಳಲ್ಲಿ 'ರಾಷ್ಟ್ರೀಯ ಲೋಕ ಅದಾಲತ್' ನಡೆಯಲಿದೆ. ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಮತ್ತು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳಿಗೆ ತಕ್ಷಣ ಪರಿಹಾರ ಪಡೆದುಕೊಳ್ಳಲು ರಾಷ್ಟ್ರೀಯ ಲೋಕ ಅದಾಲತ್ ಸುವರ್ಣ ಅವಕಾಶವಾಗಿದೆ.

ಯಾವುದೇ ಕಾರಣಕ್ಕೂ ಕೊಡಗು ವಿವಿ ಮುಚ್ಚಬೇಡಿ

ಬೋಧಕರು, ಬೋಧಕೇತರರು, ವಿದ್ಯಾರ್ಥಿಗಳಿಂದ ಬೈಕ್ ಜಾಥಾ, ಮುಖ್ಯಮಂತ್ರಿಗಳಿಗೆ ಅಂಚೆ ಚೀಟಿ ಅಭಿಯಾನ


ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಬೈಕ್ ಜಾಥಾ ನಡೆಸಿದರು.

ಮಡಿಕೇರಿ, ಮಾ.4– ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಕೊಡಗು ವಿ.ವಿ ಮುಚ್ಚಬಾರದು ಎಂದು ಆಗ್ರಹಿಸಿ ಕೊಡಗು ವಿ.ವಿ ಬೋಧಕರು, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಚಿಕ್ಕಅಳುವಾರದ ವಿ.ವಿ ಕ್ಯಾಂಪಸ್‌ನಿಂದ ಕುಶಾಲನಗರದ ತಹಶೀಲ್ದಾರ್ ಕಚೇರಿವರೆಗೆ ಬೈಕ್ ಜಾಥಾ ನಡೆಸಿ, ಮುಖ್ಯಮಂತ್ರಿಗಳಿಗೆ ಅಂಚೆ ಚೀಟಿ ಅಭಿಯಾನ ಮಾಡಿದರು.

ತಹಶೀಲ್ದಾರ್ ಕಚೇರಿ ಬಳಿ ಜಾಥಾವನ್ನು ಉದ್ದೇಶಿಸಿ ಮಾತನಾಡಿದ ಕೊಡಗು ವಿ.ವಿ ಹಿತರಕ್ಷಣಾ ಸಮಿತಿ ಗೌರವಾಧ್ಯಕ್ಷ ವಿ.ಪಿ.ಶಶಿಧರ್, ಕೊಡಗು ವಿವಿ ಕೊಡಗಿನ ನೆಲದ ಹೆಮ್ಮೆಯ ಪ್ರತೀಕವಾಗಿದೆ. ಕಳೆದ 2 ವರ್ಷಗಳಿಂದ ಸರ್ಕಾರದಿಂದ ಅನುದಾನ ಇಲ್ಲದಿದ್ದರೂ ವಿವಿ ಶೈಕ್ಷಣಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿದೆ ಎಂದು ಹೇಳಿದರು. ವಿವಿಯ ಒಳಗಿರುವ ಕೆಲವು ಹಿತಶತ್ರುಗಳು ವಿವಿ ಮುಚ್ಚುತ್ತದೆ ಎಂಬ ವ್ಯವಸ್ಥಿತ ಅಪಪ್ರಚಾರ ಮಾಡುತ್ತಾ ಬಂದಿದ್ದು, ಈಗಲು ಅದನ್ನೇ ಮುಂದುವರೆಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸರಕಾರದಿಂದ ಪೂರಕ ಅನುದಾನ ಹರಿದು ಬಂದರೆ ಕೊಡಗು ವಿ.ವಿ ರಾಜ್ಯದಲ್ಲಿಯೇ ವಿಶೇಷ ವಿವಿಯಾಗಲಿದೆ. ಆದ್ದರಿಂದ ಸರ್ಕಾರ ಕೂಡಲೇ ವಿ.ವಿ ಮುಚ್ಚುವ ನಿರ್ಧಾರದಿಂದ ದೂರ ಸರಿಯಬೇಕು. ಈ ನಿಟ್ಟಿನಲ್ಲಿ ಶಾಸಕ ಡಾ. ಮಂತರ್ ಗೌಡರ ನೇತೃತ್ವದಲ್ಲಿ ಮಾ.7ರ ನಂತರ ಕೊಡಗು ವಿವಿ ಹಿತರಕ್ಷಣಾ ಸಮಿತಿಯಿಂದ ನಿಯೋಗ ಬೆಂಗಳೂರಿಗೆ ತೆರಳಲಿದೆ ಎಂದು ಶಶಿಧರ್ ಹೇಳಿದರು.

ಕೊಡಗು ವಿ.ವಿ ಅಧ್ಯಾಪಕರ ಪರವಾಗಿ ಮಾತನಾಡಿದ ಡಾ.ಜಮೀರ್ ಅಹಮದ್, ಕೊಡಗು ವಿ.ವಿಗೆ ಮಾ.28ಕ್ಕೆ ಎರಡು ವರ್ಷ ತುಂಬುತ್ತಿದೆ. ಈಗಾಗಲೇ ಕಳೆದ ಎರಡು ವರ್ಗಗಳಲ್ಲಿ ವಿ.ವಿ ಶೈಕ್ಷಣಿಕವಾಗಿ ಸಾಕಷ್ಟು ಮೈಲಿಗಲ್ಲು ಸಾಧಿಸಿದೆ. ಕೊಡಗಿನ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಒದಗಿಸಲು ದೇಶದ ಬೇರೆ ಬೇರೆ ಪ್ರತಿಷ್ಠಿತ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿರುವ ಕೊಡಗು ವಿ.ವಿ 12 ಕೌಶಲಾಭಿವೃದ್ಧಿ ಕೋರ್ಸ್‌ಗಳನ್ನು ತೆರೆದು ವಿದ್ಯಾರ್ಥಿಗಳ ಜೀವನ ಭದ್ರತೆಗೆ ಮುಂದಾಗಿದೆ ಎಂದು ಮಾಹಿತಿ ನೀಡಿದರು. ರಾಜ್ಯ ಸರ್ಕಾರ ಕೂಡಲೇ ಕೊಡಗಿನ ಪ್ರಾಕೃತಿಕ ಸನ್ನಿವೇಶಕ್ಕನುಗುಣವಾಗಿ ಇಲ್ಲಿ ತೆರೆಯಲಾದ ವಿವಿಯನ್ನು ಮುಚ್ಚಬಾರದು ಎಂದು ಮನವಿ ಮಾಡಿದರು. ಜಾಥಾ ತಂಡ ತಹಶೀಲ್ದಾರ್ ಕಿರಣ್ ಗೌರಯ್ಯ ಅವರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಇದೇ ಸಂದರ್ಭ ಕೊಡಗು ವಿವಿ ಮುಚ್ಚದಂತೆ ಸಿಎಂಗೆ ಅಂಚೆ ಪತ್ರ ಬರೆದು ಅಂಚೆ ಪೆಟ್ಟಿಗೆಗೆ ಹಾಕುವ ಮೂಲಕ ಅಂಚೆ ಪತ್ರ ಅಭಿಯಾನವನ್ನೂ ನಡೆಸಲಾಯಿತು.

ಕೊಡಗು ವಿವಿ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೃಷ್ಣೇಗೌಡ, ಸಂಚಾಲಕ ಕೆ.ಎಸ್. ಮೂರ್ತಿ, ಎಂ.ಎನ್. ಚಂದ್ರಮೋಹನ್, ಟಿ.ಬಿ. ಜಗದೀಶ್ ಸೇರಿದಂತೆ ವಿವಿಯ ಅಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

ಜಗಳ ಬಿಡಿಸಲು ಬಂದ ತಮ್ಮನನ್ನೇ ಕೊಂದ ಅಣ್ಣ

ಯಳಂದೂರು, ಮಾ.4–ಅಣ್ಣನೇ ತಮ್ಮನನ್ನು ಕೊಲೆ ಮಾಡಿರುವ ಘಟನೆ ಸಮೀಪದ ಇರಸವಾಡಿ ಗ್ರಾಮದಲ್ಲಿ ಸಂಭವಿಸಿದೆ.


ನಾಗಯ್ಯ

ಇರಸವಾಡಿ ಗ್ರಾಮದ ನಾಗಯ್ಯ (35) ಎಂಬ ವ್ಯಕ್ತಿಯೇ ಕೊಲೆಯಾದ ದುರ್ದೈವಿ. ಫೆ.1ರ ಶನಿವಾರ ಇರಸವಾಡಿ ಗ್ರಾಮದಲ್ಲಿ ನಾಗಯ್ಯ ಅವರ ಅಣ್ಣ ಮಹೇಶ್ ಹಾಗೂ ನಿಂಗರಾಜು ಜಗಳವಾಡುತ್ತಿದ್ದರು. ಈ ವೇಳೆ ನಾಗಯ್ಯ ಈ ಜಗಳವನ್ನು ಬಿಡಿಸಲು ಹೋದಾಗ ಈತನ ಮೇಲೆ ಇವನ ಅಣ್ಣ ಮಹೇಶ್ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ.

ತಕ್ಷಣ ಈತನನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ. ನಂತರ ಅಲ್ಲಿಂದ ಮತ್ತೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಈತ ಸೋಮವಾರ ಮೃತಪಟ್ಟಿದ್ದಾನೆ.


ಈ ಸಂಬಂಧ ಮೃತ ನಾಗಯ್ಯನ ಪತ್ನಿ ಮಂಗಳ ಅವರ ದೊಡ್ಡಪ್ಪನ ಮಗ ಉಪ್ಪಿನಮೋಳೆ ಗ್ರಾಮದ ಗೋವಿಂದರಾಜು ದೂರು ದಾಖಲಿಸಿದ್ದು, ಆರೋಪಿ ಮಹೇಶ್ ನನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಡಿವೈಎಸ್‌ಪಿ ಎಂ ಧರ್ಮೇಂದ್ರ, ಸಿಪಿಐ ಕೆ. ಶ್ರೀಕಾಂತ್ ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ವಹಿಸಿದ್ದಾರೆ.

ಕರ್ತವ್ಯ ಲೋಪ: ಮೂವರು ಪೊಲೀಸರ ಅಮಾನತು

ಚಾಮರಾಜನಗರ, ಮಾ.4– ಜಿಲ್ಲೆಯ ಯಳಂದೂರು ತಾಲೂಕಿನ ಇರಸವಾಡಿ ಗ್ರಾಮದಲ್ಲಿ ತಮ್ಮನನ್ನು ಅಣ್ಣನೇ ಕೊಲೆ ಮಾಡಿರುವ ಪ್ರಕರಣ ಸಂಬಂಧ ಕರ್ತವ್ಯ ಲೋಪವೆಸಗಿದ ಆರೋಪದಡಿ ಮೂವರು ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಯಳಂದೂರು ಠಾಣೆಯ ಪಿಎಸ್‌ಐ ಹನುಮಂತ ಉಪ್ಪಾರ್, ಎಎಸ್‌ಐ ಪೂವಯ್ಯ, ಮುಖ್ಯ ಪೇದೆ ಇಲಿಯಾಸ್ ಪಾಷಾರನ್ನು ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಎಸ್ಪಿ ಕವಿತಾ ಮಾಡಿದ ಶಿಫಾರಸ್ಸಿನಂತೆ ದಕ್ಷಿಣ ವಲಯ ಐಜಿ ಬೋರಲಿಂಗಯ್ಯ ಆದೇಶಿಸಿದ್ದಾರೆ.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ಇದೊಂದು ಗಂಭೀರ ವೈದ್ಯಕೀಯ ಕಾನೂನು (ಎಂಎಲ್‌ಸಿ) ಪ್ರಕರಣವಾಗಿದ್ದರು ಸಹ ಯಳಂದೂರು ಠಾಣಾ ಸಿಬ್ಬಂದಿ ತಕ್ಷಣ ಕಾರ್ಯಪ್ರವೃತ್ತರಾಗಿ ಕೊಲೆಗೆ ಕಾರಣನಾದ ಆರೋಪಿಯನ್ನು ಬಂಧಿಸಲು ವಿಫಲರಾದ ಹಿನ್ನೆಲೆಯಲ್ಲಿ ಆತ ಪರಾರಿಯಾಗಿದ್ದ. ಈ ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಮೂವರನ್ನು ಅಮಾನತು ಮಾಡಲಾಗಿದೆ ಎಂದರು.

ಕರಿಕಲ್ಲು ಲಾರಿ ಚಾಲಕನ ಅಜಾಗರೂಕತೆ, ಬೈಕ್ ಡಿಕ್ಕಿ: ವ್ಯಕ್ತಿಗೆ ಗಾಯ



ಯಳಂದೂರು, ಮಾ.4– ತಾಲೂಕಿನ ಮದ್ದೂರು ಗ್ರಾಮದ ರಾಷ್ಟ್ರೀಯ ಹೆದ್ದಾರಿ 948ರ ಹಜರತ್ ದಿಲ್‌ಬರ್ ಷಾ–ವಲಿ ದರ್ಗಾದ ಬಳಿ ಕರಿಕಲ್ಲು ತುಂಬಿದ್ದ ಲಾರಿ ಚಾಲಕ ಶನಿವಾರ ರಾತ್ರಿ ಯಾವುದೇ ಸಿಗ್ನಲ್ ಇಲ್ಲದೆ ಲಾರಿ ಪಾರ್ಕಿಂಗ್ ಮಾಡಿದ್ದ ಸಮಯದಲ್ಲಿ ಬೈಕ್ ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ತೀವ್ರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಕೊಳ್ಳೇಗಾಲದ ಬಸ್ತೀಪುರದ ಆನಂದ್ ಬಾಬು ಎಂಬುವರು ಚಾಮರಾಜನಗರದಿಂದ ಕೊಳ್ಳೇಗಾಲಕ್ಕೆ ತೆರಳುತ್ತಿದ್ದ ವೇಳೆ ಲಾರಿ ನಿಲ್ಲಿಸಿರುವುದನ್ನು ಗಮನಿಸದೆ ಲಾರಿಗೆ ಡಿಕ್ಕಿ ಹೊಡೆದಿದ್ದು ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಆನಂದ್ ಬಾಬುರ ತಂದೆ ನಾಗರಾಜು ಲಾರಿ ಚಾಲಕನ ಅಜಾಗರೂಕತೆಯೇ ಇದಕ್ಕೆ ಕಾರಣ ಎಂದು ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಕರಿಕಲ್ಲು ತುಂಬಿದ್ದ ಲಾರಿ (ಟಿಎನ್.52 ಎಚ್. 8399)ಯನ್ನು ವಶಪಡಿಸಿಕೊಂಡು ಮುಂದಿನ ಕ್ರಮ ವಹಿಸಲಾಗಿದೆ.

ಚಾ.ನಗರ: ರಾಜ್ಯ ಸರ್ಕಾರದ ವಿರುದ್ಧ ದಸಂಸ ಪ್ರತಿಭಟನೆ



ನಗರದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಮಾ.4– ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಹಣವನ್ನು ಗ್ಯಾರಂಟಿ ಯೋಜನೆ, ಇತರೆ ಯೋಜನೆಗಳಿಗೆ ಬಳಸಿಕೊಂಡಿರುವುದನ್ನು ಖಂಡಿಸಿ ನಗರದಲ್ಲಿ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ರಸ್ತೆ ತಡೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ನಂತರ ಮುಖಂಡ ಯರಿಯೂರು ರಾಜಣ್ಣ ಮಾತನಾಡಿ, 2013–14ರಲ್ಲಿ ಸಿದ್ದರಾಮಯ್ಯನವರ ಸರ್ಕಾರವೇ ಜಾರಿಗೊಳಿಸಿದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಕಾಯ್ದೆಯಾಗಿದ್ದು, ಈ ಯೋಜನೆಯ ಹಣ ಅನ್ಯ ಯೋಜನೆಗಳಿಗೆ ಬಳಸಿರುವುದು ದಲಿತರಿಗೆ ಮಾಡಿದ ಅನ್ಯಾಯವಾಗಿದೆ. ಅನ್ಯ ಯೋಜನೆಗಳಿಗೆ ಬಳಸಿರುವ ಹಣವನ್ನು ವಾಪಸ್ ನೀಡಬೇಕು ಎಂದು ಒತ್ತಾಯಿಸಿದರು.

2023–24ನೇ ಸಾಲಿನಿಂದಲೂ ಸುಮಾರು 25000 ಕೋಟಿಯನ್ನು ಗ್ಯಾರಂಟಿಗಳಿಗೂ, ರೂ. 15000 ಕೋಟಿಯನ್ನು ಅನ್ಯ ಉದ್ದೇಶಕ್ಕೂ ಬಳಸಲಾಗಿದೆ. ಈ ಮೂಲಕ ಕಾಯ್ದೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಿದೆ. ಇದನ್ನು ಸರ್ಕಾರ, ಮುಖ್ಯಮಂತ್ರಿಗಳು, ಸಮಾಜ ಕಲ್ಯಾಣ ಸಚಿವರು ಸೇರಿದಂತೆ ಇತರ ಮಂತ್ರಿಗಳು ಸಮರ್ಥಿಸಿಕೊಳ್ಳುತ್ತಿರುವುದು ಸರಿಯಲ್ಲ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳು ಉತ್ತಮ ಯೋಜನೆಗಳೇ. ಕನ್ನಡಿಗರೆಲ್ಲರಿಗೂ ಈ ಯೋಜನೆಯಿಂದ ಅನುಕೂಲವಾಗಿದೆ. ಆದರೆ ಗ್ಯಾರಂಟಿಗಳ ಉದ್ದೇಶವೇ ಬೇರೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯ ಉದ್ದೇಶವೇ ಬೇರೆ. ಗ್ಯಾರಂಟಿಗಳು ದಲಿತರು ಮತ್ತು ದಲಿತೇತರರ ನಡುವಿನ ಸಾಮಾಜಿಕ–ಆರ್ಥಿಕ ಅಸಮಾನತೆಯ ಅಂತರವನ್ನು ಕಡಿಮೆ ಮಾಡುವುದಿಲ್ಲ ಆದ್ದರಿಂದ ಈಗಿನಿಂದಲೇ ಗ್ಯಾರಂಟಿಗಳಿಗೆ ಬಳಸಿರುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣವನ್ನು ದಲಿತರ ಅಭಿವೃದ್ಧಿಗೆ ಹಿಂದಿರುಗಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ರಂಗಸ್ವಾಮಿ, ನಂಜುಂಡಸ್ವಾಮಿ, ದೊರೆಸ್ವಾಮಿ, ನಾಗರಾಜು, ನಿಜಧ್ವನಿ ಗೋವಿಂದರಾಜು, ಸುರೇಶ್, ಅನಿಲ್‌ಕುಮಾರ್, ಮಂಜುನಾಥ್, ದೊರೆಸ್ವಾಮಿ, ಇದಾಯತ್ ಉಲ್ಲಾ ಷರೀಫ್ ಇದ್ದರು.

24 ಗಂಟೆಯಲ್ಲಿ ಅಪಹರಣ ಪ್ರಕರಣ ಬಯಲು

ಬಿಬಿಎಂಪಿ ಎಫ್‌ಡಿಎ ಕುಟುಂಬ ಅಪಹರಿಸಿದ್ದ ನಾಲ್ವರ ಸೆರೆ


ಸುದ್ದಿಗಾರರೊಂದಿಗೆ ಎಸ್ಪಿ ಡಾ.ಬಿ.ಟಿ. ಕವಿತಾ ಮಾತನಾಡಿದರು.

ಚಾಮರಾಜನಗರ, ಮಾ.4– ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಸಮೀಪದ ಕಂಟ್ರಿ ಕ್ಲಬ್ ರೆಸಾರ್ಟ್ ಬಳಿ ದಂಪತಿ ಹಾಗೂ ಮಗುವಿನ ಅಪಹರಣ ಪ್ರಕರಣವನ್ನು ಜಿಲ್ಲೆಯ ಪೊಲೀಸರು 24 ಗಂಟೆಯಲ್ಲಿ ಬೇದಿಸುವಲ್ಲಿ ಯಶಸ್ವಿಯಾಗಿದ್ದು, ಅಪಹರಣಕ್ಕೊಳಗಾದ ಕುಟುಂಬವನ್ನು ರಕ್ಷಿಸಿ, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಪ್ರಕರಣ ಸಂಬಂಧ ವಿಜಯಪುರ ಜಿಲ್ಲೆಯ ಕೋಲಾರ ತಾಲೂಕಿನ ಹಳ್ಳದ ಗೆಣ್ಣೂರು ಗ್ರಾಮದ ಮಲ್ಲಿಕಾರ್ಜುನ (30), ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೆಂಬಾವಿ ಗ್ರಾಮದ ಈರಣ್ಣ ದವಲತ್ ರಾಯ (32), ಹುಣಸಗಿ ತಾಲೂಕಿನ ಕಚಗಾನೂರು ಗ್ರಾಮದ ಸಿದ್ದರಾಮಯ್ಯ (40) ಹಾಗೂ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಖಾನಾಪುರ ಗ್ರಾಮದ ವಿಶ್ವನಾಥ್ (30) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಇನ್ನೂಳಿದ ಪುನೀತ್ ಈರಪ್ಪ, ಸ್ನೇಹಿತ್ ಈರಪ್ಪ ಹಾಗೂ ಭೀನಗೌಡ ಆರೋಪಿಗಳು ತಲೆಮರೆಸಿಕೊಂಡಿದ್ದು, ಇವರ ಬಂಧನಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಅಪರಣಕ್ಕೆ ಒಳಗಾಗಿದ್ದ ಬೆಂಗಳೂರಿನ ಬಿಬಿಎಂಪಿಯಲ್ಲಿ ಎಫ್‌ಡಿಎ ಆಗಿ ಕೆಲಸ ನಿರ್ವಹಿಸುತ್ತಿರುವ ನಿಶಾಂತ್, ಈತನ ಪತ್ನಿ ಚಂದನಾ ಹಾಗೂ ಇವರ 7 ವರ್ಷದ ಮಗುವನ್ನು ರಕ್ಷಿಸಲಾಗಿದೆ.

ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ಬಂಡೀಪುರ ಬಳಿಯ ಕಂಟ್ರಿ ಕ್ಲಬ್ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದ ಬೆಂಗಳೂರಿನ ನಿಶಾಂತ್, ಚಂದನಾ ಹಾಗೂ ಇವರ ಮಗನನ್ನು ರೆಸಾರ್ಟ್ ಹೊರಗಡೆ ಗ್ಯಾಂಗ್‌ವೊಂದು ಅಪಹರಣ ಮಾಡಿರುವುದಾಗಿ ರೆಸಾರ್ಟ್‌ನ ವ್ಯವಸ್ಥಾಪಕ ದೂರು ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲೆಯ ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಘಟನೆ ಸಂಬಂಧ ಮಾಹಿತಿ ಕಲೆ ಹಾಕಿದರು. ಈ ವೇಳೆ ರೆಸಾರ್ಟ್‌ಗೆ ಬೆಳಗ್ಗೆ 11ರ ಸಮಯದಲ್ಲಿ ವ್ಯಕ್ತಿಯೊಬ್ಬರು ಬಂದು ಹೋಗಿರುವುದು ತಿಳಿದು ಆತನು ಬಂದಿದ್ದ ಕಾರಿನ ನಂಬರ್, ಹಾಗೂ ಅಪಹರಣಕ್ಕೆ ಒಳಗಾದ ನಿಶಾಂತ್ ಅವರ ಮೊಬೈಲ್ ಟವರ್‌ನ ಲೊಕೇಷನ್, ಆರೋಪಿಗಳ ಕಾರು ಟೋಲ್‌ಗಳನ್ನು ದಾಟಿ ಹೋಗಿರುವ ಮಾಹಿತಿ ಆಧಾರದಡಿ ತನಿಖೆ ನಡೆಸಲಾಯಿತು ಎಂದು ವಿವರಿಸಿದರು.

ಅಂತಿಮವಾಗಿ ಆರೋಪಿಗಳು ನಿಶಾಂತ್ ಕುಟುಂಬವನ್ನು ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಹೊನ್ನಹಳ್ಳಿ ಗ್ರಾಮದ ತೋಟದ ಮನೆಯೊಂದರಲ್ಲಿ ಬಚ್ಚಿಟ್ಟಿರುವುದು ಖಚಿತಪಡಿಸಿಕೊಂಡು ದಾಳಿ ನಡೆಸಿ ನಿಶಾಂತ್ ಕುಟುಂಬವನ್ನು ರಕ್ಷಿಸಿ, ನಾಲ್ವರು ಆರೋಪಿಗಳನ್ನು ಬಂಧಿಸಲಾಯಿತು ಎಂದರು.

ಹಣಕಾಸಿನ ವಿಚಾರವಾಗಿ ಈ ಅಪಹರಣವನ್ನು ಮಾಡಲಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಸಂಬಂಧ ತನಿಖೆ ಪ್ರಗತಿಯಲ್ಲಿದ್ದು, ತನಿಖೆ ಪೂರ್ಣಗೊಂಡ ನಂತರ ಅಪಹರಣಕ್ಕೆ ನಿಖರ ಕಾರಣ ತಿಳಿಯಲಿದೆ ಎಂದು ಮಾಹಿತಿ ನೀಡಿದರು.


ಪ್ರಕರಣವನ್ನು ಯಶಸ್ವಿಯಾಗಿ ಭೇದಿಸುವಲ್ಲಿ ಕಾರಣರಾದ ಅಧಿಕಾರಿಗಳು, ಸಿಬ್ಬಂದಿಗಳು, ತಾಂತ್ರಿ ವಿಭಾಗ, ಬೆರಳಚ್ಚು ವಿಭಾಗದವರನ್ನು ಇದೇ ವೇಳೆ ಎಸ್‌ಪಿ ಕವಿತಾ ಅವರು ಪ್ರಶಂಸಿಸಿದರು.

ಇಸ್ಪೀಟ್ ಅಡ್ಡೆ ಮೇಲೆ ದಾಳಿ: 6 ಜನರ ಬಂಧನ

ಯಳಂದೂರು, ಮಾ.4– ತಾಲೂಕಿನ ಯರಿಯೂರು ಗ್ರಾಮದಿಂದ ಮಲ್ಲಿಗೆಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಕಾಲುವೆ ರಸ್ತೆಯ ಬಳಿ ಇರುವ ರಘು ಎಂಬುವರ ಕಬ್ಬಿನ ಗದ್ದೆ ಬಳಿ ಭಾನುವಾರ ರಾತ್ರಿ ಜೂಜಾಟದಲ್ಲಿ ತೊಡಗಿದ್ದ ಗುಂಪಿನ ಮೇಲೆ ಪೊಲೀಸರು ದಾಳಿ ನಡೆಸಿ 6 ಜನರನ್ನು ಬಂಧಿಸಿ ಹಣವನ್ನು ವಶಪಡಿಸಿಕೊಂಡಿರುವ ಘಟನೆ ಜರುಗಿದೆ. ಜೂಜಾಟ ಆಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ಪೇದೆಗಳಾದ ಕೆ.ಪಿ. ನಾಗೇಂದ್ರ ಶುಕ್ರನಾಯಕ, ಉಸ್ಮಾನ್, ಬಸವರಾಜು, ಶಿವಕುಮಾರ್, ದರ್ಶನ್ ನೇತೃತ್ವದ ಪೊಲೀಸರ ತಂಡ ದಾಳಿ ನಡೆಸಿದೆ. ಪಣಕ್ಕಿಟ್ಟಿದ್ದ 73,530 ರೂ. ಹಾಗೂ ಜೂಜಾಟದಲ್ಲಿ ತೊಡಗಿದ್ದ ಯರಿಯೂರು ಗ್ರಾಮದ ವೈ.ಬಿ. ಮಹೇಶ, ಮಂಜುನಾಥ್, ಬಸವಶೆಟ್ಟಿ, ಬಳೇಪೇಟೆ ಬಸವರಾಜು, ಹೊನ್ನೂರು ಗ್ರಾಮದ ಮನೋಜ್, ಶಿವಕುಮಾರ್ ಎಂಬುವರನ್ನು ಬಂಧಿಸಲಾಗಿದ್ದು ದೂರು ದಾಖಲಿಸಿ, ಮುಂದಿನ ಕ್ರಮ ವಹಿಸಲಾಗಿದೆ.

ರೈತರ ಹಲವಾರು ಸಮಸ್ಯೆ ನಿವಾರಣೆಗೆ ಸಂಘಟಿತ ಹೋರಾಟ ಅಗತ್ಯ

ಮರಿಯಾಲ ಮುರುಘರಾಜೇಂದ್ರ ಮಠದ ಇಮ್ಮಡಿ ಮುರುಘಾಶ್ರೀ ಅಭಿಮತ


ಮರಿಯಾಲದಲ್ಲಿ ರಾಜ್ಯ ರೈತಸಂಘ ನಾಮಫಲಕ ಅನಾವರಣ ಮಾಡಲಾಯಿತು.

ಚಾಮರಾಜನಗರ, ಮಾ.4– ದೇಶದ 140 ಕೋಟಿಗೂ ಹೆಚ್ಚು ಜನರಿಗೆ ಅನ್ನ ನೀಡುತ್ತಿರುವ ಅನ್ನದಾತನು ಬೆಳೆದ ಬೆಳೆಗಳಿಗೆ ಆಳುವ ಸರ್ಕಾರಗಳು ವೈಜ್ಞಾನಿಕ ನಿಗದಿತ ದರ ನೀಡುವ ಮಹತ್ವದ ಕಾರ್ಯಕ್ಕೆ ಮುಂದಾಗಬೇಕು ಎಂದು ಮರಿಯಾಲ ಮುರುಘರಾಜೇಂದ್ರಮಠದ ಮಠಾಧೀಶರಾದ ಇಮ್ಮಡಿಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಮರಿಯಾಲ ಗ್ರಾಮದಲ್ಲಿ ನಡೆದ ರಾಜ್ಯ ರೈತ ಸಂಘದ ಗ್ರಾಮಘಟಕದ ನಾಮಫಲಕ ಅನಾವರಣ ಮಾಡಿ ಮಾತನಾಡಿದರು. ಎಷ್ಟೇ ತಂತ್ರಜ್ಞಾನ ಬೆಳೆದರೂ, ರೈತರು ಬೆಳೆದ ಅನ್ನವನ್ನು ಊಟಮಾಡಬೇಕು, ಒಂದು ಗುಂಡುಪಿನ್ನಿಗೆ ಇಂತಿಷ್ಟು ಬೆಲೆ ಎಂದು ನಿಗದಿ ಮಾಡಲಾಗಿರುತ್ತದೆ ಆದರೆ ರೈತರು ಕಷ್ಟಪಟ್ಟು ಬೆಳೆದ ಬೆಳೆಗಳಿಗೆ ಮಾತ್ರ ನಿಗದಿತ ದರ ನಿಗದಿ ಮಾಡದಿರುವುದು ಬೇಸರದ ಸಂಗತಿ ಎಂದರು.

ಯಾವುದೇ ಸಮಸ್ಯೆ ಪರಿಹಾರವಾಗಬೇಕಾದರೆ ಸಂಘಟನಾತ್ಮಕ ಹೋರಾಟದ ಮನೋಭಾವ ಎಲ್ಲರಲ್ಲೂ ಬರಬೇಕು, ಹಸಿರು ಟವಲ್ ದೀಕ್ಷೆ ತೊಟ್ಟಿರುವ ಗ್ರಾಮದ ಯುವಕರು ಚಳವಳಿಯಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಸಮಸ್ಯೆ ಈಡೇರಿಸಿಕೊಳ್ಳಲು ಬದ್ಧರಾಗಬೇಕು ಎಂದರು.

ರಾಜ್ಯ ರೈತ ಸಂಘದ ಉಪಾಧ್ಯಕ್ಷ ಎ.ಎಂ.ಮಹೇಶ್ ಪ್ರಭು ಮಾತನಾಡಿ, ಸ್ವಾತಂತ್ರ್ಯಪೂರ್ವದಲ್ಲಿ ದೇಶದ ಜನತೆಗೆ ಆಹಾರದ ಕೊರತೆಯಿತ್ತು. ಬೇರೆ ದೇಶಗಳಿಂದ ಆಹಾರಧಾನ್ಯ, ಎಣ್ಣೆಕಾಳುಗಳನ್ನು ಆಮದುಮಾಡಿಕೊಳ್ಳುತ್ತಿತ್ತು, ಇಂದು ದೇಶದ ಪರಿಸ್ಥಿತಿಯೇ ಬದಲಾಗಿದ್ದು, ದೇಶದ 145 ಕೋಟಿ ಜನಸಂಖ್ಯೆಗೆ ಸಾಕಾಗಿ, ಉಳಿದ ಧಾನ್ಯಗಳನ್ನು ಬೇರೆದೇಶಕ್ಕೂ ರಫ್ತು ಮಾಡುತ್ತಿದ್ದೇವೆ. ಕೃಷಿಕ್ಷೇತ್ರ ಹಿಂದುಳಿದಿಲ್ಲ. ಕೃಷಿಕರು ಮಾತ್ರ ಹಿಂದುಳಿದಿದ್ದೇವೆ. ಇದಕ್ಕೆ ಕಾರಣ ಸರ್ಕಾರದ ಅವೈಜ್ಞಾನಿಕ ಕೃಷಿನೀತಿಗಳು ಎಂದು ವಿಷಾದಿಸಿದರು.

ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಜ್ಯೋತಿಗೌಡನಪುರ ಸಿದ್ದರಾಜು, ರಾಜ್ಯ ಕಾಯಂ ಆಹ್ವಾನಿತ ಸದಸ್ಯರಾದ ಹೆಬ್ಬಸೂರು ಬಸವಣ್ಣ, ಹೆಗ್ಗವಾಡಿಪುರಮಹೇಶ್ ಕುಮಾರ್, ಭಾಸ್ಕರ್, ಯಶವಂತ್ , ಮರಿಯಾಲ ಗ್ರಾಮದ ರೈತರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಬಾಯಿ ಚಪ್ಪರಿಸುವ ಟೊಮೆಟೊ ಸಾಸ್‌ನಲ್ಲಿ ಅಪಾಯಕಾರಿ ರಾಸಾಯನಿಕ

ಚಿಪ್ಸ್‌ನಲ್ಲೂ ಕಲಬೆರಕೆ: ಆಹಾರ ಸುರಕ್ಷತಾ ಇಲಾಖೆ ವರದಿಯಲ್ಲಿ ದೃಢ





ಬೆಂಗಳೂರು: ಇಡ್ಲಿ ತಯಾರಿಕೆಗೆ ಬಳಸುವ ಪ್ಲಾಸ್ಟಿಕ್, ಬಟಾಣಿ ಹಾಗೂ ಕಲ್ಲಂಗಡಿಗೆ ಬಳಸುವ ಕೃತಕ ಬಣ್ಣದಲ್ಲಿ ಆರೋಗ್ಯಕ್ಕೆ ಹಾನಿಯುಂಟು ಮಾಡುವಂತಹ ಅಂಶಗಳು ಪತ್ತೆಯಾಗಿರುವುದು ಆಹಾರ ಸುರಕ್ಷತಾ ಇಲಾಖೆ ವರದಿಯಲ್ಲಿ ಬಹಿರಂಗವಾಗಿತ್ತು. ಇದೀಗ ಟೊಮೆಟೊ ಸಾಸ್‌ನಲ್ಲೂ ಅಪಾಯಕಾರಿ ರಾಸಾಯನಿಕವಿರುವ ಆತಂಕದ ಸುದ್ದಿ ಇದೆ.

ಆಹಾರ ಪ್ರಿಯರು ಬಾಯಿ ಚಪ್ಪರಿಸಿ ಸವಿಯುವ ಟೊಮೆಟೊ ಸಾಸ್‌ಗೆ ಅಪಾಯಕಾರಿ ರಾಸಾಯನಿಕ ಬಳಸುತ್ತಿರುವುದು ಆಹಾರ ಸುರಕ್ಷತಾ ಇಲಾಖೆ ವರದಿಯಲ್ಲಿ ದೃಢವಾಗಿದೆ. ಇದು ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತದೆ ಎಂದು ವರದಿ ಹೇಳಿದೆ.


ವಿವಿಧ ಆಹಾರ ಪದಾರ್ಥಗಳಲ್ಲಿ ರಾಸಾಯನಿಕ ಬಳಕೆಯಾಗುತ್ತಿರುವ ಆರೋಪ ಕೇಳಿಬಂದ ಬೆನ್ನಲ್ಲೇ ಆಹಾರ ಸುರಕ್ಷತಾ ಇಲಾಖೆ ಟೊಮೆಟೊ ಸಾಸ್ ತಪಾಸಣೆಗೂ ಮುಂದಾಗಿತ್ತು. ಕಳೆದ ಫೆಬ್ರವರಿಯಲ್ಲಿ ಟೊಮೆಟೊ ಸಾಸ್ ಮಾದರಿಗಳನ್ನ ಪಡೆದು ಪ್ರಯೋಗಾಲಯಕ್ಕೆ ಕಳುಹಿಸಿತ್ತು. ಇದೀಗ ವರದಿ ಅಧಿಕಾರಿಗಳ ಕೈ ಸೇರಿದ್ದು, ವರದಿಯಲ್ಲಿ ಅನ್‌ಸೇಫ್ ಅಂತ ಬಂದಿರುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಸುದ್ದಿ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಸದ್ಯ ಪ್ರಯೋಗಾಲಯಕ್ಕೆ ಕಳುಹಿಸಿದ್ದ ಟೊಮೆಟೊ ಸಾಸ್‌ಗಳಲ್ಲಿ ಸೋಡಿಯಂ ಬೆಂಜೊಯೇಟ್ ಎನ್ನುವ ಹಾನಿಕಾರಕ ರಾಸಾಯನಿಕಗಳನ್ನು ಬಳಸಲಾಗಿತ್ತು. ಇದರಲ್ಲಿ ಉಪ್ಪಿನ ಅಂಶ ಅಧಿಕ ಪ್ರಮಾಣದಲ್ಲಿರುತ್ತದೆ. ಜೊತೆಗೆ ಟೊಮೆಟೊ ಸಾಸ್ ಬ್ರೈಟ್ ಮತ್ತು ರೆಡ್ ಆಗಿ ಕಾಣಿಸಲು ಕೃತಕ ಕಲರ್ ಬಳಸಲಾಗುತ್ತದೆ. ಈ ಸಾಸ್‌ನಲ್ಲಿ ರಾಸಾಯನಿಕ ಬಳಕೆಯಿಂದ ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟೊಮೆಟೊ ಸಾಸ್‌ನಲ್ಲಿ ರಾಸಾಯನಿಕ ಬಳಕೆಯಿಂದ ಉಪ್ಪಿನ ಪ್ರಮಾಣ ಅಧಿಕವಾಗಿರುತ್ತದೆ. ಈ ಸಾಸ್ ತಿನ್ನೋದ್ರಿಂದ ರಕ್ತದೊತ್ತಡ ಅಧಿಕವಾಗುತ್ತದೆ, ನಿಶಕ್ತಿಗೆ ಕಾರಣವಾಗುತ್ತದೆ. ಮಕ್ಕಳಲ್ಲಿ ತಾಳ್ಮೆ ಮತ್ತು ಶಾಂತ ಮನಸ್ಥಿತಿ ಕಡಿಮೆಯಾಗುತ್ತದೆ. ನಿಯಂತ್ರಣ ಕಳೆದುಕೊಳ್ಳುವ ಸಾಧ್ಯತೆಯೂ ಇರುತ್ತದೆ ಎಂದು ಮೂಲಗಳಿಂದ ತಿಳಿದುಬಂದಿದೆ.

ಟೊಮೆಟೊ ಸಾಸ್ ಅಷ್ಟೇ ಅಲ್ಲ ಬೆಲ್ಲ, ಚಿಪ್ಸ್, ಫ್ರೈ ಬಟಾಣಿ ಪದಾರ್ಥಗಳಿಗೂ ಕೂಡ ಕಲಬೆರಕೆ ಮಾಡುತ್ತಿರುವುದು ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳ ತಪಾಸಣೆ ವೇಳೆ ಬಯಲಾಗಿದೆ

ಮೊಮ್ಮಗ ಮಾಡಿದ ಸಾಲದಿಂದ ಹರಾಜಿಗೆ ಬಂತು ಶಿವಾಜಿ ಗಣೇಶನ್ ಮನೆ



ಚೆನ್ನೈ: ಶಿವಾಜಿ ಗಣೇಶನ್, ಭಾರತೀಯ ಚಿತ್ರರಂಗದ ಮೇರುನಟರಲ್ಲಿ ಒಬ್ಬರು. ತಮಿಳು ಚಿತ್ರರಂಗದ ದಂತಕತೆಯಾಗಿರುವ ಶಿವಾಜಿ ಗಣೇಶನ್, ತಮಿಳು ಚಿತ್ರರಂಗದ ಅತ್ಯಂತ ಶ್ರೀಮಂತ ನಟರಲ್ಲಿ ಒಬ್ಬರಾಗಿದ್ದವರು. ಆದರೆ ಈಗ ಅವರ ಮೊಮ್ಮಗ ಮಾಡಿದ ಸಾಲಕ್ಕೆ ಶಿವಾಜಿ ಗಣೇಶನ್ ನಿರ್ಮಿಸಿದ್ದ ಬೃಹತ್ ಮನೆ ಹರಾಜಿಗೆ ಬಂದಿದೆ. ಶಿವಾಜಿ ಗಣೇಶನ್ ಅವರಿಗೆ ಸೇರಿದ ಚೆನ್ನೈನ ಬೃಹತ್ ಮನೆಯ ಭಾಗವನ್ನು ಸಾರ್ವಜನಿಕವಾಗಿ ಹರಾಜು ಹಾಕುವಂತೆ ನ್ಯಾಯಾಲಯ ಆದೇಶ ನೀಡಿದೆ.

ಶಿವಾಜಿ ಗಣೇಶನ್ ಮೊಮ್ಮಗ ದುಶ್ಯಂತ್ ಮತ್ತು ಅವರ ಪತ್ನಿ ಅಭಿರಾಮಿ ಕೆಲ ವರ್ಷಗಳ ಹಿಂದೆ ಸಿನಿಮಾ ನಿರ್ಮಾಣಕ್ಕಾಗಿ ಖಾಸಗಿ ಫೈನಾನ್ಸ್ ಸಂಸ್ಥೆಯೊಂದರಿಂದ 3.74 ಕೋಟಿ ರೂಪಾಯಿ ಸಾಲ ಪಡೆದಿದ್ದರು. ಈ ಮೊತ್ತವನ್ನು 30% ಬಡ್ಡಿ ಸಮೇತ ತೀರಿಸುವುದಾಗಿ ಬರೆದುಕೊಟ್ಟಿದ್ದರು. ಆದರೆ ಪಡೆದುಕೊಂಡ ಸಾಲವನ್ನು ಸರಿಯಾದ ಸಮಯಕ್ಕೆ ತೀರಿಸಲಿಲ್ಲ.

ಫೈನಾನ್ಸ್ ಸಂಸ್ಥೆಯು ನ್ಯಾಯಾಲಯದ ಮೆಟ್ಟಿಲೇರಿತು. ವಿಚಾರಣೆ ನಡೆಸಿದ ನ್ಯಾಯಾಲಯವು ಬಡ್ಡಿ ಎಲ್ಲವೂ ಸೇರಿ 9.20 ಕೋಟಿ ರೂಪಾಯಿ ಹಣವನ್ನು ದುಶ್ಯಂತ್, ಫೈನ್ಯಾನ್ಸ್ ಸಂಸ್ಥೆಗೆ ನೀಡಬೇಕಿದೆ. ಸಾಲ ತೀರಿಸಲು ದುಶ್ಯಂತ್ ನಿರ್ಮಾಣ ಮಾಡುತ್ತಿರುವ ಸಿನಿಮಾದ ಎಲ್ಲ ಹಕ್ಕುಗಳನ್ನು ಫೈನ್ಯಾನ್ಸ್ ಸಂಸ್ಥೆಗೆ ಕೊಡಬೇಕು ಎಂದು ಆದೇಶ ಮಾಡಿತು. ಆದರೆ ಇದಕ್ಕೆ ಒಪ್ಪದ ದುಶ್ಯಂತ್, ಸಿನಿಮಾದ ನಿರ್ಮಾಣ ಇನ್ನೂ ಪೂರ್ಣವಾಗಿಲ್ಲ ಸಿನಿಮಾ ಪೂರ್ಣವಾಗದೆ ಹಕ್ಕು ನೀಡಲು ಆಗುವುದಿಲ್ಲ ಎಂದು ವಾದಿಸಿದರು.

ಬಳಿಕ ಫೈನ್ಯಾನ್ಸ್ ಸಂಸ್ಥೆಯು ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದು, ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್, ದುಶ್ಯಂತ್ ಅಡಮಾನವಿಟ್ಟಿದ್ದ ಶಿವಾಜಿ ಗಣೇಶನ್ ಅವರಿಗೆ ಸೇರಿದ ಬೃಹತ್ ಮನೆಯ ಒಂದು ಭಾಗವನ್ನು ಸಾರ್ವಜನಿಕ ಹರಾಜಿಗೆ ಇರಿಸಿ, ಅದರಿಂದ ಬಂದ ಹಣವನ್ನು ಸಾಲಕ್ಕೆ ಮಜಾ ಮಾಡಿಕೊಳ್ಳುವಂತೆ ಆದೇಶ ನೀಡಿದೆ. ಮದ್ರಾಸ್ ಹೈಕೋರ್ಟ್ ಅನ್ನು ಪ್ರಶ್ನಿಸಿ ದುಶ್ಯಂತ್ ಅವರು ಯಾವುದೇ ಅರ್ಜಿ ಹಾಕಿಲ್ಲ, ಹಾಗಾಗಿ ಶಿವಾಜಿ ಗಣೇಶನ್ ಅವರ ಮನೆಯ ಹರಾಜು ಪಕ್ಕಾ ಎನ್ನಲಾಗುತ್ತಿದೆ.

ಅಭಿನಂದನೆ



ಕರ್ನಾಟಕ ಪಿಯು ಬೋರ್ಡ್‌ನ ವಿಶ್ರಾಂತ ನಿರ್ದೇಶಕ ಡಾ.ಹೆಚ್.ಎಮ್.ನಾಗರಾಜ್ ಅವರ 80ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಮೈಸೂರಿನ ಮಾಜಿ ಪೊಲೀಸ್ ಕಮಿಷನರ್ ಕೆ.ಟಿ.ಬಾಲಕೃಷ್ಣ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು, ಕೃಷ್ಣಪ್ಪ, ಜವರೇಗೌಡ ಇನ್ನಿತರರು ಅಭಿನಂದಿಸಿದರು.

ಹನಸೋಗೆಯಲ್ಲಿ ಶ್ರೀನಿವಾಸ ರಥೋತ್ಸವ




ಮೈಸೂರು,ಮಾ.4(ಆರ್‌ಕೆ)– ಸಾಲಿಗ್ರಾಮ ತಾಲೂಕು ಹನಸೋಗೆ ಗ್ರಾಮದಲ್ಲಿ ಶ್ರೀ ಶ್ರೀನಿವಾಸ ದೇವರ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಧಾರ್ಮಿಕ ದತ್ತಿ ಇಲಾಖೆಯು ಶ್ರೀ ಶ್ರೀನಿವಾಸ ಸೇವಾ ಸಮಿತಿ ಹಾಗೂ ಹನಸೋಗೆ ಗ್ರಾಮಸ್ಥರ ಸಹಯೋಗದೊಂದಿಗೆ ಬೆಳಗ್ಗೆ 11ರಿಂದ 12 ಗಂಟೆವರೆಗೆ ಕಾವೇರಿ ನದಿ ತೀರದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಭಕ್ತಿಭಾವಗಳಿಂದ ಶ್ರೀ ಶ್ರೀನಿವಾಸ ದೇವರ ಬ್ರಹ್ಮ ರಥೋತ್ಸವ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡು ಸ್ವಾಮಿಯ ರಥೋತ್ಸವವನ್ನು ಕಣ್ತುಂಬಿಕೊಂಡು ಭಕ್ತಿಪರವಶವಾದರು. ನಾಳೆ (ಮಾ.5) ಸ್ವಾಮಿಗೆ ಅಶ್ವರೂಪೋತ್ಸವ, ಶಯನೋತ್ಸವ, ಮಾ.6ರಂದು ಮಂಟಪೋತ್ಸವ, ರಾತ್ರಿ ಅಡ್ಡ ಪಲ್ಲಕ್ಕಿ ಉತ್ಸವ ತೆಪ್ಪೋತ್ಸವ, ಮಾ.7ರಂದು ಹೋಮ, ಹನುಮಂತೋತ್ಸವದ ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ.

ಮಾತೆ ಶಾರದಾದೇವಿಯವರ ಬದುಕು ಸರಳಾತಿ ಸರಳ

●ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ಸ್ವಾಮಿ ಮೋಕ್ಷಾತ್ಮನಂದಜೀ ಗುಣಗಾನ ●ಜೀವನ ಶಿಲ್ಪಿ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ



ಸ್ವಾಮಿ ಮೋಕ್ಷಾತ್ಮನಂದಜೀ ಪ್ರವಚನ ನೀಡುತ್ತಿರುವ ದೃಶ್ಯ

ಮೈಸೂರು, ಮಾ.4(ಎಸ್‌ಪಿಎನ್)– ನೊಂದವರ ಪಾಲಿನ ಅಮ್ಮ, ಭಕ್ತರ ಪಾಲಿನ ಜಗನ್ಮಾತೆ. ಸರ್ವರ ಕಷ್ಟಗಳನ್ನು ತನ್ನ ಒಡಲಿನಲ್ಲಿ ಹಾಕಿಕೊಂಡು ಸರ್ವರಿಗೂ ಒಳಿತು ಬಯಸುತ್ತಿದ್ದ ಶಾರದಾದೇವಿ ಮಾತೆಯವರ ಬದುಕು ಸರಳಾತಿ ಸರಳವಾಗಿತ್ತು ಎಂದು ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ಸ್ವಾಮಿ ಮೋಕ್ಷಾತ್ಮನಂದಜೀ ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿ ಶ್ರೀ ರಾಮಕೃಷ್ಣ ಆಶ್ರಮದ ಆವರಣದಲ್ಲಿ ಆಶ್ರಮದ ವಾರ್ಷಿಕೋತ್ಸವ ಹಾಗೂ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ 190ನೇ ಜನ್ಮ ದಿನೋತ್ಸವದ ಪ್ರಯುಕ್ತ 'ಜೀವನ ಶಿಲ್ಪಿ – ಶ್ರೀಮಾತೆ ಶಾರದಾದೇವಿ' ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕನ್ನಡ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನೊಂದವರ ಪಾಲಿನ ಪಾಪನಾಶಿನಿ, ಅಸಂಖ್ಯಾತ ಭಕ್ತರಿಂದ ಪೂಜಿಸಲ್ಪಟ್ಟವರು, ಯುಗಧರ್ಮ ರಕ್ಷಕರು, ದಯಾಸ್ವರೂಪಿಯೂ ಆದ ಶ್ರೀಮಾತೆ ಶಾರದಾದೇವಿ ಅವರಿಗೆ ನಿತ್ಯವೂ ನಮಿಸಿದ್ದೇನೆ ಎಂದಿರುವ ಸ್ವಾಮಿ ಅಭೇದಾನಂದಜೀ ಅವರಿಗಿಂತ ನಾವು ಇನ್ನೇನು ಹೇಳಲು ಸಾಧ್ಯ ಎಂದರಲ್ಲದೆ, ಭಗವಾನ್ ಶ್ರೀರಾಮಕೃಷ್ಣ ಪರಹಂಸರ ನೇರ ಶಿಷ್ಯರಾದ ಸ್ವಾಮಿ ಅಭೇದಾನಂದಜೀ ಅವರು,ಮಾತೆ ಶ್ರೀಶಾರದಾದೇವಿಯವರ ಸಮಗ್ರ ಜೀವನ ಕುರಿತು ನೀಡಿರುವ ಉಪನ್ಯಾಸಗಳನ್ನು ಎಲ್ಲರೂ ಕೇಳಬೇಕು ಎಂದು ಸಲಹೆ ನೀಡಿದರು.

> **ಸ್ವಾಮಿ ಶಾಂಭವಾನಂದಜೀ ಸ್ಮರಣಾರ್ಥ ಉಪನ್ಯಾಸ**
> ಬುಧವಾರ ಸಂಜೆ 5.30ರಿಂದ 5.45ರವರೆಗೆ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರಿಗೆ ಸಂಧ್ಯಾರತಿ. ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯ ನಿವೃತ್ತ ಪ್ರಾಂಶುಪಾಲ ಎಸ್.ಬಾಲಾಜಿ ಸಂಜೆ 5.45ರಿಂದ 6.45ರವರೆಗೆ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ. ನಂತರ ಮೈಸೂರು ವಿವೇಕ ವಿದ್ಯಾ ವಾಹಿನಿ ಟ್ರಸ್ಟ್‌ನ ಶ್ರೀ ನಿತ್ಯಾನಂದ ವಿವೇಕವಂಶಿ ಅವರಿಂದ ವಿಶೇಷ ಉಪನ್ಯಾಸ ಇರಲಿದೆ.

ಭರತ ಭೂಮಿಯಲ್ಲಿ ಸ್ತ್ರೀಗೆ ಅತ್ಯಂತ ಪವಿತ್ರ ಸ್ಥಾನ ನೀಡಲಾಗಿದೆ. ಸಹಸ್ರಾರು ವರ್ಷಗಳಿಂದ ಮಹಿಳೆಗೆ ಶಕ್ತಿ ದೇವತೆಯ ಸ್ಥಾನ ನೀಡಲಾಗಿದೆ. ಅದರಲ್ಲಿ ಮಾತೆ ಶಾರದಾದೇವಿಯವರಿಗೆ ಭಕ್ತ ಸಮೂಹದಲ್ಲಿ 'ಸೌಮ್ಯ ಸ್ವರೂಪದ ದೇವತೆ' ಎಂದೆ ಪ್ರಸಿದ್ಧೆ ಪಡೆದಿದ್ದರು. ಪುರಾಣಗಳಲ್ಲಿ ಬರುವ ಸೀತಾಮಾತೆ, ರುಕ್ಮಿಣಿದೇವಿ, ಸತಿ ಸಾವಿತ್ರಿಯರಲ್ಲಿ ಇದ್ದಂತಹ ಪಾವಿತ್ರತೆ. ಮಾತೆ ಶಾರದಾದೇವಿ ಅವರಲ್ಲೂ ಕಾಣಬಹುದಿತ್ತು. ಅವರ ಉಡುಗೆ–ತೊಡುಗೆ, ಜೀವನ ಕ್ರಮ ಎಲ್ಲವೂ ಸರಳವಾಗಿತ್ತು. ನಿತ್ಯ ಭಕ್ತರ ಕಷ್ಟದಲ್ಲಿ ಭಾಗಿಯಾಗುವುದೇ ನನ್ನ ಜೀವನದ ಪರಮಧ್ಯೇಯ ಎಂದು ಜೀವಿತಾವಧಿಯಲ್ಲಿ ಹೇಳಿದ್ದ ಪ್ರಸಂಗಗಳನ್ನು ಮೆಲುಕು ಹಾಕಿದರು.

ಒಮ್ಮೆ ಶ್ರೀ ರಾಮಕೃಷ್ಣ ಪರಮಹಂಸರು ದಕ್ಷಿಣೇಶ್ವರದ ಪವಿತ್ರ ಕೊಠಡಿಯಲ್ಲಿ ಇಡೀ ಜಗತ್ತೇ ನಿಬ್ಬೆರಗಾಗುವಂತೆ ಶ್ರೀ ಶಾರದಾದೇವಿಯನ್ನು ಪೂಜಿಸಿ, ಜಗಜ್ಜನನಿಯ ಚಿನ್ಮಯ ರೂಪದಲ್ಲಿ ಅಲಂಕರಿಸಿ, ತಾಯಿ ಶ್ರೀ ಶಾರದಾದೇವಿಯವರಲ್ಲಿ ಕಂಡಿದ್ದರು. ಆ ದಿನ ಪವಿತ್ರವಾದ ಫಲಾಹಾರಿಣಿ, ಕಾಳಿಮಾತೆ ಪೂಜಾ ದಿನ. ಅತ್ತ ದಕ್ಷಿಣೇಶ್ವರದ ಭವತಾರಿಣಿ ಮಂದಿರದಲ್ಲಿ ಮೃಣ್ಮಯಿ ಮೂರ್ತಿಗೆ ಪೂಜಾ ವಿಧಿವಿಧಾನಗಳು ನೆರವೇರುತ್ತಿದ್ದರೆ, ಇತ್ತ ದೇವಾಲಯದ ಪ್ರಾಂಗಣದಲ್ಲಿ ಈ ಜಗತ್ತು ಎಂದೂ ಊಹಿಸದ ರೀತಿಯಲ್ಲಿ ಮಾತೆ ಶ್ರೀ ಶಾರದಾದೇವಿಯವರನ್ನು ಆರಾಧಿಸುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ಸರಳತೆಯ ಸಾಕಾರ ಮೂರ್ತಿ: ಶ್ರೀ ಶಾರದಾದೇವಿಯವರ ಬದುಕು 'ಜೀವನ ಗಂಗೆ'ಯಂತಿತ್ತು ಹತ್ತಿರದಿಂದ ಬಲ್ಲವರಿಗೆ ಶ್ರೀಮಾತೆಯವರ ಬದುಕು ಯಾವುದೇ ಆಡಂಬರ, ತೋರ್ಪಡಿಕೆ, ಬಿಗುಮಾನ ಬದಿಗಿಟ್ಟು ಸದಾ ಅಧ್ಯಾತ್ಮ ಜೀವನದಲ್ಲಿ ಕಠೋರ ಸಾಧನೆ, ತಪಸ್ಸು, ಇತ್ಯಾದಿಗಳಲ್ಲಿ ನಿರತರಾಗಿದ್ದರು. ಭಕ್ತರು ಇವರನ್ನು ಪ್ರೀತಿ ಯಿಂದ 'ಅಮ್ಮ' ಎಂದು ಕರೆಯುತ್ತಿದ್ದರು. ಈ ಕೂಗಿಗೆ ಅವರ ಹೃದಯ ತಕ್ಷಣ ಸ್ಪಂದಿಸುತ್ತಿತ್ತು ಎಂದರು. ಈ ವೇಳೆ ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಸೇರಿದಂತೆ ಭಕ್ತರು ಹಾಜರಿದ್ದರು. ನಂತರ ಬೆಂಗಳೂರಿನ ಹಿಂದೂಸ್ತಾನಿ ಗಾಯಕ ಸುರಮಣಿ ಶ್ರೀ ದತ್ತಾತ್ರೇಯ ವೇಲಣಕರ್ ಮತ್ತು ತಂಡದಿಂದ 'ದಿವ್ಯತ್ರಯರ' ಗಾನ ಕೀರ್ತನೆ ಹಾಡಿ ಭಕ್ತರ ಮನಗೆದ್ದರು.

'ಕಾಜೂರು ಕರ್ಣ'ನಿಗೆ ಯಶಸ್ವಿ ಶಸ್ತ್ರಚಿಕಿತ್ಸೆ

ಕಾಲಿನಲ್ಲಿದ್ದ ಸೀಸದ ಗುಂಡುಗಳು ಆಪರೇಷನ್ ಮೂಲಕ ಹೊರಕ್ಕೆ



ಮಡಿಕೇರಿ, ಮಾ.4– ಮೈ ತುಂಬ ಗುಂಡೇಟು ತಿಂದು ಕಳೆದ 1 ತಿಂಗಳ ಹಿಂದೆಯಷ್ಟೇ ಸೋಮವಾರಪೇಟೆ ವ್ಯಾಪ್ತಿಯ ಕಾಜೂರು ಗ್ರಾಮದಲ್ಲಿ ಸೆರೆ ಹಿಡಿಯಲ್ಪಟ್ಟಿದ್ದ 'ಕಾಜೂರು ಕರ್ಣ'ನ ಎರಡು ಕಾಲುಗಳಿಗೆ ಹೊಕ್ಕಿದ್ದ ಸೀಸದ ಮದ್ದು ಗುಂಡುಗಳನ್ನು ಅರಣ್ಯ ಇಲಾಖೆ ವೈದ್ಯಾಧಿಕಾರಿಗಳು ಹೊರತೆಗೆದಿದ್ದಾರೆ.

ಸೆರೆ ಹಿಡಿಯಲ್ಪಟ್ಟಿದ್ದ ದಿನದಿಂದಲೇ ದುಬಾರೆ ಸಾಕಾನೆ ಶಿಬಿರದ ಕ್ರಾಲ್‌ಗೆ ಬಿಡಲಾಗಿದ್ದ ಕಾಜೂರು ಕರ್ಣ ತನ್ನ ಕಾಲುಗಳಿಗೆ ಹೊಕ್ಕಿದ್ದ ಗುಂಡುಗಳಿಂದ ಕಾಲಿನ ಸ್ವಾಧೀನ ಇಲ್ಲದೇ ರೋದಿಸುತ್ತಿದ್ದ. ಈ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ವೈದ್ಯರು ಸಾಕಾನೆ ಶಿಬಿರದ ಅನೆ ಕ್ರಾಲ್ ಒಳಗೆಯೇ ಕಾಡಾನೆಗೆ ಚಿಕಿತ್ಸೆ ನೀಡುತ್ತಿದ್ದರು. ಗುಂಡೇಟಿನಿಂದ ಕರ್ಣನ ಹಿಂಬದಿಯ ಕಾಲಿನಲ್ಲಿ ದೊಡ್ಡ ಗಾಯವಾಗಿ ಆ ಭಾಗ ಕೊಳೆಯುವ ಹಂತ ತಲುಪಿತ್ತು. ಇದನ್ನು ಗಮನಿಸಿ ಸೂಕ್ತ ಶಸ್ತ್ರಚಿಕಿತ್ಸೆ ನಡೆಸಿ ಕಾಲಿಗೆ ಹಾರಿಸಲಾಗಿದ್ದ ಎರಡು ಸೀಸದ ಮದ್ದು ಗುಂಡುಗಳನ್ನು ವೈದ್ಯರು ಹೊರತೆಗೆದಿದ್ದಾರೆ. ಇದೀಗ ಕಾಜೂರು ಕರ್ಣ ನೋವಿನಿಂದ ತುಸು ಚೇತರಿಸಿಕೊಳ್ಳುತ್ತಿದ್ದು, ಕ್ರಾಲ್‌ನಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.

ಸೋಮವಾರಪೇಟೆ ತಾಲೂಕು ವ್ಯಾಪ್ತಿಯ ಕೃಷಿಕರು ಮತ್ತು ಬೆಳೆಗಾರರ ಪಾಲಿಗೆ ನುಂಗಲಾಗದ ತುತ್ತಾಗಿದ್ದ 'ಕಾಜೂರು ಕರ್ಣ' ಎಂಬ ಹೆಸರಿನ 40 ವರ್ಷ ಪ್ರಾಯದ ಒಂಟಿ ಸಲಗವನ್ನು ಕಳೆದ 1 ತಿಂಗಳ ಹಿಂದೆ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿತ್ತು. ಕಳೆದ 1 ವರ್ಷಗಳ ಹಿಂದೆಯೇ ಈ ಕಾಡಾನೆ ಸೆರೆಗೆ ಅನುಮತಿ ದೊರಕಿತ್ತಾದರೂ, ಕಾಜೂರು ಕರ್ಣ ಅರಣ್ಯ ಇಲಾಖೆಯ ಕಾರ್ಯಾಚರಣೆ ವೇಳೆ ಚಾಣಾಕ್ಷತನದಿಂದ ತಪ್ಪಿಸಿಕೊಂಡು ಸುತ್ತಮುತ್ತಲಿನ ಅರಣ್ಯ ಪ್ರದೇಶ ಸಹಿತ ಕಾಫಿ ತೋಟಗಳಲ್ಲಿ ಬಿಡಾರ ಹೂಡುತ್ತಿತ್ತು.

ಅರಣ್ಯದಲ್ಲಿ ವಾಸ್ತವ್ಯ ಹೂಡಿದ್ದ ಕಾಜೂರು ಕರ್ಣನನ್ನು ಗುರುತಿಸಿದ ಅರಣ್ಯ ಸಿಬ್ಬಂದಿಗಳು ಫೆ.1ರ ಬೆಳಗ್ಗೆ ಕಾರ್ಯಾಚರಣೆ ನಡೆಸಿದ್ದರು. ಅಂದು ಬೆಳಗ್ಗೆ 7.45ಕ್ಕೆ ಕಾಜೂರು ಜಂಕ್ಷನ್ ಬಳಿ ಬಂದ ಕಾಜೂರು ಕರ್ಣ ಅರಣ್ಯ ಇಲಾಖೆಯ ಜೀಪನ್ನು ಕಂಡ ತಕ್ಷಣ ದಾಳಿಗೆ ಮುಂದಾಗಿದ್ದ. ಕೂಡಲೆ ಶಾರ್ಪ್ ಶೂಟರ್ ರಂಜನ್ ಅರವಳಿಕೆ ಚುಚ್ಚುಮದ್ದನ್ನು ಕಾಡಾನೆಗೆ ಶೂಟ್ ಮಾಡಿದ್ದರು. ಬಳಿಕ ದುಬಾರೆಯ ಸಾಕಾನೆ ಶಿಬಿರದ ಹರ್ಷ, ಪ್ರಶಾಂತ, ಸುಗ್ರೀವಾ, ಧನಂಜಯ ಮತ್ತು ಜಯಮಾರ್ತಂಡ ಹೆಸರಿನ ಸಾಕಾನೆಗಳು ಕಾಜೂರು ಕರ್ಣನನ್ನು ಸೆರೆ ಹಿಡಿದು ದುಬಾರೆ ಸಾಕಾನೆ ಶಿಬಿರಕ್ಕೆ ಸ್ಥಳಾಂತರಿಸಿದ್ದವು.

ವಿಧಾನಸಭೆಯಲ್ಲಿ ಅಕ್ರಮ ಮದ್ಯ ಮಾರಾಟ ಸದ್ದು



ಬೆಂಗಳೂರು: ವಿಧಾನಸಭೆಯಲ್ಲಿ ಮಂಗಳವಾರ ಅಕ್ರಮ ಮದ್ಯ ಮಾರಾಟ ವಿಚಾರ ಪ್ರಸ್ತಾಪಿಸಿದ ಕಾಂಗ್ರೆಸ್ ಶಾಸಕ ಮಹಾಂತೇಶ್ ಕೌಜಲಗಿ ಅವರು ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದೆ, ಇದರಿಂದ ವಿದ್ಯಾರ್ಥಿಗಳು ಮದ್ಯ ವ್ಯಸನಿಗಳಾಗುತ್ತಿದ್ದಾರೆ ಎಂದು ದೂರಿದರು.

ಇಂದು ಸದನದಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಕ್ಷೇತ್ರಕ್ಕೆ ಹೋದಾಗ ತಾಯಂದಿರು ಕೈ ಮುಗಿದು ಮನವಿ ಮಾಡುತ್ತಿದ್ದಾರೆ. ರಸ್ತೆಯ ಅಪಘಾತಕ್ಕೂ ಅಕ್ರಮ ಮದ್ಯ ಮಾರಾಟವೇ ಕಾರಣವಾಗಿದೆ. ಇದು ನನ್ನ ಕ್ಷೇತ್ರದಲ್ಲಿ ಒಂದೇ ಅಲ್ಲ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂದು ಪ್ರಶ್ನೆ ಮಾಡಿದರು.

ಇದಕ್ಕೆ ಉತ್ತರಿಸಿದ ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್, ಗ್ರಾಮಸಭೆಗಳನ್ನು ಮಾಡುತ್ತಿದ್ದೇವೆ. ಅಧಿಕಾರಿಗಳಿಗೂ ಸೂಚನೆ ನೀಡಿದ್ದೇನೆ. ಡಿಸಿ, ಎಸ್ಪಿಗಳ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚನೆ ಮಾಡಲಾಗಿದೆ. ಅಕ್ರಮ ಮದ್ಯ ಮಾರಾಟ ಕಂಡು ಬಂದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

ಅಬಕಾರಿ ಸಚಿವರ ಉತ್ತರಕ್ಕೆ ತೃಪ್ತರಾಗದ ಬಿಜೆಪಿ, ಜೆಡಿಎಸ್ ಶಾಸಕರು, ಸರ್ಕಾರವೇ ಮದ್ಯ ಮಾರಾಟ ಮಾಡಲು ಟಾರ್ಗೆಟ್ ನೀಡುತ್ತಿದೆ. ಅದಕ್ಕಾಗಿ ಹಳ್ಳಿಗಳಲ್ಲಿ ಮದ್ಯ ಮಾರಾಟ ಜಾಸ್ತಿಯಾಗಿದೆ ಎಂದ ಜೆಡಿಎಸ್‌ನ ಸುರೇಶ್‌ಬಾಬು ಆರೋಪ ಮಾಡಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಬಿಜೆಪಿ ಶಾಸಕ ಅರಗ ಜ್ಞಾನೇಂದ್ರ ಗ್ರಾಮೀಣ ಭಾಗದಲ್ಲಿ ಕಿರಾಣಿ ಅಂಗಡಿಗಳಲ್ಲೂ ಮದ್ಯವನ್ನು ಅವ್ಯಾಹತವಾಗಿ ಮಾರಲಾಗುತ್ತಿದೆ. ಹೇಗೋ ಎಲ್ಲಾ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟು ಬಿಡಿ. ಸರ್ಕಾರಕ್ಕೆ ಆದಾಯ ಜಾಸ್ತಿ ಆಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಚಿನ್ನ ಕಳ್ಳಸಾಗಣೆ ಆರೋಪ: ಸ್ಯಾಂಡಲ್‌ವುಡ್ ನಟಿ ರನ್ಯಾ ಪೊಲೀಸರ ವಶಕ್ಕೆ



ಬೆಂಗಳೂರು: ಅಕ್ರಮವಾಗಿ ಚಿನ್ನ ಸಾಗಾಟ ಮಾಡಿದ ಆರೋಪದ ಮೇಲೆ ಸ್ಯಾಂಡಲ್‌ವುಡ್ ನಟಿ ರನ್ಯಾ ರಾವ್ ಅವರನ್ನು ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆಂದು ತಿಳಿದುಬಂದಿದೆ.

ರನ್ಯಾ ಅವರು ದುಬೈನಿಂದ ಬೆಂಗಳೂರಿಗೆ ಮಾರ್ಚ್ 3ರ ರಾತ್ರಿ ಮರಳಿದ್ದು, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದಂತೆ ಏರ್‌ಪೋರ್ಟ್ ಕಸ್ಟಮ್ಸ್‌ನ ಡಿಆರ್‌ಐ ಅಧಿಕಾರಿಗಳು ರನ್ಯಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆಂದು ವರದಿಗಳಿವೆ. ವಿದೇಶದಿಂದ ಹೆಚ್ಚುವರಿ ಚಿನ್ನ ತಂದ ಆರೋಪ ರನ್ಯಾ ಅವರ ವಿರುದ್ಧ ಕೇಳಿಬಂದಿದೆ.

ಐಪಿಎಸ್ ಅಧಿಕಾರಿ ಪುತ್ರಿಯಾಗಿರುವ ರನ್ಯಾ, ಕನ್ನಡದ 'ಮಾಣಿಕ್ಯ' ಚಿತ್ರದಲ್ಲಿ ನಾಯಕಿ ನಟಿಯಾಗಿ ನಟಿಸಿದ್ದರು. ಈ ಚಿತ್ರದಲ್ಲಿ ಮಾನಸಾ ಹೆಸರಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇದಲ್ಲದೆ, ಕಾಲಿವುಡ್ ಚಿತ್ರದಲ್ಲೂ ನಟಿಸಿದ್ದಾರೆ.

ಕೆಪಿಎಸ್‌ಸಿ ಹಗರಣ: ಪೂರ್ವಭಾವಿ ಪರೀಕ್ಷೆಗೆ 60 ಲಕ್ಷ, ಮುಖ್ಯ ಪರೀಕ್ಷೆಗೆ 1 ಕೋಟಿ ನಿಗದಿ

ಓಎಂಆರ್ ಶೀಟ್‌ನಲ್ಲಿ ನಡೆಯುತ್ತಿರುವ ಅಕ್ರಮ, ಕನ್ನಡಿಗರಿಗೆ ಅನ್ಯಾಯ: ಆರ್. ಅಶೋಕ್

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಪ್ರತಿಯೊಂದಕ್ಕೂ ರೇಟ್ ಫಿಕ್ಸ್ ಆಗಿದೆ. ಪೂರ್ವಭಾವಿ ಪರೀಕ್ಷೆಗೆ 60 ಲಕ್ಷ ರೂ., ಮುಖ್ಯ ಪರೀಕ್ಷೆಗೆ 1 ಕೋಟಿ ರೂ. ನಿಗದಿ ಮಾಡಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ವಿಧಾನಸಭೆಯಲ್ಲಿ ಕೆಪಿಎಸ್‌ಸಿ ಹಗರಣದ ಕುರಿತು ಮಾತನಾಡಿದ ಅವರು, ಕೆಪಿಎಸ್‌ಸಿಯಲ್ಲಿ 14 ಸದಸ್ಯರಿದ್ದು, ಒಬ್ಬರಿಗೆ ಎರಡೂವರೆ ಲಕ್ಷ ರೂ. ವೇತನವಿದೆ. ಉಳಿದ ಸೌಲಭ್ಯಗಳು ಸೇರಿ 4 ಲಕ್ಷ ರೂ. ಆಗುತ್ತದೆ. ಕರ್ನಾಟಕದಲ್ಲಿ ಆರೂವರೆ ಕೋಟಿ ಜನರಿದ್ದಾರೆ. 20 ಕೋಟಿ ಜನರಿರುವ ಉತ್ತರ ಪ್ರದೇಶದ ಆಯೋಗದಲ್ಲಿ 8 ಸದಸ್ಯರಿದ್ದಾರೆ ಇದರಲ್ಲೂ ರಾಜ್ಯದಲ್ಲಿ ಹಗಲು ದರೋಡೆ ನಡೆಯುತ್ತಿದೆ. ಪೂರ್ವಭಾವಿ ಪರೀಕ್ಷೆಗೆ 60 ಲಕ್ಷ ರೂ. ಮುಖ್ಯ ಪರೀಕ್ಷೆಗೆ 1 ಕೋಟಿ ರೂ. ಹಾಗೂ ಸಂದರ್ಶನದ ಮೂಲಕ 40 ಲಕ್ಷ ರೂ. ನಿಗದಿ ಮಾಡಲಾಗಿದೆ. ಈ ರೀತಿ ರೇಟ್ ಕಾರ್ಡ್ ಫಿಕ್ಸ್ ಮಾಡಲಾಗಿದೆ. ಎಸಿಗೆ 2 ಕೋಟಿ ರೂ., ಡಿವೈಎಸ್‌ಪಿಗೆ 2 ಕೋಟಿ ರೂ., ವಾಣಿಜ್ಯ ತೆರಿಗೆ 1.50 ಕೋಟಿ ರೂ., ಪಂಚಾಯತ್ ಅಧಿಕಾರಿಗೆ ಒಂದೂವರೆ ಕೋಟಿ ರೂ. ನಿಗದಿ ಮಾಡಲಾಗಿದೆ ಆರೋಪಿಸಿದರು.

ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಜ. 2 ರಂದೇ ಪೊಲೀಸರು ದೂರು ದಾಖಲಿಸಿದ್ದಾರೆ. ಗಾಂಧಿನಗರದ ಸಜ್ಜನ್ ಲಾಡ್ಜ್‌ನಲ್ಲಿ ಒಬ್ಬ ವ್ಯಕ್ತಿ ಕೊಠಡಿ ಮಾಡಿಕೊಂಡು, ಸ್ಪರ್ಧಾತ್ಮಕ ಪರೀಕ್ಷೆ ಪಾಸು ಮಾಡಲು ಪಿತೂರಿ ಮಾಡಿ ಹಣ ಸಂಪಾದಿಸುತ್ತಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇದೇ ರೀತಿ ವಿಜಯನಗರ ಪೊಲೀಸ್ ಠಾಣೆಯಲ್ಲಿ ಮತ್ತೊಂದು ದೂರು ದಾಖಲಾಗಿದೆ. ಇಲ್ಲಿ ಕೂಡ ಮಧ್ಯವರ್ತಿ ಮೂಲಕ ಪರೀಕ್ಷೆಯಲ್ಲಿ ಪಾಸು ಮಾಡಿಸಲು ಹಣ ಸಂಪಾದಿಸುತ್ತಿದ್ದಾನೆ ಎಂದು ಉಲ್ಲೇಖಿಸಲಾಗಿದೆ. ಆ ವ್ಯಕ್ತಿಗೆ ಅಧಿಕಾರಿಗಳ ಪರಿಚಯವಿದ್ದು, ಹುದ್ದೆ ಕೊಡಿಸುವುದಾಗಿ ಹೇಳಿ ನಂಬಿಸುತ್ತಿದ್ದ ಎಂದು ದೂರಿನಲ್ಲಿ ಬರೆಯಲಾಗಿದೆ ಎಂದರು.

ಓಎಂಆರ್ ಶೀಟ್‌ನಲ್ಲಿ 16 ಅಥವಾ 10 ಪ್ರಶ್ನೆಗಳಿಗೆ ಮಾತ್ರ ಟಿಕ್ ಮಾಡು ಎಂದು ಮಧ್ಯವರ್ತಿ ಹೇಳುತ್ತಾನೆ. ಅದರಂತೆಯೇ ಅಭ್ಯರ್ಥಿ ಮಾಡುತ್ತಾನೆ. ಓಎಂಆರ್ ಶೀಟ್ ಹೋಗುವ ಎರಡು ಕೊಠಡಿಗಳಲ್ಲಿ ಸಿಸಿಟಿವಿ ಇರುವುದಿಲ್ಲ. ಅಲ್ಲಿಯೇ ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಟಿಕ್ ಮಾಡಲಾಗುತ್ತದೆ. ಇದರಲ್ಲಿ ಲೋಕಸೇವಾ ಆಯೋಗದ ಅಧಿಕಾರಿಗಳು ಕೂಡ ಶಾಮೀಲಾಗಿರುತ್ತಾರೆ ಎಂದು ದೂರಿದರು.

ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಈ ಕುರಿತು ಪರೀಕ್ಷೆ ನಡೆಸಲಾಗಿದೆ. ಅಭ್ಯರ್ಥಿ ಮತ್ತು ಮಧ್ಯವರ್ತಿ ಬಳಸಿರುವ ಪೆನ್‌ಗಳಲ್ಲಿ ವ್ಯತ್ಯಾಸ ಇರುವುದರ ಬಗ್ಗೆ ಪತ್ತೆ ಮಾಡಲಾಗಿದೆ. ಲೋಕಸೇವಾ ಆಯೋಗದ ಅಧಿಕಾರಿ–ನೌಕರರ ಸಹಾಯವಿಲ್ಲದೆ ಇದನ್ನು ಮಾಡಲು ಸಾಧ್ಯವಿಲ್ಲ ಎಂದು ವಿಧಿ ವಿಜ್ಞಾನ ವರದಿಯಲ್ಲಿ ತಿಳಿಸಲಾಗಿದೆ. ಇದನ್ನು ಸರ್ಕಾರವೇ ಒಪ್ಪಿಕೊಂಡಿದೆ ಎಂದರು.

384 ಗ್ರೂಪ್ ಎ ಮತ್ತು ಬಿ ಹುದ್ದೆಗಳಿಗೆ ನಡೆದ ಪೂರ್ವಭಾವಿ ಪರೀಕ್ಷೆಯಲ್ಲಿ ಇಂಗ್ಲಿಷ್–ಕನ್ನಡ ಭಾಷಾಂತರದಲ್ಲಿ 59 ಪ್ರಶ್ನೆಗಳಲ್ಲಿ ತಪ್ಪುಗಳಾಗಿವೆ. ಲೋಕಸೇವಾ ಆಯೋಗದ ಕಳ್ಳರು ಮೊದಲಿಗೆ ಇಂಗ್ಲಿಷ್‌ನಲ್ಲಿ ಬರೆದು, ನಂತರ ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಮೊದಲು ಕನ್ನಡದಲ್ಲೇ ಪ್ರಶ್ನೆ ತಯಾರಿಸಬೇಕೆಂಬ ನಿಯಮವೇ ಇದೆ. ಇದಾದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಟ್ವೀಟ್‌ನಲ್ಲಿ ಪ್ರತಿಕ್ರಿಯೆ ನೀಡಿದ್ದರು. ಬಳಿಕ ಐಎಎಸ್ ಗಂಗಾಧರ್ ಈ ಕುರಿತು ಟ್ವೀಟ್ ಮಾಡಿದ್ದು, ಇದನ್ನು ಎಂಜಾಯ್ ಮಾಡಿದ್ದೇನೆ ಎಂದು ಹೇಳಿದ್ದಾರೆ. ಇದು ಕನ್ನಡಿಗರಿಗೆ ಮಾಡಿದ ಅಪಮಾನ. ಕನ್ನಡಕ್ಕೆ ದ್ರೋಹ ಮಾಡಿದ ಈ ಅಧಿಕಾರಿಯ ನಾಲಿಗೆ ಸೀಳಿ ಹಾಕಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಪರೀಕ್ಷೆ ನಡೆಸಲು 15 ಕೋಟಿ ರೂ. ನೀಡಲಾಗಿದೆ. ಮರು ಪರೀಕ್ಷೆಗೆ ಮತ್ತೆ ಅಷ್ಟೇ ಹಣ ನೀಡಲಾಗಿದೆ. ಮರು ಪರೀಕ್ಷೆಯಲ್ಲಿ ಮತ್ತೆ 79 ತಪ್ಪುಗಳಾಗಿವೆ. ಈ ಪ್ರಶ್ನೆಪತ್ರಿಕೆಗಳಲ್ಲಿ ಕನ್ನಡವನ್ನು ಎರಡನೇ ದರ್ಜೆಯಾಗಿ ನೋಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ವ್ಯಾಕರಣದ ಬಗ್ಗೆ ಮಾತನಾಡುತ್ತಾರೆ. ಸುಮಾರು 2 ಲಕ್ಷ ಯುವಜನರು ನಿರುದ್ಯೋಗಿಗಳಾಗಿದ್ದು, ಪರೀಕ್ಷೆಗಾಗಿ ಓದುತ್ತಿದ್ದಾರೆ. ಅವರ ಭಾವನೆಗಳನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು ಎಂದರು.

ಹಳೇ ಬಂಡಿಕೇರಿಯಲ್ಲಿ ವಿಜೃಂಭಣೆಯ ಪೂಜಾ ವಾರ್ಷಿಕೋತ್ಸವ

ಶ್ರೀಮಹಾಲಕ್ಷ್ಮೀ ಕೊಲ್ಲಾಪುರದಮ್ಮನವರ ಪೂಜಾ ಕೈಂಕರ್ಯದಲ್ಲಿ ಶ್ರದ್ಧಾ ಭಕ್ತಿಯಿಂದ ಪಾಲ್ಗೊಂಡ ಅಪಾರ ಭಕ್ತರು



ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಪೂಜಾ ಕೈಂಕರ್ಯ ಕೈಗೊಂಡು ಕಾಲ್ನಡಿಗೆಯಲ್ಲಿ ಮೈಸೂರಿನ ಹಳೇಬಂಡಿಕೇರಿಯಲ್ಲಿರುವ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನಕ್ಕೆ ಮಂಗಳವಾರ ದೇವರನ್ನು ತರಲಾಯಿತು.

ಮೈಸೂರು,ಮಾ.4(ಪಿಎಂ)– ಮೈಸೂರಿನ ಹಳೇ ಬಂಡಿಕೇರಿಯ ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ಮಂಗಳವಾರ ಪೂಜಾ ವಾರ್ಷಿಕೋತ್ಸವ ವಿಜೃಂಭಣೆಯಿಂದ ನಡೆಯಿತು. ಶ್ರದ್ಧಾ ಭಕ್ತಿಯಿಂದ ಶ್ರೀಮಹಾಲಕ್ಷ್ಮೀ ಕೊಲ್ಲಾಪುರದಮ್ಮನವರ ಪೂಜಾ ಕೈಂಕರ್ಯದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.

247ನೇ ಪೂಜಾ ವಾರ್ಷಿಕೋತ್ಸವದ ಪ್ರಥಮ ದಿನವಾದ ಇಂದು ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯಲ್ಲಿ ಪೂಜಾ ಕೈಂಕರ್ಯ ಕೈಗೊಂಡು ಕಾಲ್ನಡಿಗೆಯಲ್ಲಿ ಸಾಗಿ ದೇವರನ್ನು ಮೈಸೂರಿನ ದೇವಸ್ಥಾನಕ್ಕೆ ತರಲಾಯಿತು. ಬಳಿಕ ದೇವಾಲಯದಲ್ಲಿ ವಿವಿಧ ಪೂಜಾ ವಿಧಿವಿಧಾನಗಳು ನಡೆದವು. ಅಪಾರ ಸಂಖ್ಯೆಯ ಭಕ್ತರು ತಂಬಿಟ್ಟು ಆರತಿಯೊಂದಿಗೆ ಬಂದು ಪೂಜೆ ಮಾಡಿಸಿ ಭಕ್ತಿಭಾವ ಮೆರೆದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಾಲಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಎಂ.ನಾಗರಾಜು, ಜಗದೀಶ್, ಶಂಕರ್, ವಿಶ್ವನಾಥ್, ಓಂಕಾರ್ ಆನಂದ್, ರಾಮಪ್ಪ ರಮೇಶ್, ಮಯೂರ್, ಪೈಲ್ವಾನ್ ಯಶ್ವಂತ್, ಮಹದೇವು, ಸುಪ್ರಿಯಾ ಮಹದೇವು, ನವೀನ್ ಕುಮಾರ್, ಲೋಕೇಶ್, ಕೆಂಪರಾಜು, ರಾಜೇಶ್ ಮತ್ತಿತರರು ಪ್ರಮುಖರು ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡಿದ್ದರು.

ಪರಂಪರೆ ಹೊಂದಿದ ದೇವಸ್ಥಾನ: ಈ ದೇವಾಲಯಕ್ಕೆ ಸುಮಾರು 200 ವರ್ಷದ ಪರಂಪರೆ ಇದೆ. ಹಳೇ ದೇವಸ್ಥಾನದ ನವೀಕರಣ ಇತ್ತೀಚೆಗಿನ ವರ್ಷಗಳಲ್ಲಿ ಹಂತ ಹಂತವಾಗಿ ಮಾಡಲಾಗಿದೆ. ಎರಡು ಶತಮಾನಗಳಿಂದಲೂ ಪ್ರತಿವರ್ಷ ಈ ಪೂಜಾ ವಾರ್ಷಿಕೋತ್ಸವ ನಡೆಸಿಕೊಂಡು ಬರಲಾಗಿದೆ ಎಂದು ಶ್ರೀ ಮಹಾಲಕ್ಷ್ಮೀ ಕೊಲ್ಲಾಪುರದಮ್ಮ ದೇವಾಲಯ ಅಭಿವೃದ್ಧಿ ಸಮಿತಿ ಸದಸ್ಯ ವಿಶ್ವನಾಥ್ ತಿಳಿಸಿದರು.

ಮಾ.7ರಂದು ಶ್ರೀಚಾಮುಂಡೇಶ್ವರಿ ಅಮ್ಮನವರ ಪೂಜಾ ಕೈಂಕರ್ಯ ಮತ್ತು ಮಾ.10ರಂದು ಶ್ರೀಸಿದ್ದಪ್ಪಾಜಿ ಸ್ವಾಮಿಯವರ ಪೂಜಾ ಕೈಂಕರ್ಯ (ಸಂಜೆ 6.30ರಿಂದ 10ರವರೆಗೆ) ನಡೆಯಲಿದೆ. ಪೂಜಾ ವಾರ್ಷಿಕೋತ್ಸವದ ಪ್ರಯುಕ್ತ ದೇವಾಲಯ ಹಾಗೂ ದೇವಾಲಯ ವ್ಯಾಪ್ತಿಯ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರ ಜಗಮಗಿಸುತ್ತಿತ್ತು.

ವಿಜೃಂಭಣೆಯ ನೂರೊಂದು ಹಾಲರವಿ ಉತ್ಸವ



ಜಯಪುರದಲ್ಲಿ ನೂರೊಂದು ಹಾಲರವಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಜಯಪುರ, ಮಾ.4– ಜಯಪುರ ಗ್ರಾಮದಲ್ಲಿ ಜೇಡಿಕಟ್ಟೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ಸೋಮವಾರ ರಾತ್ರಿ ನೂರೊಂದು ಹಾಲರವಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ಮಾವಿನಹಳ್ಳಿಯಲ್ಲಿ ಮಹದೇಶ್ವರಸ್ವಾಮಿ ಅವರ ಸರ್ಪದ ವಾಹನವನ್ನು ಸಿಂಗರಿಸಿ ಬರಡನಪುರ ಮಾರ್ಗವಾಗಿ ಮೆರವಣಿಗೆಯಲ್ಲಿ ಜಯಪುರ ಕೆಗ್ಗೆರೆಗೆ ಹೊತ್ತು ತಂದರು. ಈ ವೇಳೆ ಜೇಡಿಕಟ್ಟೆ ಮಹದೇಶ್ವರಸ್ವಾಮಿ ದೇವಾಲಯದಿಂದ ವೀರಭದ್ರಸ್ವಾಮಿ, ಜಯಪುರದಲ್ಲಿ ಕೋಣಪ್ಪ ಸತ್ತಿಗೆ ಮೆರವಣಿಗೆಯಲ್ಲಿ ಸೇರಿಕೊಂಡಿತು. ಕೆಗ್ಗೆರೆಯಲ್ಲಿ ಮಹದೇಶ್ವರ ಸ್ವಾಮಿ ಸರ್ಪದ ವಾಹನ ಮತ್ತು ಬಿರುದು ಬಾವಲಿಗಳಿಗೆ ಪೂಜೆ ಸಲ್ಲಿಸಲಾಯಿತು. ವೀರಭದ್ರಸ್ವಾಮಿ ಪಂಜಿನ ಸೇವೆ ನಡೆಯಿತು. ಹರಕೆ ಹೊತ್ತ ಭಕ್ತರು ಬಾಯಿಬೀಗ ಧರಿಸಿದರು. ಹಾಲರವಿ ಉತ್ಸವ ಮತ್ತು ಛತ್ರಿ ಛಾಮರಗಳು, ತಮಟೆ, ವಾದ್ಯ, ಬ್ಯಾಂಡ್ ಸೆಟ್‌ಗಳು ಮೆರವಣಿಗೆಯಲ್ಲಿ ಸಾಗಿದವು. ಪುರ ಮಠದ ಚಂದ್ರಶೇಖರ ಸ್ವಾಮೀಜಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡರು.

ಸೋಮವಾರ ಮಧ್ಯರಾತ್ರಿ ಹಾಲರವಿ ಉತ್ಸವ ದೇವಾಲಯ ತಲುಪಿತು. ಬಳಿಕ ಕೊಂಡದ ಕಗ್ಗಲಿ ಸೌದೆ ರಾಶಿಯನ್ನು ಕರ್ಪೂರದಿಂದ ಹಚ್ಚಿ ಸುಡಲಾಯಿತು. ಮಂಗಳವಾರ ಸೂರ್ಯೋದಯಕ್ಕು ಮುನ್ನ ಕೊಂಡೋತ್ಸವ ಜರುಗಿತು. ವೀರಭದ್ರ ಸ್ವಾಮಿ ಹಲಗ, ಕೋಣಪ್ಪ ಸ್ವಾಮಿ, ಬಸವೇಶ್ವರಸ್ವಾಮಿ ಬಿರುದುಗಳನ್ನು ಹೊತ್ತ ಗುಡ್ಡಪ್ಪಂದಿರು ಕೊಂಡ ಹಾಯ್ದರು. ಭಕ್ತರು ಕೊಂಡೋತ್ಸವಕ್ಕೆ ಎಳ್ಳು, ಹಳ್ಳು, ಕೊಬ್ಬರಿ ಮತ್ತು ದವಸ ಧಾನ್ಯಗಳನ್ನು ಹಾಕಿ ಪೂಜೆ ಸಲ್ಲಿಸಿದರು.

ಮಾವಿನಹಳ್ಳಿ ಗ್ರಾಮಸ್ಥರು ಹುಲಿ ವಾಹನ ಉತ್ಸವ ಮೂರ್ತಿ ಹೊತ್ತು ಉಘೇ ಮಾದಪ್ಪ ಜಯಘೋಷ ಕೂಗಿ ದೇವಾಲಯದ ಸುತ್ತ 21 ಬಾರಿ ಪ್ರದಕ್ಷಿಣೆ ಮಾಡಿಸಿದರು. ರೈತರು ತಮ್ಮ ರಾಸು (ಗೋವು)ಗಳನ್ನು ಸಿಂಗರಿಸಿ ಪೆಂಜಿನ ಸೇವೆ ಮಾಡಿಸಿದರು. ವಿವಿಧೆಡೆಯಿಂದ ಜಾತ್ರೆಗೆ ಬಂದಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಭಕ್ತರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಸೋಮವಾರ ರಾತ್ರಿ ಜಾನಪದ ಕಲಾವಿದ ಮೈಸೂರು ಗುರು ರಾಜು ಮತ್ತು ತಂಡ ಮಹದೇಶ್ವರಸ್ವಾಮಿಯವರ ಹಾಡು ಹಾಡಿದರು. ಶಾಸಕ ಜಿ.ಟಿ ದೇವೇಗೌಡ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಬಳಿಕ ಹುಲಿವಾಹನ, ಮಹದೇಶ್ವರ ಸ್ವಾಮಿ ಸರ್ಪದ ವಾಹನ ಉತ್ಸವ ಮೂರ್ತಿಗಳು ಹಾಗೂ ಬಿರುದು ಬಾವಲಿಗಳು ಜೇಡಿಕಟ್ಟೆ ದೇವಾಲಯದಿಂದ ಮೆರವಣಿಗೆ ಹೊರಟು ಜಯಪುರ ಗ್ರಾಮದ ಮೂಲಕ ಬರಡನಪುರ ಗ್ರಾಮಕ್ಕೆ ತಲುಪಿದವು. ಮಂಗಳವಾರ ಸಂಜೆ ಬರಡನಪುರ ಗ್ರಾಮದಲ್ಲಿ ದೇವರ ಮೆರವಣಿಗೆ ಮಾಡಲಾಯಿತು. ತುಪ್ಪ ಕಜ್ಜಾಯ ನೈವೇದ್ಯ ಸೇವೆ ಮಾಡುವ ಮೂಲಕ 2 ದಿನಗಳಿಂದ ನಡೆದ ಜೇಡಿಕಟ್ಟೆ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಅಂತಿಮ ತೆರೆ ಬಿದ್ದಿತು.

ತಾಯಿ-ಮಗು ಆರೈಕೆ, ಹೆರಿಗೆ ಆಸ್ಪತ್ರೆ ನಿರ್ಮಾಣಕ್ಕೆ ಆಗ್ರಹಿಸಿ ಮಹಿಳೆಯರಿಂದ

ಪ್ರತಿಭಟನಾ ಜಾಥಾ, ಸಹಿ ಸಂಗ್ರಹ ಆಂದೋಲನ



ತಾಯಿ ಮಗು ಆರೈಕೆ ಹಾಗೂ ಹೆರಿಗೆ ಆಸ್ಪತ್ರೆ ನಿರ್ಮಾಣಕ್ಕೆ ಆಗ್ರಹಿಸಿ ಸಾವಿರಾರು ಮಹಿಳೆಯರು ಪ್ರತಿಭಟನಾ ಜಾಥಾ ನಡೆಸಿದರು.

ತಿ.ನರಸೀಪುರ, ಮಾ.4– ತಾಯಿ-ಮಗು ಆರೈಕೆ ಮತ್ತು ಹೆರಿಗೆ ಆಸ್ಪತ್ರೆ ನಿರ್ಮಾಣಕ್ಕೆ ಆಗ್ರಹಿಸಿ ಪಟ್ಟಣದಲ್ಲಿ ಮಂಗಳವಾರ ಮಹಿಳೆಯರು ಪ್ರತಿಭಟನಾ ಜಾಥಾ ಮತ್ತು ಸಹಿ ಸಂಗ್ರಹ ಆಂದೋಲನ ನಡೆಸಿದರು.

ತಾಲೂಕು ಕೇಂದ್ರದಲ್ಲಿ ತಾಯಿ-ಮಗು ಆರೈಕೆ ಮತ್ತು ಹೆರಿಗೆ ಆಸ್ಪತ್ರೆ ನಿರ್ಮಾಣ ಮಾಡಬೇಕೆಂದು ಪಟ್ಟು ಹಿಡಿದಿರುವ ಸಾವಿರಾರು ಮಹಿಳೆಯರು ತಾಯಿ-ಮಗು ಆರೈಕೆ ಮತ್ತು ಹೆರಿಗೆ ಆಸ್ಪತ್ರೆ ನಿರ್ಮಾಣ ಹೋರಾಟ ಸಮಿತಿ ಕರೆ ಹಿನ್ನೆಲೆಯಲ್ಲಿ ಸರ್ಕಾರವನ್ನು ಒತ್ತಾಯಿಸಿದರು ಹಾಗೂ ಈ ಭಾಗದ ಜನಪ್ರತಿನಿಧಿಗಳ ಗಮನ ಸೆಳೆಯಲು ರಸ್ತೆಗೆ ಇಳಿದಿದ್ದರು. ಅಲ್ಲದೇ ಹಕ್ಕೊತ್ತಾಯದ ಫಲಕಗಳನ್ನು ಹಿಡಿದು ಹೆರಿಗೆ ಆಸ್ಪತ್ರೆ ನಿರ್ಮಾಣ ಆಗಬೇಕೆಂಬ ಘೋಷಣೆ ಕೂಗಿ ಚಳವಳಿ ನಡೆಸಿ, ಎಲ್ಲರ ಗಮನ ಸೆಳೆದರು.

ತಾಲೂಕು ಆಡಳಿತಸೌಧದ ಎದುರು ಜಮಾಯಿಸಿದ ಮಹಿಳೆಯರು ಕಾಲೇಜು ರಸ್ತೆ ಮಾರ್ಗವಾಗಿ ಖಾಸಗಿ ಬಸ್ ನಿಲ್ದಾಣ ವೃತ್ತಕ್ಕೆ ತೆರಳಿ, ಒಂದು ತಾಸಿಗೂ ಹೆಚ್ಚು ಕಾಲ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಬಳಿಕ ಸಾರ್ವಜನಿಕ ಆಸ್ಪತ್ರೆ ಆವರಣಕ್ಕೆ ತೆರಳಿ ಕೆಲಕಾಲ ಧರಣಿ ನಡೆಸಿ ತಹಶೀಲ್ದಾರ್ ಟಿ.ಜಿ.ಸುರೇಸಾಚಾರ್, ತಾಲೂಕು ಆರೋಗ್ಯಾಧಿಕಾರಿ ಡಾ.ಎಂ.ಕೆ. ರವಿಕುಮಾರ್ ಹಾಗೂ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಎಸ್.ಪಿ. ಅಭಿಲಾಷ್ ಅವರಿಗೆ ಮನವಿ ಸಲ್ಲಿಸಿದರು.

ಹೋರಾಟ ಸಮಿತಿ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ತಾಲೂಕು ಕೇಂದ್ರದಲ್ಲಿ ತಾಯಿ ಮಗು ಆರೈಕೆ ಮತ್ತು ಹೆರಿಗೆ ಆಸ್ಪತ್ರೆ ಇಲ್ಲದಿರುವುದರಿಂದ ಹಳ್ಳಿಗಾಡಿನ ಜನರು ಪರದಾಡುವಂತಾಗಿದೆ. ನೆರೆಯ ಮಂಡ್ಯ ಹಾಗೂ ಚಾ.ನಗರ ಜಿಲ್ಲೆಯ ಗಡಿ ಗ್ರಾಮಗಳಲ್ಲಿರುವ ಜನರು ಕೂಡ ನರಸೀಪುರ ಸಾರ್ವಜನಿಕ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ತುರ್ತು ಹೆರಿಗೆ ವೇಳೆ ಮೈಸೂರಿಗೆ ಬರೆದು ಕೊಟ್ಟರೆ ಗರ್ಭಿಣಿ ಕುಟುಂಬದವರಲ್ಲಿ ಆತಂಕ ಮಡುಗಟ್ಟುತ್ತದೆ. ವರುಣ ಮತ್ತು ನರಸೀಪುರ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಿಎಂ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಸಮಸ್ಯೆಯ ಗಂಭೀರತೆ ಅರಿತು ಕೂಡಲೇ ತಾಯಿ ಮಗು ಆರೈಕೆ ಮತ್ತು ಹೆರಿಗೆ ಆಸ್ಪತ್ರೆ ನಿರ್ಮಾಣ ಮಾಡಲು ಪ್ರಸ್ತುತ ಆಯವ್ಯಯದಲ್ಲಿ ಅನುದಾನ ಮಂಜೂರು ಮಾಡಬೇಕು ಎಂದು ಮನವಿ ಮಾಡಿದರು.

ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಪಿ.ಎಂ ಸರೋಜಮ್ಮ ಮಾತನಾಡಿದರು. ಎಸ್ಐ ಜಗದೀಶ್ ಧೂಳಶೆಟ್ಟಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಪ್ರತಿಭಟನೆಯಲ್ಲಿ ಹೋರಾಟ ಸಮಿತಿ ಅಧ್ಯಕ್ಷೆ ಮೋಹನ ಕುಮಾರಿ, ಕಾರ್ಯದರ್ಶಿಗಳಾದ ರೇಖಾ, ಶಶಿಕಲಾ, ಉಪಾಧ್ಯಕ್ಷೆ ಕೋಮಲಾಕ್ಷಿ, ಸಂಚಾಲಕರಾದ ಸುರೇಶ್, ಸ್ವಾಮಿ, ಕುಕ್ಕೂರು ರಾಜು, ಯಾಚೇನಹಳ್ಳಿ ಸೋಮಶೇಖರ್, ಮಣಿಲಾ, ಸರೋಜಮ್ಮ ಪ್ರೇಮಕುಮಾರಿ, ಮಹದೇವಮ್ಮ, ಶಾಂತಮ್ಮ, ಪಾರ್ವತಿ, ಚಂದ್ರಮ್ಮ, ಹೊನ್ನಮ್ಮ, ಶಾಂತಮ್ಮ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕುರುಬರಹಟ್ಟಿ ಮಹದೇವಯ್ಯ, ರೈತ ಸಂಘದ ತಾಲೂಕು ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ಬೂದಹಳ್ಳಿ ಶಂಕರ್, ದಸಂಸ ಮುಖಂಡರಾದ ಕಿರಗಸೂರು ರಾಜಣ್ಣ, ಶಿವು, ಆಲಗೂಡು ನಾಗರಾಜ್ ಮೂರ್ತಿ, ಶಾಂತಕುಮಾರ್, ಬನ್ನಹಳ್ಳಿ ಹುಂಡಿ ಉಮೇಶ್, ಬಿಲಿಗೆರೆಹುಂಡಿ ಶಿವಕುಮಾರ್, ಮಾವಿನಹಳ್ಳಿ ನಿಂಗರಾಜು, ಕೇತುಪುರ ಶಿವನಂಜು, ಕುಕ್ಕೂರುಪ್ರಭು, ನಿಲಸೋಗೆ ಪುಟ್ಟ, ಹ್ಯಾಕನೂರು ಶಿವಕುಮಾರ್, ರಾಚಪ್ಪ, ಮಹೇಶ್, ಹೆಮ್ಮಿಗೆ ಚಂದ್ರು ಹಾಗೂ ಇತರರಿದ್ದರು.

ವಿಜೃಂಭಣೆಯ ಆದಿಶಕ್ತಿ ತೋಪಮ್ಮನವರ ವಾರ್ಷಿಕ ಜಾತ್ರೆ



ಆದಿಶಕ್ತಿ ತೋಪಮ್ಮನವರ ವಾರ್ಷಿಕ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ಕೆ.ಆರ್.ನಗರ, ಮಾ.4– ಪಟ್ಟಣದ ಹೊರವಲಯದ ಹಾಸನ–ಮೈಸೂರು ರಸ್ತೆಯಲ್ಲಿರುವ ಆದಿಶಕ್ತಿ ತೋಪಮ್ಮನವರ ವಾರ್ಷಿಕ ಜಾತ್ರೆ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಜಾತ್ರೆ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯೇ ತೋಪಮ್ಮನವರಿಗೆ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನೆರವೇರಿಸಿ, ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಕೆ.ಆರ್.ನಗರ ಸೇರಿದಂತೆ ಸಾಲಿಗ್ರಾಮ ಹಾಗೂ ಹುಣಸೂರು ತಾಲೂಕಿನ ನೂರಾರು ಗ್ರಾಮಗಳ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಹರಕೆ ತೀರಿಸಿದರು.

ದೇವಾಲಯದ ಸುತ್ತ ಹತ್ತಾರು ಸಿಹಿ ತಿಂಡಿ ಅಂಗಡಿಗಳು ಮತ್ತು ವಿವಿಧ ಆಟಿಕೆಗಳ ಮಾರಾಟದ ಅಂಗಡಿಗಳು ಎಲ್ಲರ ಗಮನ ಸೆಳೆದವು. ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ದೇವಾಲಯ ಇರುವುದರಿಂದ ಸುಗಮ ಸಂಚಾರಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಶಿವಪ್ರಕಾಶ್ ನೇತೃತ್ವದಲ್ಲಿ ಅನುವು ಮಾಡಿ ಕೊಡಲಾಗಿತ್ತು. ಅಲ್ಲದೇ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಕಾಗಿನೆಲೆ ಕನಕಗುರು ಪೀಠದ ಶಿವಾನಂದಪುರಿ ಸ್ವಾಮೀಜಿ, ಅರಕೆರೆ ವಿರಕ್ತ ಮಠದ ಸಿದ್ದೇಶ್ವರ ಸ್ವಾಮೀಜಿ, ಶಾಸಕ ಡಿ.ರವಿಶಂಕರ್ ದೇವಾಲಯಕ್ಕೆ ಭೇಟಿ ನೀಡಿ ಆದಿಶಕ್ತಿ ತೋಪಮ್ಮನವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭ ಟ್ರಸ್ಟ್ ವತಿಯಿಂದ ಅವರನ್ನು ಸನ್ಮಾನಿಸಲಾಯಿತು. ದೇವಾಲಯದ ಆವರಣದಲ್ಲಿ ರಾತ್ರಿ ಶನಿ ಮಹಾತ್ಮೆ ಎಂದ ಪೌರಾಣಿಕ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು. ಈ ವೇಳೆ ಪುರಸಭೆ ಅಧ್ಯಕ್ಷ ಶಿವು ನಾಯಕ್, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷೆ ಪುಷ್ಪಲತಾ, ಪುರಸಭೆ ಸದಸ್ಯರಾದ ಪ್ರಕಾಶ್, ನಟರಾಜು, ಶಂಕರ್ ಸ್ವಾಮಿ, ಕೆ.ಪಿ.ಪ್ರಭುಶಂಕರ್, ನವ ನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ದೊಡ್ಡೇಕೊಪ್ಪಲು ಗ್ರಾಪಂ ಅಧ್ಯಕ್ಷೆ ರಾಜೇಶ್ವರಿ, ಸದಸ್ಯ ಶೇಖರ್, ಆದಿಶಕ್ತಿ ತೋಪಮ್ಮನವರ ದೇವಾಲಯದ ಟ್ರಸ್ಟ್ ಅಧ್ಯಕ್ಷ ಸಿ.ಎ.ರಾಜು, ಗೌರವಾಧ್ಯಕ್ಷ ಅಣ್ಣಯ್ಯ ನಾಯಕ, ಕಾರ್ಯದರ್ಶಿ ಕೆಪಿ.ಜಗದೀಶ್, ಪದಾಧಿಕಾರಿಗಳಾದ ಯೋಗೀಶ್, ಮಾಟೇಗೌಡ, ಜವರೇಗೌಡ, ರಮೇಶ್, ಟಿ.ಎಲ್.ಪರಶಿವಮೂರ್ತಿ, ಕೆಬಿ.ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್.ಮಹದೇವ್, ನಗರಾಧ್ಯಕ್ಷ ಎಂ.ಜೆ.ರಮೇಶ್, ವಕ್ತಾರ ಸೈಯದ್ ಜಾಬೀರ್, ಕಾಂಗ್ರೆಸ್ ಮುಖಂಡ ಬಲರಾಮೇಗೌಡ, ಸ್ಮಾರ್ಟ್ ಲೇಡಿಸ್ ಉಪಾಧ್ಯಕ್ಷೆ ಕೆ.ಬಿ.ಸುನೀತಾ ಮತ್ತಿತರರಿದ್ದರು.

ಸರಗೂರಲ್ಲಿ ಸಂವೇದನಾಶೀಲ ಕಾರ್ಯಕ್ರಮ



ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ಜಶೀಲಾ ಮಾತನಾಡಿದರು

ಸರಗೂರು, ಮಾ.4– ಭವಿಷ್ಯದಲ್ಲಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದೆ ಹದಿಹರಯದ ತಲ್ಲಣಗಳಿಗೆ ಒಳಗಾಗದೆ ಬದುಕಿನ ಗುರಿಗೆ ಅಚಲವಾಗಿ ನಿಂತು ಬದುಕನ್ನು ರೂಪಿಸಿಕೊಳ್ಳಬೇಕು ಎಂದು ಹೆಚ್.ಡಿ.ಕೋಟೆ ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ಜಶೀಲಾ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಸಂವೇದನಾಶೀಲ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ಲಿಂಗ ಅಸಮತೋಲನ, ಬಾಲ್ಯ ವಿವಾಹ, ಕೌಟುಂಬಿಕ ಹಿಂಸೆ, ಕಾಲೇಜಿನಲ್ಲಿ ರ‍್ಯಾಗಿಂಗ್, ಸಾಮಾಜಿಕ ಜಾಲತಾಣಗಳಲ್ಲಿ ಹೆಣ್ಣು ಮಕ್ಕಳಿಗೆ ಬೆದರಿಕೆ, ಪ್ರೀತಿಸಿ ನಂಬಿಸಿ ಮೋಸ, ಇಂತಹ ಸಮಸ್ಯೆಗಳು ಕಂಡು ಬಂದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಾಂತ್ವನ ಕೇಂದ್ರದಿಂದ ಕಾನೂನಿನ ನೆರವು ಉಚಿತವಾಗಿ ದೊರಕಿಸುತ್ತೇವೆ ಎಂದರು. ಪ್ರಾಂಶುಪಾಲ ಎಂ.ಜೆ.ದಂಗಾನಂದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಡಾ.ಎನ್.ಕೆ.ವೃಂದಾ, ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ವೆಂಕಟಮ್ಮ, ವಾಣಿಜ್ಯ ಶಾಸ್ತ್ರ ಸಹಾಯಕ ಪ್ರಾಧ್ಯಾಪಕಿ ಜೆ.ಡಾ.ಶೃತಿ ಹಾಜರಿದ್ದರು.

ಕೋಟೆಯಲ್ಲಿ ಅಸ್ಪೃಶ್ಯತೆ ನಿವಾರಣಾ ಸಪ್ತಾಹ ಜಾಗೃತಿ ಕಾರ್ಯಕ್ರಮ

ಹೆಚ್.ಡಿ.ಕೋಟೆ, ಮಾ.4– ದೇಶದಲ್ಲಿ ಸಂವಿಧಾನ ಜಾರಿಯಾಗುವ ಮೊದಲು ಜಾತಿ ತಾರತಮ್ಯ ಮತ್ತು ಶೋಷಣೆ ವ್ಯಾಪಕವಾಗಿತ್ತು. ಆದರೆ ಅಂಬೇಡ್ಕರ್ ಅವರ ಪರಿಶ್ರಮದಿಂದ ಜಾರಿಯಾದ ಸಂವಿಧಾನ ಎಲ್ಲಾ ಶೋಷಣೆ ಮತ್ತು ಅಸಮಾನತೆ ವಿರುದ್ಧವಾದ ಕಾನೂನು ಕ್ರಮಗಳನ್ನು ನಮಗೆ ನೀಡಿತು ಎಂದು ತಹಸೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ ಮತ್ತು ಗಾರ್ಡ್ ಸಂಸ್ಥೆ ವತಿಯಿಂದ ನಡೆದ ಅಸ್ಪೃಶ್ಯತೆ ನಿವಾರಣಾ ಸಪ್ತಾಹ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಯಾರೋ ಒಬ್ಬರಿಗೆ ಜಾರಿಯಾದುದಲ್ಲ. ಬದಲಿಗೆ ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ರಾಮಸ್ವಾಮಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್, ಸಿಂಡಿಕೇಟ್ ಸದಸ್ಯ ನಾಗರಾಜ್, ಜೀವಿಕ ಜಿಲ್ಲಾ ಸಂಚಾಲಕ ಬಸವರಾಜ್, ಪ್ರಗತಿಪರ ರೈತ ಮಾಲಾರ ಪುಟ್ಟಯ್ಯ, ಮಹಾಸಭಾ ಮಾಜಿ ಅಧ್ಯಕ್ಷ ಮುದ್ದುಮಲ್ಲಯ್ಯ, ದೇವರಾಜ್, ಮಲ್ಲೇಶ್, ವಕೀಲ ಕೃಷ್ಣಯ್ಯ, ಡಾ.ದಿವಾಕರ್, ಮಹದೇವಯ್ಯ, ಸಿದ್ದರಾಜು ಇತರರಿದ್ದರು.



ಕಾರ್ಯಕ್ರಮವನ್ನು ತಹಸೀಲ್ದಾರ್ ಶ್ರೀನಿವಾಸ್ ಉದ್ಘಾಟಿಸಿದರು.

ಉಚಿತ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ



ಚುಂಚನಹಳ್ಳಿಯಲ್ಲಿ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಂಜನಗೂಡು, ಮಾ.4– ಧೂಳಿನಿಂದ ಗ್ರಾಮಸ್ಥರಿಗೆ ಅನಾರೋಗ್ಯ ಕಾಡುತ್ತಿದೆ. ಆದಷ್ಟು ಧೂಳಿನಿಂದ ಗ್ರಾಮಸ್ಥರು ದೂರವಿರಬೇಕು ಎಂದು ಮೈಸೂರು ಸ್ಪಂದನ ಹಾಸ್ಪಿಟಲ್ ವೈದ್ಯ ಡಾ.ಅವಿನಾಶ್ ಎಚ್ಚರಿಕೆ ನೀಡಿದರು.

ತಾಲೂಕಿನ ಚುಂಚನಹಳ್ಳಿಯಲ್ಲಿ ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮಹಾರಾಜ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ವಾರ್ಷಿಕ ಶಿಬಿರದಲ್ಲಿ ಗ್ರಾಮಸ್ಥರಿಗೆ ಡಾ.ಅಗರ್ವಾಲ್ಸ್ ಕಣ್ಣಿನ ಆಸ್ಪತ್ರೆ ಮೈಸೂರು, ಸ್ಪಂದನ ಹಾಸ್ಪಿಟಲ್ ಮೈಸೂರು ಇವರ ವತಿಯಿಂದ ನಡೆದ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ಚುಂಚನಹಳ್ಳಿಯಲ್ಲಿ ಯಥೇಚ್ಛವಾಗಿ ಧೂಳಿನ ಕಣಗಳು ಬರುತ್ತಿರುವುದರಿಂದ ಮಕ್ಕಳು, ವೃದ್ಧರು ಮತ್ತು ಮಹಿಳೆಯರು ಕಣ್ಣಿನ ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. ಗ್ರಾಮದ ಮುಖ್ಯ ರಸ್ತೆಯಲ್ಲಿ ಹೆಚ್ಚಾಗಿ ಧೂಳು ಕಂಡು ಬರುತ್ತಿದೆ. ಇದರಿಂದ ಚರ್ಮ ರೋಗವೂ ಹರಡುತ್ತದೆ. ಕಣ್ಣಿನ ಪೊರೆ ಸಮಸ್ಯೆ, ಧೂಳಿನಿಂದ ಸೋಂಕು, ಕಣ್ಣಿನಲ್ಲಿ ಉರಿ ಬರುವುದು, ಕಣ್ಣು ಕೆಂಪಾಗುವುದು, ನೀರು ಸೋರುವುದು ಇದು ಧೂಳಿನಿಂದ ಬರುವ ಲಕ್ಷಣವಾಗಿದೆ. ಧೂಳಿನಿಂದ ಅಲರ್ಜಿ ಬರುತ್ತದೆ ಶ್ವಾಸಕೋಶಕ್ಕೆ ತೊಂದರೆಯಾಗುತ್ತದೆ. ಕೆಮ್ಮು ಮತ್ತು ಕಫ ಬರುತ್ತಿದ್ದು, ಶುಚಿತ್ವ ಕಾಪಾಡಿಕೊಳ್ಳಬೇಕು ಎಂದರು.

ರಸ್ತೆ ಡಾಂಬರೀಕರಣ ಮಾಡಿದರೆ ಧೂಳಿನಿಂದ ಗ್ರಾಮಸ್ಥರ ಆರೋಗ್ಯ ಕಾಪಾಡಬಹುದು. ಶಾಲೆ ಪಕ್ಕದಲ್ಲೇ ಮುಖ್ಯರಸ್ತೆ ಹಾದು ಹೋಗಿರುವುದರಿಂದ ಶಾಲೆಯ ಮಕ್ಕಳಿಗೂ ಧೂಳಿನ ಕಣಗಳು ಸೇರಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಆದ್ದರಿಂದ ಗ್ರಾಮಸ್ಥರು ಧೂಳಿನಿಂದ ನಮ್ಮ ಆರೋಗ್ಯ ರಕ್ಷಣೆ ಮಾಡಿಕೊಳ್ಳಬೇಕು ಎಂದರು.

ಈ ವೇಳೆ ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿಗಳಾದ ಡಾ.ಎಸ್. ಕೃಷ್ಣಪ್ಪ, ಡಾ.ಪಿ. ಎಸ್.ಮಧುಸೂಧನ್, ಶಿಬಿರದ ನಾಯಕರಾದ ಭಾರ್ಗವ್, ಭಾಗ್ಯಲಕ್ಷ್ಮಿ, ವನಜಾಕ್ಷಿ, ಮೋಹನ್ ಸೇರಿದಂತೆ ಹಲವರಿದ್ದರು.

8ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.4– ಸಮಾಜ ಕಲ್ಯಾಣ ಇಲಾಖೆಯಿಂದ 2025–26ನೇ ಶೈಕ್ಷಣಿಕ ಸಾಲಿಗೆ ಪ.ಜಾತಿ ಹಾಗೂ ಪ.ಜಾತಿಯ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಗಂಡು ಮಕ್ಕಳಿಗೆ ಶ್ರೀರಾಮಕೃಷ್ಣ ವಿದ್ಯಾಶಾಲೆ ಮೈಸೂರು ಇಲ್ಲಿಗೆ 8ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಕಚೇರಿ ಅಥವಾ ಆಯಾ ತಾಲೂಕಿನ ಸಹಾಯಕ ನಿರ್ದೇಶಕರ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಮಾ.25 ಕೊನೆ ದಿನ. ಏ.12 ಬೆಳಗ್ಗೆ 10 ಗಂಟೆಗೆ ಪ್ರವೇಶ ಪರೀಕ್ಷೆಯನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ ಮೈಸೂರು ಇಲ್ಲಿ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಗ್ರಾಮಗಳ ಅಭಿವೃದ್ಧಿಗೆ ಎಲ್ಲರ ಸಹಕಾರ ಮುಖ್ಯ



ಗ್ರಾಪಂ ಅಧ್ಯಕ್ಷರಾಗಿ ದಿನೇಶ್ ಅಧಿಕಾರ ಸ್ವೀಕರಿಸಿದರು.

ಮಲ್ಲುಂಡಿ, ಮಾ.4– ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಎಲ್ಲಾ ಸದಸ್ಯರ ಸಹಕಾರ ಮುಖ್ಯ ಎಂದು ಹೆಡಿಯಾಲ ಗ್ರಾಪಂ ಅಧ್ಯಕ್ಷ ದಿನೇಶ್ ತಿಳಿಸಿದರು.

ಹೆಡಿಯಾಲ ಗ್ರಾಪಂ ಆವರಣದಲ್ಲಿ ನಡೆದ ಅಧಿಕಾರ ಸ್ವೀಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಪಂನ ಎಲ್ಲಾ ಸದಸ್ಯರ ಸಹಕಾರದಿಂದ ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು. ಅಲ್ಲದೇ ಕುಡಿಯುವ ನೀರು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಮುಂದಾಗುತ್ತೇನೆ ಎಂದರು. ಈ ವೇಳೆ ಈ ಹಿಂದಿನ ಅಧ್ಯಕ್ಷೆ ಮಹಾದೇವಿ ಅವರು ಅಕಾಲಿಕ ನಿಧನರಾಗಿದ್ದರಿಂದ ಉಪಾಧ್ಯಕ್ಷ ದಿನೇಶ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

ಈ ಸಂದರ್ಭ ಪಿಡಿಓ ಕರಿಯಪ್ಪ, ಗ್ರಾಪಂ ಸದಸ್ಯ ಗೋವಿಂದರಾಜು, ಅಶ್ರಫ್ ಅಲಿ, ಚನ್ನಪ್ಪ, ಮುಖಂಡರಾದ ಹುಚ್ಚೇಗೌಡ, ಗುರುಮಲ್ಲಪ್ಪ, ಶಂಭಪ್ಪ, ಮಹದೇವಸ್ವಾಮಿ, ಪರಶಿವಪ್ಪ, ಕಾಳಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ಸೋಲನ್ನು ಗೆಲುವಿನ ಮೆಟ್ಟಿಲಾಗಿ ಸ್ವೀಕರಿಸಿ



ವಿಜೇತರಾದ ಮೈಸೂರಿನ ಫ್ರೆಂಡ್ಸ್ ಕ್ರಿಕೆಟರ್ಸ್‌ಗೆ ಮಾಜಿ ಪುರಸಭಾ ಅಧ್ಯಕ್ಷ ಮುನಾವರ್ ಪಾಷ ಬಹುಮಾನ ವಿತರಿಸಿದರು.

ಬನ್ನೂರು, ಮಾ.4– ಯಾವುದೇ ಪಂದ್ಯವಾದರೂ ಸೋಲು ಗೆಲುವು ಇದ್ದೇ ಇರುತ್ತದೆ. ಸೋತೆನೆಂದು ಹತಾಶರಾಗದೇ ಸೋಲನ್ನೇ ಗೆಲುವಿನ ಮೆಟ್ಟಿಲಾಗಿ ಸ್ವೀಕರಿಸಿಎಂದು ವಕೀಲ ಬಿ.ಶಿವಮೂರ್ತಿ ತಿಳಿಸಿದರು.

ಪಟ್ಟಣದಲ್ಲಿ ಜೈಭೀಮ್ ಯೂತ್ ಕ್ರಿಕೆಟರ್ಸ್ ವತಿಯಿಂದ ನಡೆದ ಜೈ ಭೀಮ್ ಪ್ರೀಮಿಯರ್ ಲೀಗ್–3 ಸುನೀಲ್ ಬೋಸ್ ಟ್ರೋಫಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ ಮಾತನಾಡಿದರು. ಜೈ ಭೀಮ್ ಪ್ರೀಮಿಯರ್ ಲೀಗ್–3ರ ವಿಜೇತರಾದ ಮೈಸೂರಿನ ಫ್ರೆಂಡ್ಸ್ ಕ್ರಿಕೆಟರ್ಸ್‌ಗೆ 30 ಸಾವಿರ ನಗದು ಹಾಗೂ ಸುನೀಲ್ ಬೋಸ್ ಟ್ರೋಫಿ, ದ್ವಿತೀಯ ಬಹುಮಾನ ಹಲಗೂರಿನ ಕ್ರಿಕೆಟರ್ಸ್‌ಗೆ 15 ಸಾವಿರ ನಗದು ಹಾಗೂ ಟ್ರೋಫಿ, ತೃತೀಯ ಬಹುಮಾನ ಬನ್ನೂರಿನ ಲಕ್ಕಿ ಸ್ಟಾರ್ ತಂಡ ಟ್ರೋಫಿ ಹಾಗೂ 5 ಸಾವಿರ ನಗದು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ವಕೀಲ ಸಂಘದ ಖಜಾಂಚಿ ಮಹದೇವ ಸ್ವಾಮಿ, ಪುರಸಭೆ ನಾಮ ನಿರ್ದೇಶಿತ ಸದಸ್ಯ ಆರ್.ಶಿವಣ್ಣ, ಜಮರಾನ್, ದೊಡ್ಡಯಜಮಾನ್ ಬಿ.ಡಿ.ಜಯಮುತ್ತು, ಪ್ರತಾಪ್, ನಕುಲ್ ಇತರರಿದ್ದರು.


ಕೆ.ಎಂ.ಮೊಗಣ್ಣ ನಿಧನ



ಸರಗೂರು, ಮಾ.4– ಪಟ್ಟಣದ ಕೆಇಬಿ ಇಲಾಖೆ ನಿವೃತ್ತ ನೌಕರ ಕೆ.ಎಂ.ಮೊಗಣ್ಣ (63) ಸೋಮವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಣಸೂರಿನ ಕಟ್ಟೆಮಳಲವಾಡಿ ಗ್ರಾಮದ ರುದ್ರಭೂಮಿಯಲ್ಲಿ ಮಂಗಳವಾರ ನಡೆಯಿತು.

ಆಲಗೂಡು ಪಿಎಸಿಎಸ್ ಚುನಾವಣೆಯಲ್ಲಿ ನಮ್ಮ ತಂಡ ಬೆಂಬಲಿಸಿ

ಸಂಘದ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ಮನವಿ



ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ತಮ್ಮ ತಂಡದೊಂದಿಗೆ ಕೇತಹಳ್ಳಿ ಗ್ರಾಮದಲ್ಲಿ ಮತಯಾಚಿಸಿದರು.

ತಿ.ನರಸೀಪುರ, ಮಾ.4– ಆಲಗೂಡು ಸಹಕಾರ ಸಂಘದಲ್ಲಿ ಆಮೂಲಾಗ್ರ ಬದಲಾವಣೆ ತರುವ ಮೂಲಕ ಅಭಿವೃದ್ಧಿಗೆ ಮುಂದಾಗಿರುವ ನಮ್ಮ ತಂಡವನ್ನು ಚುನಾವಣೆಯಲ್ಲಿ ಬೆಂಬಲಿಸುವಂತೆ ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಬಿ.ವೀರಭದ್ರಪ್ಪ ಮನವಿ ಮಾಡಿದರು.

ಆಲಗೂಡು ಪಿಎಸಿಎಸ್ ನಿರ್ದೇಶಕರ ಆಯ್ಕೆಗಾಗಿ ಭಾನುವಾರ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಮಂಗಳವಾರ ಕೇತಹಳ್ಳಿ ಗ್ರಾಮದಲ್ಲಿ ತಮ್ಮ ಬಣದ ಅಭ್ಯರ್ಥಿಗಳೊಂದಿಗೆ ಮಾರಮ್ಮನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಘದಲ್ಲಿ ಆಮೂಲಾಗ್ರ ಬದಲಾವಣೆ ಪ್ರಸ್ತುತ ಅವಶ್ಯಕವಾಗಿದ್ದು, ಈ ಹಿಂದೆ ಅಧ್ಯಕ್ಷನಾಗಿದ್ದ ವೇಳೆ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ಗುರುತಿಸಿ ನಮ್ಮ ತಂಡಕ್ಕೆ ಮತ ನೀಡಿ ಗೆಲ್ಲಿಸುವ ಮೂಲಕ ಮತ್ತೊಮ್ಮೆ ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡುವಂತೆ ಅವರು ಮನವಿ ಮಾಡಿದರು.

ಕೃಷಿ ಪತ್ತಿನ ಸಹಕಾರ ಸಂಘ ನಿಜಕ್ಕೂ ಸಹಕಾರ ಕ್ಷೇತ್ರದಲ್ಲಿ ಮಾದರಿಯಾಗಿದೆ. ನಮ್ಮ ಸಂಘ ಬ್ಯಾಂಕ್ ರೂಪದಲ್ಲಿ ದೊಡ್ಡಮಟ್ಟದಲ್ಲಿ ಬೆಳೆಯಬೇಕು. ಸಂಘದ ಪ್ರತಿಯೊಬ್ಬರು ಆರ್ಥಿಕವಾಗಿ ಸಬಲರಾಗಬೇಕು ಎಂಬ ಆಶಯ ನಮ್ಮದಾಗಿದೆ. ಕಳೆದ ಬಾರಿ ಅಧ್ಯಕ್ಷನಾಗಿದ್ದರೂ ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡಲು ನಮ್ಮ ಸದಸ್ಯರೇ ಅವಕಾಶ ಮಾಡಿಕೊಡದೇ ಷಡ್ಯಂತ್ರ ಮಾಡಿ ನನ್ನನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದರು. ಸಿಕ್ಕ ಅವಧಿಯಲ್ಲಿ ಉತ್ತಮ ಕೆಲಸ ಮಾಡಿ ಷೇರುದಾರರು ಹಾಗೂ ಸಂಘದ ಸದಸ್ಯರಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದಾನೆ. ಈ ಬಾರಿ ಮತ್ತೊಮ್ಮೆ ಚುನಾವಣೆಯಲ್ಲಿ ಅವಕಾಶಕ್ಕಾಗಿ ನಿಮ್ಮ ಮನೆ ಬಾಗಿಲಿಗೆ ಬಂದಿದ್ದೇನೆ. 10 ಅಭ್ಯರ್ಥಿಗಳ ತಂಡದೊಂದಿಗೆ ಸಂಘದಲ್ಲಿ ಏನಾದರೂ ಸಾಧಿಸಬೇಕೆಂಬ ಛಲ ಹೊಂದಿದ್ದು, ಮತದಾರರು ನನಗೆ ಮತ್ತೊಂದು ಅವಕಾಶ ಕಲ್ಪಿಸಿಕೊಡುವ ಮೂಲಕ ಕಳೆದ ಬಾರಿ ನನಗಾದ ಅನ್ಯಾಯಕ್ಕೆ ನ್ಯಾಯ ದೊರಕಿಸಿಕೊಡಬೇಕಿದೆ ಎಂದು ಮನವಿ ಮಾಡಿದರು. ಈ ವೇಳೆ ಅಭ್ಯರ್ಥಿಗಳಾದ ಕೆ.ಜಿ. ಉಮೇಶ್, ನಾಗೇಶ್, ಪರಶಿವ, ಪುಟ್ಟತಾಯಮ್ಮ, ಮಹದೇವೇಗೌಡ, ಶಿವಕುಮಾರ, ಬಸಪ್ಪ, ಸಿದ್ದರಾಜು, ಹುಚ್ಚೇಗೌಡ, ಸುಂದ್ರಮ್ಮ, ಮುಖಂಡರಾದ ಬಿ.ಮಲ್ಲಣ್ಣ, ನಿಂಗಶೆಟ್ಟಿ, ಶಿವಣ್ಣ, ಹೊಸೂರುಂಡಿ ರವಿ, ಹೆಳವರ ಹುಂಡಿ ನಟರಾಜು, ಕೇತಹಳ್ಳಿ ಮಹದೇವಪ್ಪ, ಬಸವಣ್ಣ, ಶಿವಣ್ಣ, ಬಸವರಾಜು, ಪರಶಿವಮೂರ್ತಿ, ಚೌಡಶೆಟ್ಟಿ, ಕೆ.ಎಂ.ಮಹದೇವಪ್ಪ, ಮಾದಪ್ಪ, ಗ್ರಾಪಂ ಸದಸ್ಯ ಜಗದೀಶ್ ಸೇರಿದಂತೆ ಇತರರಿದ್ದರು.

ಚುನಾವಣೆಗೆ ಸ್ಪರ್ಧಿಸಿರುವ ಬಿ.ವೀರಭದ್ರಪ್ಪನವರ ತಂಡ ಉತ್ತಮವಾಗಿದ್ದು, ಸಂಘದ ಅಭಿವೃದ್ಧಿ ಮಾಡುವ ತುಡಿತ ಹೊಂದಿದ್ದಾರೆ. ಕಳೆದ ಬಾರಿ ವೀರಭದ್ರಪ್ಪ ಅಧ್ಯಕ್ಷರಾಗಿದ್ದ ವೇಳೆ ರೈತರಿಗೆ ಸಂಘದಿಂದ ದೊರಕುವ ಎಲ್ಲ ಸವಲತ್ತುಗಳನ್ನು ದೊರಕಿಸಿಕೊಟ್ಟಿದ್ದಾರೆ. ಹಾಗಾಗಿ ಈ ಬಾರಿ ಗ್ರಾಮಸ್ಥರು ಬಿ.ವೀರಭದ್ರಪ್ಪ ತಂಡವನ್ನು ಬೆಂಬಲಿಸಲು ನಿರ್ಧರಿಸಿದ್ದೇವೆ.

-ನಿಂಗಪ್ಪಣ್ಣ, ಕೇತಹಳ್ಳಿ ಗ್ರಾಮದ ಹಿರಿಯ ಮುಖಂಡ.

ದಲಿತ ಹೋರಾಟಗಳು ದಿಕ್ಕೆಡುತ್ತಿರುವ ಬಗ್ಗೆ ಹೋರಾಟಗಾರ ಮಾವಳ್ಳಿ ಶಂಕರ್ ಆತಂಕ

ದಸಂಸ ಎರಡೂ ಬಣ ಒಗ್ಗೂಡುವ ಅನಿವಾರ್ಯತೆ ಮನವರಿಕೆ

ಮೈಸೂರು, ಮಾ.4(ಎಂಟಿವೈ)– ಕೋಮುವಾದಿ ಮತ್ತು ಕಾರ್ಪೊರೇಟ್ ವ್ಯವಸ್ಥೆಯಿಂದ ಮುಂಬರುವ ದಿನಗಳಲ್ಲಿ ದೇಶದಲ್ಲಿ ಘೋರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆ ಹೆಚ್ಚಾಗಿದ್ದು, ಇದನ್ನು ತೀವ್ರವಾಗಿ ವಿರೋಧಿಸಲು ದಸಂಸದ ಎಲ್ಲಾ ಬಣಗಳು ಒಂದುಗೂಡಲೇಬೇಕಾದ ಅನಿವಾರ್ಯತೆ ಇದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಸಂಘಟನೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ದಲಿತ ಚಳವಳಿಯ ವರ್ತಮಾನದ ಸವಾಲುಗಳು ಮತ್ತು ಮಾರ್ಗೋಪಾಯಗಳು ವಿಚಾರ ಸಂಕಿರಣ ಹಾಗೂ ಮೈಸೂರು ವಿಭಾಗೀಯ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಕೋಮುವಾದಿ ಶಕ್ತಿ ಹಾಗೂ ಕಾರ್ಪೊರೇಟ್ ವ್ಯವಸ್ಥೆ ರಾಜಕಾರಣವನ್ನು ಹತೋಟಿಯಲ್ಲಿಟ್ಟುಕೊಂಡು ತಬ್ಬಿಬ್ಬುಗೊಳಿಸುತ್ತಿದೆ. ಇದರಿಂದಾಗಿ ಸರ್ವಾಧಿಕಾರಿಗಳ ಹಿಡಿತದಲ್ಲಿ ಆಡಳಿತ ವರ್ಗ ಸಿಲುಕಿದೆ. ಇಂತಹ ಪರಿಸ್ಥಿತಿಯಿಂದಾಗಿ ಮುಂಬರುವ ದಿನಗಳಲ್ಲಿ ದೇಶ ಘೋರ ಪರಿಸ್ಥಿತಿ ಎದುರಿಸುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾದ ಹೋರಾಟ ರೂಪಿಸಲು ದಸಂಸದ ಎಲ್ಲ ಬಣಗಳು ಒಂದಾಗುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಶಾಲೆಯ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಸಂಘಟನೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ದಲಿತ ಚಳವಳಿಯ ವರ್ತಮಾನದ ಸವಾಲುಗಳು ಮತ್ತು ಮಾರ್ಗೋಪಾಯಗಳು ವಿಚಾರ ಸಂಕಿರಣದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಇಂದು ಮಾಹಿತಿ ತಂತ್ರಜ್ಞಾನ ಯುಗ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಇದರಿಂದಾಗಿ ಮಂಗಳ ಗ್ರಹಕ್ಕೆ ಕಾಲಿಡಲು ಯಶಸ್ವಿಯಾಗಿದ್ದೇವೆ. ಆದರೆ ಮಾನಸಿಕ ಸ್ಥಿತಿ ಮಾತ್ರ ಆದಿ ಮಾನವನಂತೆಯೇ ಇದೆ. ಕೆಲವು ಶಕ್ತಿಗಳಿಗೆ ಸಮಾನತೆ ಸಾರುವ ಸಂವಿಧಾನ ಬೇಕಾಗಿಲ್ಲ. ಜನರೇ ಆಯ್ಕೆ ಮಾಡಿರುವ ಸಂಸತ್ತು ಇರುವಾಗ ಧರ್ಮ ಸಂಸತ್ ಸಭೆಗಳು ನಡೆಯುತ್ತವೆ. ನಮ್ಮ ಮನಸ್ಸಿನ ಮೇಲೆ ಮಾನಸಿಕ ಯುದ್ಧ ಸಾರಲಾಗಿದೆ. ವೈದಿಕಶಾಹಿಯ ದಾಳಿ ಮುಂದುವರಿದಿದೆ. ಬುದ್ಧನನ್ನು ನೆಲದಿಂದ ಓಡಿಸಿದರು. ಸಮಾನತೆ ಸಾರಿದ ಬಸವಣ್ಣ ವೈದಿಕಶಾಹಿ ವ್ಯವಸ್ಥೆ ಕಿರುಕುಳ ಕೊಟ್ಟಿತು. ಡಾ.ಅಂಬೇಡ್ಕರ್ ಅವರು ಸನಾತನ ಹಿಂದೂಗಳ ವಿರೋಧಿಯಲ್ಲ ಎಂದು ಪ್ರಚಾರ ಮಾಡುತ್ತಿದ್ದಾರೆ. ಅಂಬೇಡ್ಕರ್‌ರನ್ನು ಸಂಪೂರ್ಣವಾಗಿ ಹಿಂದೂಕರಣ ಮಾಡಲಾಗುತ್ತಿದೆ. ಈ ಬಗ್ಗೆ ಎಲ್ಲರೂ ಜಾಗೃತರಾಗಬೇಕಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಯಾರ ವಿರುದ್ಧ ಹೋರಾಟ ಮಾಡಬೇಕು ಎಂದು ಯೋಚಿಸುವಂತಾಗಿದೆ. ಬಿಜೆಪಿಯು ದಲಿತರು, ಸಂವಿಧಾನ, ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಒಪ್ಪದ ಪಕ್ಷವಾಗಿದೆ. ನಮಗೇ ರಾಜಕೀಯವಾಗಿ ಆಯ್ಕೆಗಳಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ತರಲು ಹೋರಾಟಗಳಾಗಿದೆ. ಅನೇಕರ ಮೇಲೆ ಪ್ರಕರಣ ದಾಖಲಾಗಿದೆ. ದಲಿತ ಸಂಘರ್ಷ ಸಮಿತಿ, 50 ವರ್ಷಗಳಲ್ಲಿ ಅನೇಕ ಏಳುಬೀಳುಗಳನ್ನು ಕಂಡಿದೆ. ಮಹಾಸಾಗರದಂತೆ ದಲಿತರು, ಶೋಷಿತರ ಪರವಾಗಿ ಕೆಲಸ ಮಾಡಿದೆ. ಅಂದಿನ ಹೋರಾಟಗಾರರು ಬರಿಗಾಲಲ್ಲಿ ಊರೂರು ಸುತ್ತಿ ಜನರ ಪರವಾಗಿ ಹೋರಾಟ ಮಾಡಿದರು. ಅವರಿಗೆ ಯಾವ ಸೌಲಭ್ಯ ಇಲ್ಲದಿದ್ದರೂ ಸ್ವಾಭಿಮಾನ, ಛಲ ಇತ್ತು. ಇಂದಿನ ಹೋರಾಟಗಾರರಲ್ಲಿ ಎಲ್ಲ ಸೌಕರ್ಯ ಇದೆ. ಸ್ವಾಭಿಮಾನ, ಛಲವೇ ಕಣ್ಮರೆಯಾಗಿದೆ ಎಂದು ವಿಷಾದಿಸಿದರು.

ಹಿರಿಯ ರಂಗಕರ್ಮಿ ಹೆಚ್. ಜನಾರ್ದನ (ಜನ್ನಿ) ಮಾತನಾಡಿ, ದಸಂಸ ಜಾತಿ ವಿನಾಶಕ್ಕಾಗಿ, ಭೂಮಿಗೋಸ್ಕರ ಅನೇಕ ಹೋರಾಟವನ್ನು ಮಾಡುತ್ತ ಬಂದಿದೆ. ದಸಂಸ ಚಳವಳಿ ಎಂದರೆ ವಿಧಾನಸೌಧದ ಕಟ್ಟಡಗಳು ನಡುಗುತ್ತಿದ್ದವು. ಇವತ್ತು ಆ ಪರಿಸ್ಥಿತಿ ಇದೆಯೇ? ಸಂವಿಧಾನ ಸಂರಕ್ಷಣೆಗೆ ಎಚ್ಚರಿಕೆ ವಹಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಚಂದ್ರಗುಪ್ತ ವಿಚಾರ ಮಂಡಿಸಿದರು. ಮಲ್ಲೇಶ್, ದೊಡ್ಡಿಂದುವಾಡಿ ಸಿದ್ದರಾಜು, ಹಾಲೇಶಪ್ಪ, ಕುಮಾರ್ ಕರಡಿಪುರ, ವಸಂತ್, ಮಹದೇವಮ್ಮ, ಮಲ್ಲಹಳ್ಳಿ ನಾರಾಯಣ, ಪ್ರೊ.ನಂಜುಂಡಯ್ಯ, ಹೆಚ್.ಡಿ.ಕೋಟೆಯ ಅನುಷಾ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FORST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾತ್ರಿ ಗಸ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿಗೆ ನಿಂದನೆ, ಹಲ್ಲೆ ಆರೋಪ: ಮೂವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಮಾ.4(ಎಸ್‌ಬಿಡಿ)– ರಾತ್ರಿ ಗಸ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದಡಿ ನಗರದ ಪಡುವಾರಹಳ್ಳಿಯ ಮರಿಸ್ವಾಮಿ ಸೇರಿದಂತೆ ಮೂವರ ವಿರುದ್ಧ ಮೈಸೂರಿನ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಿ ಪುರಂ ಠಾಣೆಯ ಸಿಬ್ಬಂದಿ ಕೆ.ಎನ್.ಕೌಶಿಕ್ ಹಾಗೂ ಹೆಚ್.ಎನ್. ಮೊಹಮ್ಮದ್ ರೆಹಮಾನ್, ತಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿ, ಅವಾಚ್ಯವಾಗಿ ಬೈಯ್ದು, ಹಲ್ಲೆ ನಡೆಸಿರುವುದಾಗಿ ಕೌಶಿಕ್ ನೀಡಿರುವ ದೂರಿನನ್ವಯ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

ದೂರಿನಲ್ಲಿರುವುದು: ನಾನು ಹಾಗೂ ಮೊಹಮ್ಮದ್ ರೆಹಮಾನ್ ಸೋಮವಾರ ರಾತ್ರಿ ಗಸ್ತಿನಲ್ಲಿದ್ದೆವು. ಬೆಳಗಿನ ಜಾವ 3 ಗಂಟೆ ಸಮಯದಲ್ಲಿ ವಿವಿ ಮೊಹಲ್ಲಾ 8ನೇ ಕ್ರಾಸ್‌ನಿಂದ ಆದಿಪಂಪ ರಸ್ತೆ ಕಡೆಗೆ ಹೋಗುವಾಗ ಎಂಪೈರ್ ಹೋಟೆಲ್ ಮುಂಭಾಗ ಯಾರೋ ಮೂರು ಜನ ಹೋಟೆಲ್ ಬಳಿ ಜೋರಾಗಿ ಗಲಾಟೆ ಮಾಡುತ್ತಾ ನಿಂತಿದ್ದರು. ನಾವಿಬ್ಬರೂ ಅವರ ಬಳಿ ಹೋಗಿ, ಏಕೆ ಗಲಾಟೆ ಮಾಡುತ್ತೀರಾ ಮನೆಗೆ ಹೋಗಿ ಎಂದು ಹೇಳಿದೆವು. ಆಗ ಅವರು ಮನೆಗೆ ಹೋಗಿ ಎಂದು ಹೇಳಲು ನೀವ್ಯಾರು?. ಇದೇನು ಪೊಲೀಸರ ರಸ್ತೇನಾ? ರಾತ್ರಿಯೆಲ್ಲಾ ಸುತ್ತಾಡಿ ತೊಂದರೆ ಕೊಡುತ್ತೀರಾ ಎಂದು ಜೋರಾಗಿ ಬೈಯ್ಯಲು ಶುರು ಮಾಡಿದರು.

ಈ ವೇಳೆ ಓರ್ವ ನನ್ನ ಮುಖಕ್ಕೆ ಕೈಗಳಿಂದ ಹೊಡೆದರು. ಆಗ ಪೊಲೀಸರಿಗೆ ಹಲ್ಲೆ ಮಾಡುತ್ತೀಯಾ ಎಂದು ಪ್ರಶ್ನಿಸಿದಾಗ ಒಬ್ಬ ಅಲ್ಲಿಂದ ಹೊರಟು ಹೋದ. ಉಳಿದಿಬ್ಬರು ನಮ್ಮನ್ನು ತಳ್ಳಾಡಿ, ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. ಗಲಾಟೆ ಮಾಡುತ್ತಿದ್ದ ವ್ಯಕ್ತಿಯು ಬೈಕ್‌ನಲ್ಲಿ ನಂಬರ್ ಪ್ಲೇಟ್ ಇಲ್ಲದ ಕಾರಣ, ಹೀಗೆ ನಂಬರ್ ಪ್ಲೇಟ್ ಇಲ್ಲದೆ ಬೈಕ್ ಓಡಿಸುವಂತಿಲ್ಲ ಕೀ ಕೊಡಿ ಎಂದು ಕೇಳಿದೆ. ಅದಕ್ಕೆ ಆತ ನನ್ನ ಬೈಕ್ ಅನ್ನು ನನಗೆ ಇಷ್ಟ ಬಂದಂತೆ ಓಡಿಸುತ್ತೇನೆ, ಅದನ್ನು ಕೇಳಲು ನೀನ್ಯಾರು ಎಂದು ಹೊಡೆಯಲು ಬಂದ. ಆಗ ನನ್ನ ರಕ್ಷಣೆಗೆ ಧಾವಿಸಿದ ಮೊಹಮ್ಮದ್ ರೆಹಮಾನ್‌ಗೂ ಬೈಕ್ ಕೀಯಿಂದ ಹೊಡೆದ. ಆದ್ದರಿಂದ ರಾತ್ರಿ ಗಸ್ತಿನ ಅಧಿಕಾರಿ ನಾಗರಾಜನಾಯಕ ಅವರಿಗೆ ಕರೆ ಮಾಡಿ, ವಿಷಯ ತಿಳಿಸಿದೆವು. ಕೂಡಲೇ ಅವರು ಗರುಡಾ ವಾಹನದಲ್ಲಿ ಗಲಾಟೆಯಾದ ಸ್ಥಳಕ್ಕೆ ಬಂದು ವಿಚಾರಿಸಿದಾಗ ಹಲ್ಲೆ ನಡೆಸಿದವರು ಮರಿಸ್ವಾಮಿ ಹಾಗೂ ಸ್ನೇಹಿತರು ಎಂದು ತಿಳಿಯಿತು ಎಂದು ಪೊಲೀಸ್ ಸಿಬ್ಬಂದಿ ಕೌಶಿಕ್, ಠಾಣೆಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

ವಿಡಿಯೋ ವೈರಲ್: ಈ ಘಟನೆಗೆ ಸಂಬಂಧಿಸಿದ್ದು ಎನ್ನಲಾಗಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅದರಲ್ಲಿ ಮರಿಸ್ವಾಮಿ ಹಾಗೂ ಪೊಲೀಸ್ ಸಿಬ್ಬಂದಿ ನಡುವಿನ ಮಾತಿನ ಚಕಮಕಿ ಸೆರೆಯಾಗಿದೆ. ಅಲ್ಲದೆ ಇಬ್ಬರೂ ಅವಾಚ್ಯ ಶಬ್ದಗಳನ್ನು ಬಳಕೆ ಮಾಡಿರುವಂತೆ ಕಂಡುಬಂದಿದೆ.

ಬಸವಣ್ಣನವರ 12ನೇ ಶತಮಾನದ ಚಿಂತನೆ 21ನೇ ಶತಮಾನದಲ್ಲೂ ಸಾಕಾರಗೊಂಡಿಲ್ಲ!

ಹಿರಿಯ ಸಾಹಿತಿ ಪ್ರೊ॥ ಅರವಿಂದ ಮಾಲಗತ್ತಿ ವಿಷಾದ

ಮೈಸೂರು,ಮಾ.4(ಎಂಟಿವೈ)– ಬಸವಣ್ಣನವರ 12ನೇ ಶತಮಾನದ ಆಲೋಚನೆಗಳು 21ನೇ ಶತಮಾನದಲ್ಲೂ ಸಾಕಾರಗೊಳಿಸಲು ಆಗದೆ ಇರುವ ಬೌದ್ಧಿಕ ದಾರಿದ್ರ್ಯದಲ್ಲಿ ನಾವಿದ್ದೇವೆ ಎಂದು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ವಿಷಾದಿಸಿದ್ದಾರೆ.

ಮೈಸೂರಿನ ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಕಾಲೇಜಿನ ಸಭಾಂಗಣದಲ್ಲಿ ಕಾಲೇಜಿನ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಘಟಕ ಹಾಗೂ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ವತಿಯಿಂದ ಮಂಗಳವಾರ ನಡೆದ 'ವಚನ ಸಾಹಿತ್ಯ ವರ್ತಮಾನದ ಸ್ಪಂದನೆ' ಕುರಿತ ಒಂದು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಸವಣ್ಣನವರ ಚಿಂತನೆಗಳು ವರ್ತಮಾನದ ಜತೆಗೆ ಸಾರ್ವಕಾಲಿಕವಾಗಿದೆ. ಮಹಾತ್ಮ ಗಾಂಧೀಜಿ ಅವರು ಬಸವಣ್ಣನವರ ಆಲೋಚನಾ ಕ್ರಮಗಳನ್ನೂ ಅಳವಡಿಸಿಕೊಂಡಿದ್ದರು. ಆದರೆ, 21ನೇ ಶತಮಾನವಾದರೂ 12ನೇ ಶತಮಾನದ ಬಸವಣ್ಣನವರ ಆಲೋಚನಾ ಕ್ರಮ ಸಾಕಾರಗೊಳಿಸಲು ನಮಗೆ ಸಾಧ್ಯವಾಗಿಲ್ಲ. ಅಂತಹ ಸಂದಿಗ್ಧ ಮನಸ್ಥಿತಿ ಬೇರೂರಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಬಸವ ಧರ್ಮ, ಶರಣ ಧರ್ಮವನ್ನು ಅರ್ಥಮಾಡಿಕೊಂಡಾಗ ಮಾತ್ರ ಮತೀಯ ಚಿಂತನೆಗಳಿಂದ ಹೊರಬರಲು ಸಾಧ್ಯವಾಗುತ್ತದೆ. ಅಲ್ಲದೆ, ಹೊಸ ಮಾರ್ಗಗಳಲ್ಲಿ ಸಾಗಲು ಮಾರ್ಗದರ್ಶನ ಸಿಕ್ಕಂತಾಗುತ್ತದೆ. ಬಸವಣ್ಣನವರನ್ನು ನಾಡಿನ ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಿಸಿದೆ. ಯಾವ ನಾಯಕರ ಆಲೋಚನಾ ಕ್ರಮಗಳು ವರ್ತಮಾನಕ್ಕೆ ಬೇಕಾಗಿವೆಯೋ ಹಾಗೂ ಅಗತ್ಯವಾಗಿವೆಯೋ ಅಂತಹ ನಾಯಕರನ್ನು ಸಾಮಾನ್ಯವಾಗಿ ಎವರ್‌ಗ್ರೀನ್ ಎಂದು ಹೇಳುತ್ತಾರೆ. ಸದಾಕಾಲ ನಿತ್ಯ ನೂತನವಾಗಿರುವಂತಹ ನಾಯಕ ಯಾರಾದರೂ ಕರ್ನಾಟದಲ್ಲಿದ್ದರೆ ಅದು ಬಸವಣ್ಣ ಮಾತ್ರ. ಅವರ ಚಿಂತನೆಗಳು ಸಾರ್ವಕಾಲಿಕವಾದದ್ದು.

ಜಾತಿಯಿಂದ ತನ್ನನ್ನು ತಾನು ನಿರಸನಗೊಳ್ಳುವ ಕ್ರಿಯೆಯಲ್ಲಿ ಬಸವಣ್ಣನವರು ಮುಂದಾಗುತ್ತಾರೆ. ಅಂದರೆ ಬ್ರಾಹ್ಮಣ್ಯತ್ವದ ಪರಿಧಿಯಿಂದ ಹೊರಬರುವ ಕ್ರಿಯೆಯನ್ನು ಬಸವಣ್ಣನವರು ಮಾಡುತ್ತಾರೆ. ಪರಂಪರೆಯನ್ನು ಹೊಂದಿರುವ ಸಾಂಸ್ಕೃತಿಕ ನಾಯಕರು ತುಳಿತಕ್ಕೆ ಒಳಪಟ್ಟವರು ಮೇಲೆ ಬರಬೇಕು ಎಂದು ಹೇಳಿದರು. ಆದರೆ ಬಸವಣ್ಣನವರು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡು ದಾಸಿಯ ಮಗ, ದಾಸನ ಮಗ ಎಂದು ಹೇಳಿಕೊಂಡು ಅವರ ಪಾದಕ್ಕಿಂತ ಕೆಳಗಿಳಿದು ಅವರನ್ನು ಮೇಲಕ್ಕೆ ತಂದರು. ವಸ್ತುನಿಷ್ಠ ಬದಲಾವಣೆಯನ್ನು ಬಸವಣ್ಣ ಮಾಡುತ್ತಿದ್ದರು ಎಂದರು.



ಮೈಸೂರಿನ ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಕಾಲೇಜಿನ ಆವರಣದಲ್ಲಿ ಮಂಗಳವಾರ ನಡೆದ 'ವಚನ ಸಾಹಿತ್ಯ ವರ್ತಮಾನದ ಸ್ಪಂದನೆ' ಕುರಿತ ಒಂದು ದಿನದ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಸಾಹಿತಿ ಡಾ.ಅರವಿಂದ ಮಾಲಗತ್ತಿ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಎಂ.ಎಂ.ಕೆ ಮತ್ತು ಎಸ್.ಡಿ.ಎಂ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಭಾರತಿ, ಕನ್ನಡ ವಿಭಾಗದ ಮುಖ್ಯಸ್ಥೆ ಹಾಗೂ ಸಂಚಾಲಕಿ ಡಾ.ವಿನೋದ, ಐಕ್ಯೂಎಸಿ ಸಂಯೋಜಕಿ ಪ್ರೊ.ಕೆ.ಎಸ್.ಸುಕೃತ, ಮೈಸೂರು ನಗರ ಘಟಕದ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮ.ಗು.ಸದಾನಂದಯ್ಯ ಉಪಸ್ಥಿತರಿದ್ದರು.

ಮತ್ತೆ ಗಡಿ ವಿವಾದದ ಕಿಚ್ಚು ಹಚ್ಚಿದ ಮಹಾರಾಷ್ಟ್ರ ಸರ್ಕಾರ

ಗಡಿ ಉಸ್ತುವಾರಿಗೆ ಇಬ್ಬರು ಸಚಿವರ ನೇಮಕ

ಬೆಳಗಾವಿ: ಕರ್ನಾಟಕ ಸರ್ಕಾರವು ಮಹಾರಾಷ್ಟ್ರದೊಂದಿಗಿನ ತನ್ನ ಗಡಿ ವಿವಾದವು ಮುಗಿದ ಅಧ್ಯಾಯ ಎಂದು ಪದೇ ಪದೇ ಹೇಳುತ್ತಿದ್ದರೂ, ನೆರೆಯ ಸರ್ಕಾರವು ಈ ವಿಷಯವನ್ನು ಕೆದಕುತ್ತಲೇ ಇದೆ. ಈ ವಿವಾದದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿರುವ ಪ್ರಕರಣದ ಹೊರತಾಗಿಯೂ, ಮಹಾರಾಷ್ಟ್ರ ಸರ್ಕಾರವು ತನ್ನ ಇಬ್ಬರು ಸಚಿವರನ್ನು ಗಡಿ ವಿವಾದದ ಉಸ್ತುವಾರಿಯನ್ನಾಗಿ ಹೆಸರಿಸಿದೆ.

ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಸಚಿವ ಚಂದ್ರಕಾಂತ್ ಪಾಟೀಲ್ ಮತ್ತು ಗಣಿ ಸಚಿವ ಶಂಭುರಾಜ್ ದೇಸಾಯಿ ಅವರನ್ನು ಕರ್ನಾಟಕದೊಂದಿಗಿನ ಗಡಿ ವಿವಾದ ಪ್ರಕರಣದ ವಿರುದ್ಧ ಹೋರಾಡುವ ಮಹಾರಾಷ್ಟ್ರದ ಕಾನೂನು ತಂಡದೊಂದಿಗೆ ಸಮನ್ವಯ ಸಾಧಿಸಲು ಆಯ್ಕೆ ಮಾಡಲಾಗಿದೆ. ಬೆಳಗಾವಿ, ಖಾನಾಪುರ, ನಿಪ್ಪಾಣಿ, ಕಾರವಾರ, ಬೀದರ್, ಭಾಲ್ಕಿ, ಇತ್ಯಾದಿ ಸೇರಿದಂತೆ ಕರ್ನಾಟಕದ ಹೆಚ್ಚಿನ ಸಂಖ್ಯೆಯ ಗಡಿ ಪ್ರದೇಶಗಳನ್ನು ಮಹಾರಾಷ್ಟ್ರದೊಂದಿಗೆ ವಿಲೀನಗೊಳಿಸಬೇಕೆಂದು ಮಹಾರಾಷ್ಟ್ರ ಒತ್ತಾಯವಾಗಿದೆ.

ಕರ್ನಾಟಕದ ಕಾನೂನು ತಜ್ಞರು ಮತ್ತು ನಾಯಕರು ಮಹಾರಾಷ್ಟ್ರದ ನಿರ್ಧಾರವನ್ನು 'ರಾಜಕೀಯ ನಡೆ' ಎಂದು ಕರೆದಿದ್ದಾರೆ. ಆದರೆ ಇನ್ನೂ ಹಲವರು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ತನ್ನ ಪ್ರಕರಣವನ್ನು ಬಲಪಡಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ಸರ್ಕಾರವು ಗಡಿ ವಿವಾದ ಪ್ರಕರಣದ ವಿರುದ್ಧ ಹೋರಾಡಲು ಸೂಕ್ತ ಸಂಘಟನಾತ್ಮಕ ಕ್ರಮಗಳನ್ನು ಪ್ರಾರಂಭಿಸಬೇಕು ಎಂದು ಸುಪ್ರೀಂಕೋರ್ಟ್ ವಕೀಲ ಮೋಹನ್ ಕಟರ್ಕಿ ಹೇಳಿದರು. ಮಹಾರಾಷ್ಟ್ರದ ಈ ನಡೆ ಯಾವುದೇ ರೀತಿಯಲ್ಲಿ ಸಹಾಯ ಮಾಡುವುದಿಲ್ಲ ಎಂದು ಕಟರ್ಕಿ ಹೇಳಿದರು. ಸಚಿವರನ್ನು ನೇಮಿಸುವ ಬದಲು, ಕರ್ನಾಟಕ ಸರ್ಕಾರವು ರಾಜ್ಯದ ಗಡಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ದೊಡ್ಡ ಅಧಿಕಾರ ಹೊಂದಿರುವ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕು ಎಂದು ಸಲಹೆ ನೀಡಿದ್ದಾರೆ.

ಇಂತಹ ಕ್ರಮಗಳು ನ್ಯಾಯಾಲಯದಲ್ಲಿ ರಾಜ್ಯವು ತನ್ನ ನಿಲುವನ್ನು ಬಲಪಡಿಸಲು ಸಹಾಯ ಮಾಡುತ್ತದೆ, ಮಹಾರಾಷ್ಟ್ರ ತೆಗೆದುಕೊಂಡ ಗಂಭೀರ ಕ್ರಮಗಳ ಬಗ್ಗೆ ಗಮನ ಸೆಳೆಯುವಾಗ ಗಡಿ ವಿವಾದ ಪ್ರಕರಣವನ್ನು ನಿರ್ಲಕ್ಷಿಸಿದ್ದಕ್ಕಾಗಿ ಕರ್ನಾಟಕ ಸರ್ಕಾರವನ್ನು ಬೆಳಗಾವಿಯ ನಾಯಕ ಅಶೋಕ್ ಚಂದರ್ಗಿ ತರಾಟೆಗೆ ತೆಗೆದುಕೊಂಡರು.

ಕರ್ನಾಟಕವು 2015 ರಿಂದ 2018 ರವರೆಗೆ ಗಡಿ ವಿವಾದ ಪ್ರಕರಣಕ್ಕೆ ಸಚಿವರನ್ನು ನೇಮಿಸಿತ್ತು, ಆದರೆ ಅದರ ನಂತರ ಈ ವಿಷಯವನ್ನು ನಿರ್ಲಕ್ಷಿಸಿತ್ತು ಎಂದು ಅವರು ಹೇಳಿದರು. 2022 ರಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನವದೆಹಲಿಯಲ್ಲಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆದಾಗ ಗಡಿ ವಿವಾದವು ತೆಗೆದುಕೊಂಡ ಗಂಭೀರ ತಿರುವುವನ್ನು ಅವರು ನೆನಪಿಸಿಕೊಂಡರು.

ವಿವಾದದ ಕುರಿತು ಎರಡೂ ರಾಜ್ಯಗಳ ನಡುವೆ ಪರಿಣಾಮಕಾರಿ ಸಮನ್ವಯಕ್ಕಾಗಿ ಪ್ರತಿ ರಾಜ್ಯದಿಂದ ಮೂವರು ಸಚಿವರನ್ನು ಒಳಗೊಂಡ ಸಮನ್ವಯ ಸಮಿತಿಯನ್ನು ರಚಿಸುವಂತೆ ಅಮಿತ್ ಶಾ ಸಿಎಂಗಳಿಗೆ ಸೂಚಿಸಿದ್ದರು ಎಂದು ಚಂದರ್ಗಿ ಸ್ಮರಿಸಿದರು.

ರಾಜ್ಯದಲ್ಲಿ ಸರ್ಕಾರ ಸಿಎಂ ಬದಲಾವಣೆಗೊಂದಲ ಮತ್ತು ಗ್ಯಾರಂಟಿಗಳನ್ನು ಸರಿಯಾಗಿ ಜಾರಿಗೆ ತರಲು ಒತ್ತಡದಲ್ಲಿರುವ ಕಾಂಗ್ರೆಸ್ ಸರ್ಕಾರ, ಈ ಹಂತದಲ್ಲಿ ಗಡಿ ವಿವಾದದ ಬಗ್ಗೆ ಹೆಚ್ಚು ಗಮನ ಹರಿಸುವ ಸಾಧ್ಯತೆಯಿಲ್ಲ ಎಂದು ತೋರುತ್ತದೆ.

ಅಧ್ಯಕ್ಷರ ಅವಧಿ ಮುಗಿಯೋದ್ರಲ್ಲಿ ದಲಿತ ಸಿಎಂ ಮಾಡಿ

ಖರ್ಗೆಯವರಿಗೆ ಕಾರಜೋಳ ಸವಾಲ್

ಬೀದರ್: ನಿಮಗೂ ವಯಸ್ಸಾಗಿದೆ, ನಿಮ್ಮ ಅಧ್ಯಕ್ಷ ಸ್ಥಾನ ಮುಗಿಯುವಷ್ಟರಲ್ಲಿ ದಲಿತ ಸಿಎಂ ಮಾಡಿ ಎಂದು ಮಲ್ಲಿಕಾರ್ಜುನ ಖರ್ಗೆಗೆ ಮಾಜಿ ಡಿಸಿಎಂ ಗೋವಿಂದ ಕಾರಜೋಳ ಸವಾಲು ಹಾಕಿದ್ದಾರೆ.

ಜಿಲ್ಲೆಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದಿನಗೂಲಿ ಕೆಲಸ ಮಾಡುವ ಕಾರ್ಮಿಕರು ಸೇರಿದಂತೆ ಯಾರಿಗೂ ಸಂಬಳ ಬಂದಿಲ್ಲ ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ. ಇಲ್ಲಿಯವರೆಗೂ 14 ಸಾವು, 35 ಸಾವಿರ ಕೋಟಿ ರೂ. ನುಂಗಿ ನೀರು ಕುಡಿದಿದ್ದಾರೆ. ಸಿದ್ದರಾಮಯ್ಯ ಸರ್ಕಾರ ದಲಿತರಿಗೆ ಮೋಸ ಮಾಡುತ್ತಿದೆ. ಸಿದ್ದರಾಮಯ್ಯನವರೇ ಇದೇನಾ ಸಾಮಾಜಿಕ ನ್ಯಾಯ, ಇದು ನ್ಯಾಯ ಅಲ್ಲ, ಅನ್ಯಾಯ. 7 ಲಕ್ಷ ಕೋಟಿ ರೂ. ಬಜೆಟ್ ಮಾಡುತ್ತಿದ್ದೀರಿ, ನೀವು ಜಿಲ್ಲೆಗೆ 60 ಸಾವಿರ ಕೋಟಿ ರೂ. ಅನುದಾನ ಕೊಡಬೇಕು. ಅಹಿಂದ ನಾಯಕರಿಂದ ಮಹಾ ಮೋಸವಾಗಿದೆ. ದಲಿತ ಸಚಿವರಿಗೆ ಮಾನ ಮರ್ಯಾದೆ ಇಲ್ಲ. ರಾಜೀನಾಮೆ ಕೊಟ್ಟು ಹೊರಗೆ ಬರಬೇಕು ಎಂದು ಕಿಡಿಕಾರಿದರು.

ಎರಡು ವರ್ಷದಲ್ಲಿ ಒಂದೇ ಒಂದು ಅಭಿವೃದ್ಧಿ ಕೆಲಸಗಳು ಆಗಿಲ್ಲ. ಖರ್ಗೆಯನ್ನು ಮುಳುಗುವ ಹಡಗಿನ ಅಧ್ಯಕ್ಷ ಮಾಡಿದ್ದಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಸರ್ವಾಧಿಕಾರಿಗಳು. ಖರ್ಗೆಯವರೇ ನಿಮಗೆ ತಾಕತ್ತಿದ್ದರೆ ರಾಜ್ಯದಲ್ಲಿ ದಲಿತ ಸಿಎಂ ಮಾಡಿ. ನಿಮ್ಮ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಕೊಡುತ್ತೇನೆ ಎಂದು ಹೇಳಿದ್ದೀರಿ. ನೀವು ಆದೇಶ ಜಾರಿ ಮಾಡಿ, ಇಲ್ಲಿರುವವರಿಗೆ ದಲಿತರು ಮೇಲೆ ಬರುವುದು ಬೇಕಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಮಧ್ಯವರ್ತಿಗಳ ಮೂಲಕ ಹೋದರಷ್ಟೇ ಸರ್ಕಾರಿ ಕಚೇರಿಗಳಲ್ಲಿ ಕೆಲಸವಾಗುತ್ತೆ...!

• ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಳಲು • ಪರಿಸ್ಥಿತಿ ಸುಧಾರಣೆ ಆಗದಿದ್ದರೆ ನೊಂದ ಜನರೊಂದಿಗೆ ಹೋರಾಟದ ಎಚ್ಚರಿಕೆ

ಮೈಸೂರು, ಮಾ.4(ಎಸ್‌ಬಿಡಿ)– ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿವೆ. ಜಿಲ್ಲಾಧಿಕಾರಿಗಳು ವ್ಯವಸ್ಥೆ ಸರಿಪಡಿಸದಿದ್ದರೆ ನೊಂದವರೊಂದಿಗೆ ಸೇರಿ ಬೃಹತ್ ಹೋರಾಟ ನಡೆಸಬೇಕಾಗುತ್ತದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಎಚ್ಚರಿಸಿದ್ದಾರೆ.




ಸರ್ಕಾರಿ ಕಚೇರಿಗಳ ಕಾರ್ಯವೈಖರಿ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿರುವ ಅವರು, ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ವಿಳಂಬವಾಗುತ್ತಿವೆ. ಯಾವುದೇ ಇಲಾಖೆ ಕಚೇರಿಗಳಲ್ಲೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಸರ್ಕಾರಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಶಿಫಾರಸ್ಸು ಇದ್ದವರಿಗಷ್ಟೇ ತ್ವರಿತವಾಗಿ ಕೆಲಸ ಮಾಡಿಕೊಡುತ್ತಾರೆ. ಇಲ್ಲವೇ ಮಧ್ಯವರ್ತಿಗಳ ಮೂಲಕ ಹೋಗಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಬಡ ಹಾಗೂ ಮಧ್ಯಮ ವರ್ಗದ ಜನ ನೇರವಾಗಿ ಅರ್ಜಿ ನೀಡಿ ಆರು ತಿಂಗಳಾದರೂ ಆಗದ ಕೆಲಸ, ಮಧ್ಯವರ್ತಿಗಳ ಮೂಲಕ ಕೇವಲ ಆರು ದಿನಗಳಲ್ಲೇ ಆಗುತ್ತದೆ. ಅವರಿಗೆ ಹಣ ನೀಡಲಾಗದೆ ಬಡವರು ಅನಿವಾರ್ಯವಾಗಿ ಕಚೇರಿಗೆ ಅಲೆದಾಡುವ ದುಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದ್ದಾರೆ.

ತೆರಿಗೆ ಪಾವತಿಗೂ ತಿಣುಕಾಡಬೇಕು ಎಂದಾದರೆ ವ್ಯವಸ್ಥೆ ಬಗ್ಗೆ ಸಾರ್ವಜನಿಕರಲ್ಲಿ ವಿಶ್ವಾಸ ಮೂಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿರುವ ಅವರು, ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರು ಅನುಭವಿಸುತ್ತಿರುವ ತೊಂದರೆಗಳ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸಬೇಕು. ಸಾರ್ವಜನಿಕರು ನೇರವಾಗಿ ಸಲ್ಲಿಸಿದ ಅರ್ಜಿಗಳು ಹಾಗೂ ಮಧ್ಯವರ್ತಿಗಳ ಮೂಲಕ ಸಲ್ಲಿಕೆಯಾದ ಅರ್ಜಿಗಳ ಇತ್ಯರ್ಥಕ್ಕೆ ಎಷ್ಟು ಸಮಯ ತೆಗೆದುಕೊಂಡಿದ್ದಾರೆ ಎಂಬ ಮಾಹಿತಿ ಪಡೆದು ಸೂಕ್ತ ಕ್ರಮ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲೂ ಅಧಿಕಾರಿ ವರ್ಗ ನಿರ್ಲಕ್ಷ್ಯ ತೋರುತ್ತಿದೆ. ಸೌಲಭ್ಯಗಳ ಬಗ್ಗೆ ಸಮರ್ಪಕ ಮಾಹಿತಿ ನೀಡುವುದಿಲ್ಲ. ಸಾರ್ವಜನಿಕರೇ ಮಾಹಿತಿ ಕೇಳಿದರೂ ಏನಾದರೂ ನೆಪ ಹೇಳಿ ಯಥಾಪ್ರಕಾರ ವಿಳಂಬ ಮಾಡುತ್ತಾರೆ. ಜನಸಾಮಾನ್ಯರ ಕೆಲಸಗಳು ನಿಯಮಾನುಸಾರ ಸಕಾಲದಲ್ಲಿ ಮಾಡಿಕೊಡಲು ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ತಾವು ಕಟ್ಟುನಿಟ್ಟಿನ ಸೂಚನೆ ನೀಡಬೇಕು. ವ್ಯವಸ್ಥೆ ಸರಿಪಡಿಸದಿದ್ದರೆ ನೊಂದ ಸಾರ್ವಜನಿಕರೊಂದಿಗೆ ಬೃಹತ್ ಹೋರಾಟ ನಡೆಸಲು ಸಿದ್ಧರಿದ್ದೇವೆ ಎಂದು ಎಚ್ಚರಿಸಿದ್ದಾರೆ.

ಕೈಬರಹದ 100 ಪುಟಗಳ ಬಜೆಟ್ ಮಂಡನೆ; ಛತ್ತೀಸ್‌ಗಢ ಹಣಕಾಸು ಸಚಿವರ ದಾಖಲೆ!





ರಾಯಪುರ, ಮಾ.4– ಈ ಡಿಜಿಟಲ್ ಯುಗದಲ್ಲೂ, ಅದರಲ್ಲೂ ಛತ್ತೀಸ್‌ಗಢದ ಇತಿಹಾಸದಲ್ಲೇ ಮೊದಲ ಬಾರಿಗೆ, ಹಣಕಾಸು ಸಚಿವ ಒ.ಪಿ. ಚೌಧರಿ ಅವರು ಸ್ವತಃ ತಾವೇ ಕೈಯಿಂದ ಬರೆದ 100 ಪುಟಗಳ ಬಜೆಟ್ ಅನ್ನು ಮಂಡಿಸುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ.

ಕೀಬೋರ್ಡ್‌ನಲ್ಲಿ ಟೈಪ್ ಮಾಡುವುದಕ್ಕಿಂತ ಕೈಯಿಂದ ಬರೆಯುವುದರಿಂದ ಸೃಜನಶೀಲತೆಯನ್ನು ಹೆಚ್ಚಿಸಬಹುದು, ನೆನಪಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ಸಂಶೋಧನೆ ಸೂಚಿಸುತ್ತದೆ. ಇದಕ್ಕೆ ಅನುಗುಣವಾಗಿ, ಬಿಜೆಪಿ ಆಡಳಿತದ ಛತ್ತೀಸ್‌ಗಢದ ಹಣಕಾಸು ಸಚಿವ ಮತ್ತು ಮಾಜಿ ಅಧಿಕಾರಿ ಒ.ಪಿ. ಚೌಧರಿ ಇತ್ತೀಚೆಗೆ ರಾಜ್ಯ ಬಜೆಟ್ ಅನ್ನು ಅಸಾಂಪ್ರದಾಯಿಕವಾಗಿ, ಆದರೆ ಮಹತ್ವದ ರೀತಿಯಲ್ಲಿ ಕೈಯಿಂದ ಬರೆದು ಮಂಡಿಸಿದ್ದಾರೆ.

ಛತ್ತೀಸ್‌ಗಢ ಹಣಕಾಸು ಸಚಿವರ ಈ ವಿಶೇಷ ಪ್ರಯತ್ನ ಸಂಪ್ರದಾಯಕ್ಕೆ ಮರಳುವಿಕೆಯನ್ನು ಸೂಚಿಸುತ್ತದೆ ಮತ್ತು ಆಡಳಿತದಲ್ಲಿ ಸ್ವಂತಿಕೆ ಹಾಗೂ ದೃಢೀಕರಣವನ್ನು ಉತ್ತೇಜಿಸುವ ಪ್ರಜ್ಞಾಪೂರ್ವಕ ಯತ್ನವೆಂದು ಪರಿಗಣಿಸಲಾಗಿದೆ.

ಇದು ಸಂಪ್ರದಾಯಕ್ಕೆ ಮರಳುವಿಕೆ ಮತ್ತು ಸ್ವಂತಿಕೆಯನ್ನು ಉತ್ತೇಜಿಸುವ ಒಂದು ಹೆಜ್ಜೆಯಾಗಿದೆ. ಡಿಜಿಟಲ್ ಯುಗದಲ್ಲಿ ಕೈಬರಹದ ಬಜೆಟ್ ಅನ್ನು ಮಂಡಿಸುವುದು ಒಂದು ವಿಶಿಷ್ಟ ಗುರುತು ಮತ್ತು ಐತಿಹಾಸಿಕ ಮಹತ್ವವನ್ನು ಹೊಂದಿದೆ. ಇದು ದೃಢತೆ ಮತ್ತು ಪಾರದರ್ಶಕತೆಯನ್ನು ಉತ್ತೇಜಿಸುತ್ತದೆ ಎಂದು ಚೌಧರಿ ಬಜೆಟ್ ಮಂಡಿಸಿದ ನಂತರ ತಿಳಿಸಿದ್ದಾರೆ. ಚೌಧರಿ ಅವರು 100 ಪುಟಗಳ ಬಜೆಟ್ ಅನ್ನು ಕೈಯಿಂದ ಬರೆದು ಪೂರ್ಣಗೊಳಿಸಲು ಮೂರು ರಾತ್ರಿ ನಿರಂತರವಾಗಿ ಕೆಲಸ ಮಾಡಿದ್ದಾರೆ ಎಂದು ಹಣಕಾಸು ಸಚಿವರ ಆಪ್ತರೊಬ್ಬರು ತಿಳಿಸಿದ್ದಾರೆ.

2005 ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿದ್ದ ಚೌಧರಿ 2019 ರಲ್ಲಿ ಬಿಜೆಪಿ ಸೇರಲು ರಾಯ್‌ಪುರ ಕಲೆಕ್ಟರ್ ಹುದ್ದೆಗೆ ರಾಜೀನಾಮೆ ನೀಡಿದ್ದರು. ಯುಪಿಎಸ್‌ಸಿ ತಯಾರಿಯ ಸಮಯದಲ್ಲಿ ಅವರು ಅಧ್ಯಯನ ಮಾಡಿದ ಹಿಂದಿ ವಿಷಯದ ಮೇಲಿನ ಅವರ ಬಲವಾದ ಹಿಡಿತವು ಅವರ ಆದ್ಯತೆಯ ಶೈಲಿಯಲ್ಲಿ ಬಜೆಟ್ ಬರೆಯಲು ಸಹಾಯ ಮಾಡಿದೆ.

ಜೆಡಿಎಸ್ ಮುಖ್ಯ ಸಚೇತಕರಾಗಿ ಜಿ.ಡಿ.ಹರೀಶ್‌ಗೌಡ

ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸುವ ವಿಶ್ವಾಸ



ಮೈಸೂರು, ಮಾ.4(ಪಿಎಂ)– ಜೆಡಿಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರಾಗಿ (ಚೀಫ್ ವಿಪ್) ಹುಣಸೂರು ಶಾಸಕರಾದ ಜಿ.ಡಿ.ಹರೀಶ್‌ಗೌಡ ಅವರನ್ನು ನೇಮಕ ಮಾಡಲಾಗಿದೆ.

ಈ ಸ್ಥಾನಕ್ಕೆ ಜಿ.ಡಿ.ಹರೀಶ್ ಗೌಡರ ನೇಮಕಾತಿ ಸಂಬಂಧ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಅವರಿಗೆ ಸೋಮವಾರ ಪತ್ರ ಮುಖೇನ ಮಾಹಿತಿ ನೀಡಿದ್ದರು. ಅಂತೆಯೇ ಮಂಗಳವಾರ ಅಧಿವೇಶನದಲ್ಲಿ ಸಭಾಧ್ಯಕ್ಷರು ಸದರಿ ನೇಮಕಾತಿ ಪತ್ರ ಓದಿದರಲ್ಲದೇ, ಜಿ.ಡಿ.ಹರೀಶ್‌ಗೌಡರ ಅಭಿನಂದಿಸಿದರು.

ತಮ್ಮ ನೇಮಕ ಸಂಬಂಧ ಮಾಧ್ಯಮದೊಂದಿಗೆ ಮಾತನಾಡಿದ ಜಿ.ಡಿ.ಹರೀಶ್‌ಗೌಡ, ಪಕ್ಷ ನನ್ನ ಮೇಲೆ ಅತ್ಯಂತ ವಿಶ್ವಾಸದೊಂದಿಗೆ ಗುರುತರ ಜವಾಬ್ದಾರಿ ನೀಡಿದೆ. ಈ ಹೊಣೆಗಾರಿಕೆಯನ್ನು ಅತ್ಯಂತ ಬದ್ಧತೆಯಿಂದ ನಿರ್ವಹಿಸಲಿದ್ದೇನೆ. ಪಕ್ಷದ ಹಿರಿಯರ ಮಾರ್ಗದರ್ಶನ ಹಾಗೂ ನಿರ್ದೇಶನದಂತೆ ಶಾಸಕರನ್ನು ಒಗ್ಗಟ್ಟಾಗಿ ಕರೆದೊಯ್ಯುತ್ತೇನೆ. ಪಕ್ಷದ ಶಿಸ್ತು ಕಾಪಾಡಿಕೊಳ್ಳುವುದು ಹಾಗೂ ಅಧಿವೇಶನದಲ್ಲಿ ಪಕ್ಷದ ನಿಲುವಿಗೆ ಕಟಿ ಬದ್ಧವಾಗಿ ಕಾರ್ಯ ನಿರ್ವಹಿಸುವುದು ಪಕ್ಷದ ಮುಖ್ಯಸಚೇತಕನ ಮುಖ್ಯ ಕರ್ತವ್ಯಗಳಾಗಿದ್ದು, ಅವುಗಳನ್ನು ಜವಾಬ್ದಾರಿಯುತ ಹಾಗೂ ಪ್ರಾಮಾಣಿಕವಾಗಿ ನಿರ್ವಹಿಸಲಿದ್ದೇನೆ ಎಂದು ತಿಳಿಸಿದರು.

ಪಕ್ಷದ ನಾಯಕರು ಸೂಚಿಸಿದಂತೆ ಶಾಸನಸಭೆಗೆ ಹಾಜರಾಗುವುದು ಮತ್ತು ಮತ ಚಲಾಯಿಸುವ ಸಂದರ್ಭದಲ್ಲಿ ಪಕ್ಷದ ಆದೇಶ ಪಾಲನೆಯಲ್ಲಿ ಚ್ಯುತಿ ಬಾರದಂತೆ ನೋಡಿಕೊಳ್ಳುವುದು ಮುಖ್ಯ ಸಚೇತಕನಾಗಿ ನನ್ನ ಕರ್ತವ್ಯ. ಇದನ್ನು ಯಶಸ್ವಿಯಾಗಿ ನಿರ್ವಹಿಸಲಿದ್ದೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವರಿಷ್ಠರಿಗೆ ಕೃತಜ್ಞತೆ: ನನ್ನನ್ನು ಪಕ್ಷದ ಮುಖ್ಯ ಸಚೇತಕನ ಸ್ಥಾನಕ್ಕೆ ಆಯ್ಕೆ ಮಾಡಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರಿಗೆ ಕೃತಜ್ಞತೆ ಅರ್ಪಿಸುತ್ತೇನೆ ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ಇದೇ ವೇಳೆ ಹೇಳಿದರು.

ಫೈನಲ್‌ಗೆ ಲಗ್ಗೆ ಇಟ್ಟ ಟೀಂ ಇಂಡಿಯಾಗೆ ಅಮಿತ್ ಶಾ ಸೇರಿದಂತೆ ಗಣ್ಯರಿಂದ ಅಭಿನಂದನೆ

ಹೊಸದಿಲ್ಲಿ: ಐಸಿಸಿ ಚಾಂಪಿಯನ್ಸ್ ಟ್ರೋಫಿ 2025ರ ಆಸ್ಟ್ರೇಲಿಯಾ ವಿರುದ್ಧದ ಸೆಮಿಫೈನಲ್ ಪಂದ್ಯ ಗೆದ್ದು ಫೈನಲ್ ಪ್ರವೇಶಿಸಿರುವ ಟೀಂ ಇಂಡಿಯಾಗೆ ಎಲ್ಲೆಡೆಯಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಸೇರಿದಂತೆ ಹಲವು ಗಣ್ಯರು ಟೀಂ ಇಂಡಿಯಾಗೆ ಅಭಿನಂದನೆ ಸಲ್ಲಿಸಿದ್ದಾರೆ.

'ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ಕ್ರಿಕೆಟ್ ತಂಡದ ಕೌಶಲ್ಯ ಮತ್ತು ಬದ್ಧತೆಯ ಅದ್ಭುತ ಪ್ರದರ್ಶನಕ್ಕೆ ನಾವಿಂದು ಸಾಕ್ಷಿಯಾಗಿದ್ದೇವೆ. ಅಬ್ಬರದೊಂದಿಗೆ ಟೀಂ ಇಂಡಿಯಾ ಫೈನಲ್‌ಗೆ ಲಗ್ಗೆ ಇಟ್ಟಿದ್ದು, ಐಸಿಸಿ ಚಾಂಪಿಯನ್ಸ್ ಟ್ರೋಫಿ ಸೆಮಿ ಫೈನಲ್‌ನಲ್ಲಿ ರೋಚಕ ಜಯ ಸಾಧಿಸಿದ ಟೀಂ ಇಂಡಿಯಾಗೆ ಅಭಿನಂದನೆಗಳು. ನೀವು ದೇಶಕ್ಕೆ ಹೆಮ್ಮೆ ತಂದಿದ್ದೀರಿ. ಫೈನಲ್ ಪಂದ್ಯಕ್ಕೆ ಶುಭಾಶಯಗಳು..'' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಟ್ವೀಟ್ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಕೂಡ ಆಸ್ಟ್ರೇಲಿಯಾ ವಿರುದ್ಧದ ಭಾರತದ ಗೆಲುವಿಗೆ ಅಭಿನಂದನೆ ಸಲ್ಲಿಸಿದ್ದು, 'ಭಾರತ ಕ್ರಿಕೆಟ್ ತಂಡದ ಆಟಗಾರರ ಬದ್ಧತೆ ನಮಗೆಲ್ಲಾ ಸ್ಫೂರ್ತಿ..' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಅದೇ ರೀತಿ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಕೂಡ ಭಾರತ ಕ್ರಿಕೆಟ್ ತಂಡವನ್ನು ಅಭಿನಂದಿಸಿದ್ದು, 'ಚಾಂಪಿಯನ್ಸ್ ಟ್ರೋಫಿಯ ಫೈನಲ್‌ಗೆ ಲಗ್ಗೆ ಇಟ್ಟಿರುವ ಟೀಂ ಇಂಡಿಯಾಗೆ ಅಭಿನಂದನೆ' ಎಂದು ಟ್ವೀಟ್ ಮಾಡಿದ್ದಾರೆ.

ದೇಶಾದ್ಯಂತ ಸಂಭ್ರಮಾಚರಣೆ: ಐಸಿಸಿ ಚಾಂಪಿಯನ್ಸ್ ಟ್ರೋಫಿ ಸೆಮಿಫೈನಲ್ ಪಂದ್ಯದಲ್ಲಿ ಟೀಂ ಇಂಡಿಯಾ ಆಸ್ಟ್ರೇಲಿಯಾ ತಂಡವನ್ನು ಮಣಿಸುತ್ತಿದ್ದಂತೆ ಭಾರತದಲ್ಲಿ ಕ್ರಿಕೆಟ್ ಪ್ರೇಮಿಗಳ ಸಂಭ್ರಮಾಚರಣೆ ಮುಗಿಲು ಮುಟ್ಟಿದೆ. ಕರ್ನಾಟಕ ರಾಜಧಾನಿ ಬೆಂಗಳೂರು, ರಾಷ್ಟ್ರ ರಾಜಧಾನಿ ಹೊಸದಿಲ್ಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ ರಾಜಧಾನಿ ಕೋಲ್ಕತ್ತಾ ಸೇರಿದಂತೆ ದೇಶದ ಮೂಲೆ ಮೂಲೆಯಲ್ಲಿ, ಭಾರತ ತಂಡದ ಗೆಲುವನ್ನು ಸಂಭ್ರಮಿಸಲಾಗುತ್ತಿದೆ.

ಕೈಯಲ್ಲಿ ಭಾರತದ ತ್ರಿವರ್ಣ ಧ್ವಜ ಹಿಡಿದು ರಸ್ತೆಗಿಳಿದಿರುವ ಕ್ರಿಕೆಟ್ ಪ್ರೇಮಿಗಳು, ಪಟಾಕಿ ಸಿಡಿಸಿ ಟೀಂ ಇಂಡಿಯಾ ಗೆಲುವನ್ನು ಸಂಭ್ರಮಿಸಿದರು. ಇದೇ ವೇಳೆ ಫೈನಲ್ ಪಂದ್ಯದಲ್ಲೂ ಭಾರತ ತಂಡ ಗೆಲುವು ಸಾಧಿಸಲಿದೆ ಎಂದು ಕ್ರೀಡಾಭಿಮಾನಿಗಳು ಭರವಸೆ ವ್ಯಕ್ತಪಡಿಸಿದರು.

ಅಂಬಾನಿಗೆ ಕೇಂದ್ರ ಸರ್ಕಾರದ ಶಾಕ್

24 ಸಾವಿರ ಕೋಟಿ ರೂ ಪಾವತಿಸಲು ನೋಟೀಸ್!



ಮುಂಬೈ, ಮಾ.4– ಅಂಬಾನಿ ಒಡೆತನದ ರಿಲಾಯನ್ಸ್ ಗೆ ಕೇಂದ್ರ ಸರ್ಕಾರ ಶಾಕ್ ನೀಡಿದ್ದು, 24 ಸಾವಿರ ಕೋಟಿ ರೂಪಾಯಿ ಪಾವತಿಸಲು ಸೂಚಿಸಿ ನೋಟೀಸ್ ಜಾರಿಗೊಳಿಸಿದೆ.

ಸರ್ಕಾರಿ ಸ್ವಾಮ್ಯದ ONGCಯ ನೆರೆಯ ಬ್ಲಾಕ್‌ನಿಂದ ವಲಸೆ ಹೋಗಿರಬಹುದು ಎಂದು ಹೇಳಲಾದ ನೈಸರ್ಗಿಕ ಅನಿಲವನ್ನು ಉತ್ಪಾದಿಸಿ ಮಾರಾಟ ಮಾಡುವುದರಿಂದ ಬಂದ ಲಾಭಕ್ಕಾಗಿ ಸರ್ಕಾರ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಅದರ ಪಾಲುದಾರರ ಮೇಲೆ 2.81 ಬಿಲಿಯನ್ ಯುಎಸ್ ಡಾಲರ್ (ಸುಮಾರು 24,500 ಕೋಟಿ ರೂ.) ಡಿಮ್ಯಾಂಡ್ ನೋಟಿಸ್ ಜಾರಿ ಮಾಡಿದೆ.

ಪಕ್ಕದ ಕ್ಷೇತ್ರಗಳಿಂದ ಹೋಗಿರಬಹುದು ಎಂದು ಹೇಳಲಾದ ಅನಿಲವನ್ನು ಉತ್ಪಾದಿಸಿ ಮಾರಾಟ ಮಾಡಿದ್ದಕ್ಕಾಗಿ ಯಾವುದೇ ಪರಿಹಾರವನ್ನು ಪಾವತಿಸಲು ಇಬ್ಬರೂ ಜವಾಬ್ದಾರರಲ್ಲ ಎಂದು ಅಂತರರಾಷ್ಟ್ರೀಯ ಮಧ್ಯಸ್ಥಿಕೆ ನ್ಯಾಯಮಂಡಳಿ ತೀರ್ಪನ್ನು ಫೆಬ್ರವರಿ 14 ರಂದು ದೆಹಲಿ ಹೈಕೋರ್ಟ್ ರದ್ದುಗೊಳಿಸಿದ ನಂತರ ಈ ಕ್ರಮಕ್ಕೆ ಕೇಂದ್ರ ಸರ್ಕಾರ ಮುಂದಾಗಿದೆ.

ವಿಭಾಗೀಯ ಪೀಠದ ತೀರ್ಪಿನ ಪರಿಣಾಮವಾಗಿ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ PSC ಗುತ್ತಿಗೆದಾರರಾದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, BP ಎಕ್ಸ್‌ಪ್ಲೋರೇಶನ್ (ಆಲ್ಫಾ) ಲಿಮಿಟೆಡ್ ಮತ್ತು NIKO (NECO) ಲಿಮಿಟೆಡ್ ಮೇಲೆ 2.81 ಬಿಲಿಯನ್ ಯುಎಸ್ ಡಾಲರ್ ಬೇಡಿಕೆಯನ್ನು ಎತ್ತಿದೆ ಎಂದು ರಿಲಯನ್ಸ್ ಸ್ಟಾಕ್ ಎಕ್ಸ್‌ಚೇಂಜ್ ಫೈಲಿಂಗ್‌ನಲ್ಲಿ ತಿಳಿಸಿದೆ. ಮೂಲತಃ, ರಿಲಯನ್ಸ್ ಕೃಷ್ಣ ಗೋದಾವರಿ ಜಲಾನಯನ ಪ್ರದೇಶದ KG-DWN-98/3 ಅಥವಾ KG-D6ನಲ್ಲಿ ಶೇಕಡಾ 60ರಷ್ಟು ಷೇರುಗಳನ್ನು ಹೊಂದಿದ್ದರೆ, BP ಶೇಕಡಾ 30ರಷ್ಟು ಮತ್ತು ಕೆನಡಾದ ಸಂಸ್ಥೆ ನಿಕೊ ಉಳಿದ ಶೇಕಡಾ 10ರಷ್ಟು ಷೇರುಗಳನ್ನು ಹೊಂದಿತ್ತು.

ತರುವಾಯ, ರಿಲಯನ್ಸ್ ಮತ್ತು ಬಿಪಿ ಉತ್ಪಾದಾ ಹಂಚಿಕೆ ಒಪ್ಪಂದದಲ್ಲಿ (ಪಿಎಸ್‌ಸಿ) ನಿಕೊ ಅವರ ಷೇರುಗಳನ್ನು ವಹಿಸಿಕೊಂಡವು ಮತ್ತು ಈಗ ಕ್ರಮವಾಗಿ ಶೇಕಡಾ 66.66 ಮತ್ತು 33.33ರಷ್ಟು ಪಾಲನ್ನು ಹೊಂದಿವೆ. 2016ರಲ್ಲಿ ಸರ್ಕಾರ ಪಕ್ಕದ ಒಎನ್‌ಜಿಸಿ ಕ್ಷೇತ್ರಗಳಿಂದ ತನ್ನ ಬ್ಲಾಕ್ ಕೆಜಿ–ಡಿ6ಗೆ ಸ್ಥಳಾಂತರಗೊಂಡ ಅನಿಲದ ಪ್ರಮಾಣಕ್ಕಾಗಿ ರಿಲಯನ್ಸ್ ಮತ್ತು ಅದರ ಪಾಲುದಾರರಿಂದ 1.55 ಬಿಲಿಯನ್ ಯುಎಸ್ ಡಾಲರ್‌ಗಳನ್ನು ಕೋರಿತ್ತು. ರಿಲಯನ್ಸ್ ಆರ್ಬಿಟ್ರಲ್ ಟ್ರಿಬ್ಯೂನಲ್ ಮುಂದೆ ಈ ಹಕ್ಕುಗಳನ್ನು ಪ್ರಶ್ನಿಸಿತು. ಅದು ಜುಲೈ 2018 ರಲ್ಲಿ ಯಾವುದೇ ಪರಿಹಾರವನ್ನು ಪಾವತಿಸಲು ಬದ್ಧವಾಗಿಲ್ಲ ಎಂದು ತೀರ್ಪು ಪ್ರಕಟಿಸಿತ್ತು.

PUBLIC NOTICE

We are negotiating **SMT Geethamani. P. G W/o Late. P. M. Lokesh,** aged about 48 years residing at **# 272/5C, 7th Cross, 7th Main, Vijayanagara 2nd Stage, Mysore Taluk, Mysore District-570017.** Being the Successor to the Possession of the above mention confirm intend to use the permit and accordingly. I have applied to the appropriate authority/Regional Transport office Regional Transport authority mysore for the Transfer of permit in my name is hereby informed for the Knowledge of Public that **Smt. Geethamani. PG** held stage arriage permit No.

1. 19/1999-2000 Validity 20-03-2025

Issued by R.T.O Mysore any person having any claim of objection in this regional should with in 15 days from the Publication of the notice of regional Transport office/regional Transport authority Mysore.

Date: 04-03-2025, Vijayanagara, Mysore

Sd/- Geethamani. P.G W/o Late. P. M. Lokesh #272/5C, 7th Cross, 7th Main, Vijayanagara 2nd Stage, Mysore Taluk, Mysore District-570017.

Sd/- **N.Kumarswamy**
Advocate, KAR 1197/93
Main Road, Srirangapatna-571438.
Mob: 9242115410

PUBLIC NOTICE

This is to inform the general public that my client intends to purchase the below mentioned Schedule Property, from the property owner Mr. R. Ravi Kumar, son of Late. Ramaiah, Residing at No. 4595, 5th Main, 7th Cross, Vijayanagar 2nd Stage, Mysore – 570017, Karnataka, India.

Any person having or claiming any right, title, estate or interest by waiver, inheritance, share, sale, mortgage, transfer, lease, tenancy, lien, charge, trust, maintenance, easement, gift, devise bequest, exchange, pre-emption, possession or encumbrance or otherwise howsoever into or upon the Schedule Property described herein below are called upon to intimate the same in writing to the undersigned at the below given address along with all the documents relating to such claim within 7 days from the date of publication of this notice, failing which, any such claim of any party shall be deemed to have been waived for all legal practical purposes and shall not be entertained after such period and my client will proceed with the proposed purchase of the Scheduled Property on the basis that there are no claims whatsoever with respect thereto.

SCHEDULE PROPERTY

All that piece and parcel of the immovable agricultural land bearing **Survey No. 232/2,** measuring **02 Acres,** Situated at **Kalasthawadi Village, Kasaba Hobli, Mysore Taluk, Mysore** District and bounded on the : **East By:** Land bearing Sy No. 223 & 233; **West By:** Road; North By: Land bearing Sy No. 232/1; South By: Land bearing Sy No. 234.

Date: 04.03.2025

Place: Mysuru

DWAITHA LAW CHAMBERS

MANOJ B V, Advocate

No. 28/A, Nrupatunga Road, Kuvempunagar 2nd Stage, Mysuru – 570023, Karnataka, India

Mobile – 9945104646

Mail ID – manojbv8@gmail.com

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಬೆಂಗಳೂರು, ಸಿಂಗಸಂದ್ರ, ಎ.ಇ.ಸಿ.–ಎಸ್ ಲೇಔಟ್, ಸೀಮೆಂಟ್ ಗೋಡೌನ್, ಬಿ ಬ್ಲಾಕ್, ಇನ್ ಫ್ರಂಟ್ ಆಫ್ ಚೆಟ್ಟಿನಾಡು, 3ನೇ ರಸ್ತೆ, 10ನೇ ಮೇನ್, ಮನೆ ನಂ. 602 ಹಾಗೂ ಮೈಸೂರು ಜಿಲ್ಲೆ, ರಾಜೀವನಗರ 2ನೇ ಸ್ಟೇಜ್, ಫ್ಲೋರ್ ಮಿಲ್ ರಸ್ತೆ, ನಿಯರ್ ಗುಪ್ತ ಸ್ಟೋರ್, ಮನೆ ನಂ. 1780 ರಲ್ಲಿ ವಾಸವಾಗಿರುವ ಸಯದ್ ಬೇಗಂ ಹಾಗೂ ಸರಯದ್ ರೆಹಮತುಲ್ಲಾ ಇವರುಗಳ ಸೂಚನೆ ಮೇರೆಗೆ, ಮೇಲ್ಕಂಡ ಇಲ್ಲಿನ ವಸತಿ ಹಾಗೂ ನಿವೇಶನದಾರರುಗಳ ಗಮನಕ್ಕೆ.

1. ನಮ್ಮ ಕಕ್ಷಿದಾರರು ಮೈಸೂರು ತಾಲ್ಲೂಕು, ವರುಣ ಹೋಬಳಿ, ಹರೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 631 ಹೊಸ ನಂ.351 ಬ್ಲಾಕ್ ನಂ. 39, ವಿಸ್ತೀರ್ಣ 25 ಎಕರೆ 29 ಗುಂಟೆ ಭೂಮಿಗೆ ಸಂಬಂಧಪಟ್ಟಂತೆ ಶ್ರೀ ವಿನೋದ್ ಕುಮಾರ್ ಸನ್ ಆಫ್ ಬಿ. ಹರಕ್ ಚಂದ್ ರವರ ವಿರುದ್ಧ ಮೈಸೂರಿನ ಗೌರವಾನ್ವಿತ 6ನೇ ಹೆಚ್ಚುವರಿ (ಕಿರಿಯ ವಿಭಾಗ) ರಲ್ಲಿ ಅಸಲು ದಾವ 268/2025 ರಲ್ಲಿ ದಾಖಲು ಮಾಡಿದ್ದು ಸದರಿ ದಾವೆಯಲ್ಲಿ ಘೋಷಣೆಗೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಕೇಳಿ ದಾವೆ ಸಲ್ಲಿಸಿರುತ್ತಾರೆ.

2. ಸದರಿ ಪ್ರಕರಣ ಇತ್ಯರ್ಥವಾಗುವವರೆಗೂ ಸಾರ್ವಜನಿಕರು ಸದರಿ ಶ್ರೀ ವಿನೋದ್ ಕುಮಾರ್ ಸನ್ ಆಫ್ ಬಿ. ಹರಕ್ ಚಂದ್ ರವರ ಕೂಡ ಯಾವುದೇ ಕ್ರಯ, ವರ್ಗಾವಣೆ, ಹಕ್ಕು ಬದಲಾವಣೆ ಯಾವುದನ್ನು ಮಾಡಬಾರದು ಎಂಬುದಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ.

ಷೆಡ್ಯೂಲ್ ವಿವರ : ಮೈಸೂರು ತಾಲ್ಲೂಕು, ವರುಣ ಹೋಬಳಿ, ಹರೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.631 ಹೊಸ ನಂ. 351 ಬ್ಲಾಕ್ ನಂ. 39, ವಿಸ್ತೀರ್ಣ 25 ಎಕರೆ 29 ಗುಂಟೆಯ ಚೆಕ್ಕುಬಂಧಿ : ಪೂರ್ವಕ್ಕೆ : ಪಿ.ಡಬ್ಲ್ಯೂ.ಡಿ. ನಾಲೆ, ಪಶ್ಚಿಮಕ್ಕೆ : ಸರ್ವೆ ನಂ. 631, ಬ್ಲಾಕ್ ನಂ. 40ರ ಸ್ವತ್ತು, ಉತ್ತರಕ್ಕೆ : ವಿ.ಸಿ. ನಾಲೆ ಪಕ್ಕಕ್ಕೆ ಲಕ್ಷ್ಮಿಪುರ ಕಾವಲ್ ನಾಲೆ ರೋಡ್, ದಕ್ಷಿಣಕ್ಕೆ : ಪ್ರೈವೇಟ್ ಪ್ರಾಪರ್ಟಿ

Sd/- CP Vidyalakshmi. B.A.LL.B,
N. Venkatesh BA LLB
ADVOCATE,
Office Address: Room No. 3,
Sakamma Complex, Santhepet,
Mysore - 570 024
Mob: 98440 29499, 95916 58953 ,
Res: 0821-2494929

ಸಿಎಫ್‌ಟಿಆರ್‌ಐ ಶಾಲೆ, ಮೈಸೂರು

(ಆಂಗ್ಲ ಮಾಧ್ಯಮ)

ಸಿಎಫ್‌ಟಿಆರ್‌ಐ ಆವರಣ, ಯಾದವಗಿರಿ, ಮೈಸೂರು–570 020

(ಸಿ ಬಿ ಎಸ್ ಇ, ನವದೆಹಲಿಗೆ ಸಂಯೋಜಿತವಾಗಿದೆ – ಸಂಯೋಜಿತ ಸಂಖ್ಯೆ–830764) ದಿ:05.03.2025

2025–2026ನೇ ಸಾಲಿಗೆ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ಖಾಲಿ ಹುದ್ದೆಗಳು	ಅನುಭವ
1	ಆಂಗ್ಲ ಶಿಕ್ಷಕರು	ಬಿ.ಎ/ಎಂ.ಎ., ಬಿ.ಎಡ್., ಜೊತೆಗೆ ಕನ್ನಡ ಭಾಷೆ ಪ್ರಮುಖ ವಿಷಯವಾಗಿರಬೇಕು.	01	ಸಿ ಬಿ ಎಸ್ ಇ ಶಾಲೆಯಲ್ಲಿ 3 ವರ್ಷದ ಬೋಧನಾ ಅನುಭವ ಇರುವವರಿಗೆ ಆದ್ಯತೆ
2	ಕನ್ನಡ ಶಿಕ್ಷಕರು	ಬಿ.ಎ/ಎಂ.ಎ., ಬಿ.ಎಡ್., ಜೊತೆಗೆ ಕನ್ನಡ ಭಾಷೆ ಪ್ರಮುಖ ವಿಷಯವಾಗಿರಬೇಕು.	01	ಸಿ ಬಿ ಎಸ್ ಇ ಶಾಲೆಯಲ್ಲಿ 3 ವರ್ಷದ ಬೋಧನಾ ಅನುಭವ ಇರುವವರಿಗೆ ಆದ್ಯತೆ
3	ದೈಹಿಕ ಶಿಕ್ಷಣ ಶಿಕ್ಷಕರು (ಹೆಣ್ಣು)	ಯಾವುದಾದರು ಪದವಿ ಜೊತೆಗೆ ಬಿ.ಪಿ.ಎಡ್./ ಎಂ.ಪಿ.ಎಡ್	01	ಸಿ ಬಿ ಎಸ್ ಇ ಶಾಲೆಯಲ್ಲಿ 3 ವರ್ಷದ ಬೋಧನಾ ಅನುಭವ ಇರುವವರಿಗೆ ಆದ್ಯತೆ
4	ಕಂಪ್ಯೂಟರ್ ವಿಜ್ಞಾನ ಶಿಕ್ಷಕರು	ಬಿ.ಎಸ್ಸಿ., ಕಂಪ್ಯೂಟರ್ ವಿಜ್ಞಾನ, /ಬಿಸಿಎ/ಎಂಸಿಎ ಜೊತೆಗೆ "ಎಐ" ನಲ್ಲಿ ಜ್ಞಾನವಿರಬೇಕು	01	ಸಿ ಬಿ ಎಸ್ ಇ ಶಾಲೆಯಲ್ಲಿ 3 ವರ್ಷದ ಬೋಧನಾ ಅನುಭವ ಇರುವವರಿಗೆ ಆದ್ಯತೆ
5	ಗ್ರಂಥಪಾಲಕರು	ಪದವಿಯೊಂದಿಗೆ ಬಿ.ಲಿಬ್ ವಿಜ್ಞಾನ / ಎಂ.ಲಿಬ್ ವಿಜ್ಞಾನ ಪದವಿಗಳು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ	01	ಸಿ ಬಿ ಎಸ್ ಇ ಶಾಲೆಯಲ್ಲಿ 3 ವರ್ಷದ ಅನುಭವ ಇರುವವರಿಗೆ ಆದ್ಯತೆ

ಹೆಚ್ಚಿನ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರುವ ಅಭ್ಯರ್ಥಿಗಳು, ವಿಷಯ ಸಾಮರ್ಥ್ಯ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅರ್ಜಿಯ ಜೊತೆಗೆ ಬಯೋಡೇಟಾ, ಇತ್ತೀಚಿನ ಪಾಸ್ ಫೋಟೋ ಅಳತೆಯ ಭಾವಚಿತ್ರ ಮತ್ತು ಸ್ವಯಂ ದೃಢೀಕೃತ ಸಂಬಂಧಿತ ಪ್ರಮಾಣ ಪತ್ರಗಳನ್ನು ಈ ಜಾಹೀರಾತು ಪ್ರಕಟವಾದ ದಿನಾಂಕದಿಂದ 10 ದಿನಗಳ ಒಳಗಾಗಿ ಸಲ್ಲಿಸಬೇಕಾದ ವಿಳಾಸ ಗೌರವ ಕಾರ್ಯದರ್ಶಿಗಳು, ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಸಿಎಫ್‌ಟಿಆರ್‌ಐ ಶಾಲೆ, ಸಿಎಫ್‌ಟಿಆರ್‌ಐ ಆವರಣ, ಚೆಲುವಾಂಬ ಉದ್ಯಾನವನದ ಎದುರು, ಯಾದವಗಿರಿ, ಮೈಸೂರು–570020.

ಸಹಿ/– ಕಾರ್ಯದರ್ಶಿಗಳು, ಸಿಎಫ್‌ಟಿಆರ್‌ಐ ವಿದ್ಯಾಸಂಸ್ಥೆ, ಮೈಸೂರು.

ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು

ಸಿಎಫ್‌ಟಿಆರ್‌ಐ ಶಾಲೆ

ಸಿಎಫ್‌ಟಿಆರ್‌ಐ ಆವರಣ, ಯಾದವಗಿರಿ, ಮೈಸೂರು–570 020

ಫೋನ್: 0821-2515381

ಟೆಂಡರ್‌ಗಾಗಿ ಆಹ್ವಾನ

ದಿನಾಂಕ:–05.03.2025

"ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆಯ ಶಾಲಾ ಕಟ್ಟಡದ ತಾರಸಿಗೆ ಎಪಿಪಿ ಮೆಂಬ್‌ರೇನ್ ವಾಟರ್ ಪ್ರೂಫ್ ಟ್ರೀಟ್‌ಮೆಂಟ್ ಒದಗಿಸುವ ಬಗ್ಗೆ" ಕೇಂದ್ರೀಯ / ರಾಜ್ಯ ಲೋಕೋಪಯೋಗಿ ಸಂಸ್ಥೆಗಳು/ ರೈಲ್ವೆ / MES / ಅಂಚೆ ಮತ್ತು ಟೆಲಿಗ್ರಾಫ್, ಅರೆ ಸರ್ಕಾರಿ / ಸರ್ಕಾರಿ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ ಸೂಕ್ತ ವರ್ಗದ ನೋಂದಾಯಿತ ಸಂಸ್ಥೆಗಳು ಅಥವಾ ಗುತ್ತಿಗೆದಾರರಿಂದ ಕೆಲಸಕ್ಕಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಸಿಎಫ್‌ಟಿಆರ್‌ಐ ಶಾಲೆಯ ಪ್ರಾಂಶುಪಾಲರಿಂದ ದಿನಾಂಕ:–05.03.2025 ರಿಂದ 17.03.2025 ರವರೆಗೆ ಕಛೇರಿ ಸಮಯದಲ್ಲಿ ಬೆಳಗ್ಗೆ 10.00 ರಿಂದ ಮಧ್ಯಾಹ್ನ 3.30 ರವರೆಗೆ ಸಂಗ್ರಹಿಸಬಹುದು. ಟೆಂಡರ್ ದಾಖಲೆಗಳನ್ನು ದಿನಾಂಕ: 09.03.2025 ಮತ್ತು 16.03.2025 (ಭಾನುವಾರ) ನೀಡಲಾಗುವುದಿಲ್ಲ ಹಾಗೂ ಸ್ವೀಕರಿಸಲಾಗುವುದಿಲ್ಲ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:–17.03.2025 ಸಂಜೆ 4.00 ಗಂಟೆಯವರೆಗೆ.

ಟೆಂಡರ್ ತೆರೆಯುವ ದಿನಾಂಕ:– 18.03.2025 ಬೆಳಗ್ಗೆ 10.30 ಗಂಟೆಗೆ.

ಸಹಿ/– ಗೌರವ ಕಾರ್ಯದರ್ಶಿಗಳು,
ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಮೈಸೂರು